ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 10 ಶುಕ್ರವಾರ 2022

ಸಂಪುಟ: 43 ಸಂಚಿಕೆ: 55 ಪುಟಗಳು: 10

₹4


ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಶೀಘ್ರವೇ ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆ

- ಮೈಸೂರಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ವಿಶ್ವಾಸ
- ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಕೇಂದ್ರ ಸಚಿವರು



ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಸಂಸದ ಪ್ರತಾಪ್‌ಸಿಂಹ ಇನ್ನಿತರರಿದ್ದಾರೆ.

ಮೈಸೂರು, ಜೂ.9(ಆರ್‌ಕೆಬಿ)– ಕೇಂದ್ರ ಸರ್ಕಾರ ಶೀಘ್ರದಲ್ಲೇ ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆ ಉದ್ದೇಶ ಹೊಂದಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳನ್ನು ಭೇಟಿ ಮಾಡಿ, ಅವರ ಆಶೀರ್ವಾದ ಪಡೆದ ಬಳಿಕ ಮಾತನಾಡಿದರು. ಶೇ.10ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆಯಿಂದ ಭಾರತವು ಇಂಧನ ಆಮದುಗಳಲ್ಲಿ ಸಾವಿರಾರು ಕೋಟಿ ರೂ.ಗಳನ್ನು ಉಳಿಸಬಹುದು. ಇದರಿಂದ ರೈತರಿಗೂ ಸಾಕಷ್ಟು ಪ್ರಯೋಜನವಾಗಲಿದೆ. ಪರಿಸರ ಮಾಲಿನ್ಯ ತಡೆಗಟ್ಟಬಹುದಾಗಿದೆ. ಇದರ ಬಗ್ಗೆ ಹೆಚ್ಚು ಅಧ್ಯಯನ ನಡೆಸಲಾಗುತ್ತಿದೆ ಎಂದು ಹೇಳಿದರು.

ಪ್ರಧಾನಮಂತ್ರಿಯವರ ಆತ್ಮನಿರ್ಭರ ಯೋಜನೆ ಕುರಿತು ಪ್ರಸ್ತಾಪಿಸಿದ ಅವರು, ಈ ಮೂಲಕ ಸ್ವದೇಶಿ ಉತ್ಪನ್ನಗಳಿಗೆ ಉತ್ತೇಜನ ನೀಡಲಾಗುವುದು ಎಂದು ತಿಳಿಸಿದರು.

ಮೈಸೂರು ಸುಂದರ ನಗರ: ಗಡ್ಕರಿ ಬಣ್ಣನೆ: ಮೈಸೂರು ಬಲು ಸುಂದರ ನಗರ. ಇದನ್ನು ಹೀಗೇ ಉಳಿಸಿ, ಬೆಳೆಸಿಕೊಳ್ಳಬೇಕು ಎಂದು ಆಶಿಸಿದರು. ಸುತ್ತೂರು ಮಠದಲ್ಲಿನ ಶಿಕ್ಷಣ, ಆರೋಗ್ಯ ಸೇವೆ ಬಗ್ಗೆ ಮಾಹಿತಿ ಪಡೆದ ಅವರು ಮಠದ ಜನಪರ ಸೇವಾ ಕಾರ್ಯವನ್ನು ಪ್ರಶಂಸಿಸಿದರು. ಈ ಸಂದರ್ಭದಲ್ಲಿ ಸಂಸದ ಪ್ರತಾಪ್‌ಸಿಂಹ, ಡಾ.ಮಂಜುನಾಥ ಸ್ವಾಮಿ, ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಅಧಿಕಾರಿ ಡಾ.ಬೆಟ್‌ಸೂರ್ ಮಠ್ ಇನ್ನಿತರರು ಉಪಸ್ಥಿತರಿದ್ದರು.

ಮಧು ಮಾದೇಗೌಡ ಗೆಲುವು ಖಚಿತ

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ




ಮೈಸೂರು, ಜೂ.9– ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಗೆಲುವು ಖಚಿತವಾಗಿದ್ದು, ಮೊದಲ ಪ್ರಾಶಸ್ತ್ಯದ ಮತವನ್ನು ನೀಡುವ ಮುಖಾಂತರ ಹೆಚ್ಚಿನ ಅಂತರದಿಂದ ಗೆಲ್ಲಿಸಬೇಕೆಂದು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಮರೀಗೌಡ ಕರೆ ನೀಡಿದರು.

ಮೈಸೂರಿನ ಕನಕದಾಸನಗರದಲ್ಲಿರುವ ವಿಶ್ವಪ್ರಜ್ಞಾ ಶಾಲೆ, ಶಾರದಾ ಪಬ್ಲಿಕ್ ಶಾಲೆ, ಸುಪ್ರಿಮ್ ಪಬ್ಲಿಕ್ ಶಾಲೆಗಳಿಗೆ ಭೇಟಿ ನೀಡಿ ಮಧು ಜಿ. ಮಾದೇಗೌಡರ ಪರವಾಗಿ ಮತಯಾಚಿಸಿ ಮಾತನಾಡಿದ ಅವರು, ಮಧು ಜಿ.ಮಾದೇಗೌಡ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿದ್ದು ಶಿಕ್ಷಕರ, ಪದವೀಧರರ ಸಮಸ್ಯೆಗಳ ಬಗ್ಗೆ ತಿಳಿದುಕೊಂಡಿದ್ದಾರೆ. ಭಾರತೀನಗರದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಒಂದು ಸಾವಿರ ಶಿಕ್ಷಕರಿಗೆ ಉದ್ಯೋಗ ನೀಡಿರುವುದಲ್ಲದೆ, 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸತೀಶ್‌ಕುಮಾರ್, ರವೀಂದ್ರಸ್ವಾಮಿ, ಕಾಂಗ್ರೆಸ್ ಮುಖಂಡರಾದ ಕೃಷ್ಣಕುಮಾರ್, ಹರೀಶ್ ಮೊಗಣ್ಣ, ಶೆಟ್ಟಳ್ಳಿ ಶಿವರಾಜ್, ವಿಕ್ಕಿ ವಾಸು, ಕುಮಾರ್, ಸಂತೋಷ್, ಅನಿಲ್‌ಕುಮಾರ್, ಕಾರ್ತಿಕ್, ರಘು, ಮಂಜುನಾಥ್ ಇನ್ನಿತರರು ಹಾಜರಿದ್ದರು.

ಇಂದಿನಿಂದ ಮೂರು ದಿನ ಮೈಸೂರು, ಮಂಡ್ಯ, ಚಾ.ನಗರ, ಕೊಡಗಲ್ಲಿ ಸಾಧಾರಣ ಮಳೆ ಸಾಧ್ಯತೆ

ಮೈಸೂರು, ಜೂ.9(ಆರ್‌ಕೆಬಿ)–ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಜೂ.10ರಿಂದ 12ರವರೆಗೆ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಮೋಡಕವಿದ ವಾತಾವರಣವಿದ್ದು, ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ. ಮೈಸೂರು



ಜಿಲ್ಲೆಯಲ್ಲಿ ಜೂ.10ರಂದು 11 ಮಿ.ಮೀ., 11ರಂದು 12 ಮಿ.ಮೀ, 12ರಂದು 11 ಮಿ.ಮೀ. ಮಳೆಯಾಗಲಿದೆ. ಇದೇ ಅವಧಿಯಲ್ಲಿ ಮಂಡ್ಯದಲ್ಲಿ ಕ್ರಮವಾಗಿ 12, 11 ಮತ್ತು 10 ಮಿ.ಮೀ., ಚಾಮರಾಜನಗರದಲ್ಲಿ ಕ್ರಮವಾಗಿ 10, 12 ಮತ್ತು 11 ಮಿ.ಮೀ. ಹಾಗೂ ಕೊಡಗು ಜಿಲ್ಲೆಯಲ್ಲಿ ಕ್ರಮವಾಗಿ 15, 12 ಮತ್ತು 14 ಮಿ.ಮೀ. ಮಳೆಯಾಗುವ ಸಾಧ್ಯತೆಯಿದೆ.

ಈ ಮೂರು ದಿನಗಳ ಅವಧಿಯಲ್ಲಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 34 ಡಿಗ್ರಿ ಸೆಲ್ಸಿಯಸ್, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಇರಲಿದೆ. ಕೊಡಗಿನಲ್ಲಿ ಗರಿಷ್ಠ 28 ಮತ್ತು ಕನಿಷ್ಠ 18 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ. ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ಜೂ.10ರಿಂದ 16ರವರೆಗೆ ಸರಾಸರಿ ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.



ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಡಿಎಂಜಿ ಹಳ್ಳಿಯ ನವೋದಯ ಶಾಲೆ, ಜಟ್ಟಿಹುಂಡಿಯ ಸಂತ ಫ್ರಾನ್ಸಿಸ್ ಶಾಲೆ ಹಾಗೂ ಕುಮಾರಬೀಡು ಗ್ರಾಮದಲ್ಲಿರುವ ಆರ್ಕಿಡ್ಸ್ ಶಾಲೆಗಳಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಮತಯಾಚನೆ ಮಾಡಲಾಯಿತು. ಈ ವೇಳೆ ಮೈ.ವಿ.ರವಿಶಂಕರ್ ಪತ್ನಿ ಪೂರ್ಣಿಮಾ ರವಿಶಂಕರ್, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ, ಮುಖಂಡರಾದ ಶಂಭು ಪಟೇಲ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್, ಮರಟಿಕ್ಯಾತನಹಳ್ಳಿ ಕೃಷ್ಣ ಮಹದೇವ್, ಅನಗನಹಳ್ಳಿ ರವಿಕುಮಾರ್, ಮೋಹನ್ ಮರಯ್ಯನಹುಂಡಿ, ಮಹಿಳಾ ಪದಾಧಿಕಾರಿಗಳಾದ ಹೇಮಾ ಗಂಗಪ್ಪ, ಪೂರ್ಣಿಮಾ ಚಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಕನ್ನಡ ರತ್ನ ಪುಸ್ತಕ ಲೋಕಾರ್ಪಣೆ

ಮೈಸೂರು,ಜೂ.9–ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ದಕ್ಷ ಪಿಯು ಮತ್ತು ಪದವಿ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಜೂ.11ರಂದು ಬೆಳಗ್ಗೆ 11.30 ಗಂಟೆಗೆ ದಕ್ಷ ಕಾಲೇಜಿನ ಸಭಾಂಗಣದಲ್ಲಿ 'ಕನ್ನಡ ರತ್ನ' ಪುಸ್ತಕ ಲೋಕಾರ್ಪಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ. ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮಾರಂಭವನ್ನು ಸಮಾಜ ಸೇವಕ ಗೋವಿಂದಹಳ್ಳಿ ಕೃಷ್ಣೇಗೌಡ ಉದ್ಘಾಟಿಸುವರು. ಅಂತಾರಾಷ್ಟ್ರೀಯ ಖ್ಯಾತಿಯ ಬ್ಯಾಡ್ಮಿಂಟನ್ ಆಟಗಾರ ಆನಂದಕುಮಾರ್ ಪುಸ್ತಕ ಲೋಕಾರ್ಪಣೆ ಮಾಡಲಿದ್ದು, ಸಾಹಿತಿ ಟಿ.ಸತೀಶ್ ಜವರೇಗೌಡ ಪುಸ್ತಕ ಪರಿಚಯಿಸುವರು. ದಕ್ಷ ಪದವಿ ಕಾಲೇಜಿನ ಅಧ್ಯಕ್ಷ ಡಾ.ಪಿ.ಜಯಚಂದ್ರ ರಾಜು, ಕಾಮಧೇನು ಹಂಸ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ಜಿ.ಜಯರಾಮ್ ಪ್ರತಿಭಾ ಪುರಸ್ಕಾರ ಮಾಡಲಿದ್ದು, ಮುಖ್ಯ ಅತಿಥಿಯಾಗಿ ಉದ್ಯಮಿ ಎಂ.ಯೋಗೀಶ್ ಪಾಲ್ಗೊಳ್ಳುವರು. ಜ್ಯೋತಿಷಿ ಡಾ.ಸಂಪತ್ ವೇಣುಗೋಪಾಲ ಆಚಾರ್ಯ ದಿವ್ಯ ಸಾನ್ನಿಧ್ಯ ವಹಿಸುವರು. ದಕ್ಷ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ರಮ್ಯ, ಪಿಯು ಕಾಲೇಜಿನ ಪ್ರಾಂಶುಪಾಲ ಎಂ.ಅಭಿಷೇಕ್, ಅಭಿವೃದ್ಧಿ ನಿರ್ದೇಶಕ ರತ್ನಾಕರ ಶ್ಯಾನಭಾಗ್, ಎಸ್.ಜೆ. ಕೆಂಚನಗೌಡ ಉಪಸ್ಥಿತರಿರುವರು.

ನಿಧನ

ಅಡ್ಡೆಂಗಡ ಅಚ್ಚಯ್ಯ



ಮೈಸೂರು, ಜೂ. 9– ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ಹಾಗೂ ದಿವಂಗತ ಅಡ್ಡೆಂಗಡ ಅಪ್ಪಯ್ಯ ಅವರ ಪುತ್ರ ಅಡ್ಡೆಂಗಡ ಅಚ್ಚಯ್ಯ (69) ಬುಧವಾರ ನಿಧನರಾದರು. ಶ್ರೀಯುತರು ಮೂಲತಃ ಕೊಡಗು ಜಿಲ್ಲೆ, ಬಾಳಲೆಯ ದೇವನೂರು ಗ್ರಾಮದವರಾಗಿದ್ದು, ಇಬ್ಬರು ಪುತ್ರಿಯರು, ಅಳಿಯಂದಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ವಿಜಯನಗರದ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇನ್‌ಸ್ಟಾಗ್ರಾಂನಲ್ಲಿ ಅಶ್ಲೀಲ ಕಮೆಂಟ್ ಪೊಲೀಸರಿಗೆ ರಮ್ಯಾ ದೂರು



ಬೆಂಗಳೂರು: ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಅಶ್ಲೀಲವಾಗಿ ಕಮೆಂಟ್ ಹಾಕಿ ಟ್ಯಾಗ್ ಮಾಡಿದ ವ್ಯಕ್ತಿ ವಿರುದ್ಧ ನಟಿ ರಮ್ಯಾ ಬೆಂಗಳೂರಿನ ಕೇಂದ್ರ ವಿಭಾಗದ ಸೈಬರ್ ಕ್ರೈಮ್ ಠಾಣೆಗೆ ದೂರು ನೀಡಿದ್ದಾರೆ.

ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ರಮ್ಯಾ ದಿವ್ಯ ಸ್ಪಂದನಾ ಹೆಸರಿನ ಖಾತೆ ಹೊಂದಿದ್ದು, ಇತ್ತೀಚೆಗೆ ರಕ್ಷಿತ್ ಶೆಟ್ಟಿ ನಟನೆಯ ಚಾರ್ಲಿ 777 ಕನ್ನಡ ಚಲನಚಿತ್ರ ಚೆನ್ನಾಗಿದೆ ಎಂದು ಜೂ.6ರಂದು ರಮ್ಯಾ ಪೋಸ್ಟ್ ಮಾಡಿದ್ದರು. ಜೂ.8ರಂದು ಪ್ರೀತಮ್ ಡಾಟ್ ಪ್ರಿನ್ಸ್ ಡಾಟ್ ಕೆ ಹೆಸರಿನ ಇನ್‌ಸ್ಟಾಗ್ರಾಂ ಖಾತೆ ಹೊಂದಿರುವ ವ್ಯಕ್ತಿ ರಮ್ಯಾ ಬಗ್ಗೆ ಅಶ್ಲೀಲ ಪದಗಳಿಂದ ಕಮೆಂಟ್ ಮಾಡಿ, ಪೋಸ್ಟ್ ಮಾಡಿ, ರಮ್ಯಾಗೆ ಟ್ಯಾಗ್ ಮಾಡಿದ್ದ.

ಈ ಹಿನ್ನೆಲೆಯಲ್ಲಿ 'ನನ್ನ ಮಾನಕ್ಕೆ ಧಕ್ಕೆಯುಂಟು ಮಾಡಿದ ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ' ರಮ್ಯಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸದ್ಯ ರಮ್ಯಾ ದೂರಿನ ಅನ್ವಯ ಎಫ್‌ಐಆರ್ ದಾಖಲಿಸಿಕೊಂಡಿರುವ ಕೇಂದ್ರ ವಿಭಾಗದ ಸೆನ್ ಠಾಣೆ ಪೊಲೀಸರು ಆರೋಪಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಪ್ರಕರಣ ದಾಖಲಿಸುವ ಮೊದಲು ನಟಿ ರಮ್ಯಾ ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಅವರನ್ನು ಭೇಟಿಯಾಗಿ ಕೆಲ ಹೊತ್ತು ಚರ್ಚಿಸಿ, ಶೀಘ್ರ ಆರೋಪಿ ಬಂಧಿಸುವಂತೆ ಮನವಿ ಮಾಡಿದ್ದರು ಎನ್ನಲಾಗಿದೆ.

777 ಚಾರ್ಲಿ ಸಿನಿಮಾ ನೋಡುವಾಗ ತುಂಬ ಎಂಜಾಯ್ ಮಾಡಿದೆ. ಜೊತೆಗೆ ಭಾವುಕಳಾದೆ ಕೂಡ. ಕೋವಿಡ್ ನಂತರ ಫ್ಯಾಮಿಲಿ ಆಡಿಯೆನ್ಸ್ ಥಿಯೇಟರ್‌ಗೆ ಅಷ್ಟೊಂದು ಬರುತ್ತಿಲ್ಲ. ಬಹುಶಃ ಫ್ಯಾಮಿಲಿ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬರುವುದಕ್ಕೆ 777 ಚಾರ್ಲಿ ಸರಿಯಾದ ಸಿನಿಮಾ. ಮಕ್ಕಳು, ದೊಡ್ಡವರು ಎಲ್ಲರೂ ಎಂಜಾಯ್ ಮಾಡಬಹುದು. ಹಾಗೆಯೇ, ಒಂದು ಉತ್ತಮ ಸಂದೇಶ ಇದೆ. ಈ ಸಿನಿಮಾ ಕನ್ನಡದಲ್ಲಿ ನಿರ್ಮಾಣವಾಗಿರುವುದಕ್ಕೆ ನನಗೆ ತುಂಬ ಹೆಮ್ಮೆ ಆಗುತ್ತಿದೆ. ಇಂಥ ಕಥೆಗಳನ್ನು ತೆರೆಮೇಲೆ ತರಲು ಯಾರೂ ಪ್ರಯತ್ನ ಮಾಡಲ್ಲ. ರಕ್ಷಿತ್ ಶೆಟ್ಟಿ, ಕಿರಣ್‌ರಾಜ್ ಒಂದೊಳ್ಳೆ ಸಿನಿಮಾ ಮಾಡಿದ್ದಾರೆ ಎಂದು ಹೇಳಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಚುನಾವಣೆ

ಸೇವಾ ಮನೋಭಾವದ ಮೈ.ವಿ.ರವಿಶಂಕರ್‌ಗೆ ಮತ ನೀಡಿ

ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ್ ಮನವಿ



ಮೈಸೂರು ಬಿಜೆಪಿ ಕಚೇರಿಯಲ್ಲಿ ಎಂಎಲ್‌ಸಿ ಹೇಮಲತಾ ನಾಯಕ್ ಅವರನ್ನು ಮುಖಂಡರು ಸನ್ಮಾನಿಸಿದರು.

ಮೈಸೂರು,ಜೂ.9(ಪಿಎಂ)– ದಕ್ಷಿಣ ಪದವೀಧರರ ಕ್ಷೇತ್ರದಿಂದ ಪರಿಷತ್ ಚುನಾವಣೆಗೆ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಸೇವಾ ಮನೋಭಾವದ ವ್ಯಕ್ತಿ. ಅವರನ್ನು ಪದವೀಧರ ಮತದಾರರು ಆಯ್ಕೆ ಮಾಡಿ ತಮ್ಮ ಸೇವೆಗೆ ಅವಕಾಶ ಕಲ್ಪಿಸಬೇಕು ಎಂದು ಬಿಜೆಪಿ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ಮನವಿ ಮಾಡಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈ.ವಿ.ರವಿಶಂಕರ್ ಅವರು 2ನೇ ಬಾರಿಗೆ ಸ್ಪರ್ಧೆ ಮಾಡಿದ್ದಾರೆ. ಕಳೆದ ಬಾರಿ ಕಡಿಮೆ ಅಂತರದಲ್ಲಿ ಇದೇ ಚುನಾವಣೆಯಲ್ಲಿ ಅವರು ಪರಾಜಿತರಾದರು. ಒಬ್ಬ ಒಳ್ಳೆಯ ಅಭ್ಯರ್ಥಿಯನ್ನು ಗುರುತಿಸಿ ಪಕ್ಷ ಸ್ಪರ್ಧಿಸಲು ಅವಕಾಶ ನೀಡಿದೆ. ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಅತ್ಯಂತ ಬಹುಮತದಿಂದ ಆಯ್ಕೆ ಮಾಡುವಂತೆ ಕೋರಿದರು.

ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಸಮಾಜ ನಮ್ಮದು. ಇಂದು ನಾವು ಕೂಡ ಮುನ್ನೆಲೆಗೆ ಬರಲು ಬಿಜೆಪಿ ಅವಕಾಶ ನೀಡುತ್ತಿದೆ. ನನ್ನ ಸಮುದಾಯದ ಅನೇಕ ಬಂಧುಗಳು ಬಿಜೆಪಿಯಲ್ಲಿ ಗುರುತಿಸಿಕೊಂಡು ಎಲ್ಲಾ ಸಮುದಾಯಗಳೊಂದಿಗೆ ತಮ್ಮ ಸಮುದಾಯದ ಸೇವೆಗೂ ಕಟಿಬದ್ಧವಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಶಿಷ್ಟ ಪಂಗಡದ ಶ್ರೇಯೋಭಿವೃದ್ಧಿಗೆ ಹಲವು ಕಾರ್ಯಕ್ರಮಗಳನ್ನು ನೀಡಿದೆ ಎಂದರು.

ಮೈಸೂರು ಬಗ್ಗೆ ನಮ್ಮ ಭಾಗದಲ್ಲಿ ಉನ್ನತವಾದ ಭಾವನೆ ಇದೆ. ಅಂದಿನ ಮೈಸೂರು ಸಂಸ್ಥಾನದಲ್ಲಿ ಮಹಾರಾಜರು ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಿದರು. ಅದೇ ದಾರಿಯಲ್ಲಿ ನಮ್ಮ ಬಿಜೆಪಿಯೂ ನಡೆಯುತ್ತಿದೆ. ಮಹಿಳಾ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಪರಿಶಿಷ್ಟ ಪಂಗಡಕ್ಕೆ ವಿಶೇಷ ಆದ್ಯತೆ ನೀಡಿದೆ. ವಾಲ್ಮೀಕಿ ಸಮುದಾಯದಂತಹ ಹಿಂದುಳಿದ ಸಮಾಜಕ್ಕೆ ಸೇರಿದ ನನಗೆ ಪರಿಷತ್ ಸದಸ್ಯ ಸ್ಥಾನವನ್ನು ದೊರಕಿಸಿಕೊಟ್ಟಿದೆ ಎಂದು ಪಕ್ಷದ ವರಿಷ್ಠರಿಗೆ ಧನ್ಯವಾದ ಹೇಳಿದರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಪಾಲಿಕೆ ಸದಸ್ಯ ಶಿವಕುಮಾರ್, ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ ನಗರ ವಕ್ತಾರ ಮೋಹನ್ ಮತ್ತಿತರರು ಹಾಜರಿದ್ದರು.

ಅಭ್ಯರ್ಥಿ ಹೆಸರಿನ ಮುಂದೆ ಗೀರು ಬದಲು ನಾಮ ಹಾಕಿ ಎಂದರಷ್ಟೇ!

ಮೈಸೂರು: ಪಕ್ಷದೊಳಗೆ ಯಾವುದೇ ಆಂತರಿಕ ಅಸಮಾಧಾನ ಇಲ್ಲ. ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಪಕ್ಷದ ಎಲ್ಲರೂ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಪ್ರತಿಕ್ರಿಯಿಸಿದರು.

ಬಿಎಸ್‌ವೈ ಪುತ್ರ ವಿಜಯೇಂದ್ರರಿಗೆ ವಿಧಾನಸಭೆಯಿಂದ ಪರಿಷತ್ ಸದಸ್ಯ ಸ್ಥಾನಕ್ಕೆ ಟಿಕೆಟ್ ಕೈತಪ್ಪಿದ ಹಿನ್ನೆಲೆಯಲ್ಲಿ ಅವರ ಬೆಂಬಲಿಗರು ಅಸಮಾಧಾನ ಹೊಂದಿದ್ದಾರೆ. ಇದಕ್ಕೆ ಪೂರಕವಾಗಿ ಮೊನ್ನೆ ನಡೆದ ಅಭ್ಯರ್ಥಿ ಪರ ಮತಯಾಚನೆ ಸಭೆಯಲ್ಲಿ (ಬಿಜೆಪಿ ರಾಜ್ಯ ಉಪಾಧ್ಯಕ್ಷ ವಿಜಯೇಂದ್ರ ಮತ್ತು ಸಚಿವ ವಿ.ಸೋಮಣ್ಣ ಸಮ್ಮುಖದಲ್ಲಿ ನಡೆದ ಸಭೆ) ಮತಪತ್ರದಲ್ಲಿ ಬಿಜೆಪಿ ಅಭ್ಯರ್ಥಿ ಹೆಸರು ಮುಂದೆ ನಾಮ ಹಾಕುವಂತೆ ಬಿಎಸ್‌ವೈ ಬೆಂಬಲಿಗರು ಹೇಳಿದ್ದಾರೆ ಎಂಬ ಬಗ್ಗೆ ಅವರು ಪ್ರತಿಕ್ರಿಯೆ ನೀಡಿದರು.

ಹಾಸ್ಯಧಾಟಿಯಲ್ಲಿ ಒಂದು ಗೀರು ಹಾಕಿರಿ ಎನ್ನುವ ಬದಲು ನಾಮ ಹಾಕಿ ಎಂದರು ಅಷ್ಟೇ. ಅದನ್ನು ಅನ್ಯಥಾ ಭಾವಿಸುವ ಅಗತ್ಯವಿಲ್ಲ. ಕುಲಗೆಟ್ಟ ಮತಗಳು ಚಲಾವಣೆ ಆಗುವುದನ್ನು ತಪ್ಪಿಸಲು ಈ ರೀತಿ ಹೇಳಿದ್ದಾರೆ. ನಮ್ಮಲ್ಲಿ ಯಾವುದೇ ಅಸಮಾಧಾನವಿಲ್ಲ. ಇದ್ದರೆ ಇಷ್ಟೊತ್ತಿಗೆ ಗೊತ್ತಾಗುತ್ತಿತ್ತು ಎಂದರು.

ಪ್ರಚಾರ ಸಂಬಂಧ ಪ್ರತಿಕ್ರಿಯಿಸಿ, ಮೈಸೂರು ನಗರಕ್ಕೆ ಸಂಬಂಧಿಸಿದಂತೆ ಕಾರ್ಯಕರ್ತರ ಪಡೆ ರಚನೆ ಮಾಡಲಾಗಿದೆ. ಒಬ್ಬ ಕಾರ್ಯಕರ್ತರು 25 ಮಂದಿ ಮತದಾರರನ್ನು ಸಂಪರ್ಕ ಮಾಡುವಂತೆ ಯೋಜನೆ ಮಾಡಿದ್ದೇವೆ. ಒಟ್ಟು 1,295 ಕಾರ್ಯಕರ್ತರು ಮೈಸೂರು ನಗರದ 4 ವಿಧಾನಸಭಾ ಕ್ಷೇತ್ರದಲ್ಲಿ ಪ್ರಚಾರ, ಮತ ಯಾಚನೆಯಲ್ಲಿ ತೊಡಗಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿನಿತ್ಯ ವರದಿ ತೆಗೆದುಕೊಳ್ಳುತ್ತಿದ್ದೇವೆ. ಎಲ್ಲಾ ಮತದಾರರನ್ನು ತಲುಪುವ ಪ್ರಯತ್ನ ಮಾಡಿದ್ದೇವೆ. ಒಟ್ಟಾರೆ ಈವರೆಗೆ ಶೇ.80ರಷ್ಟು ಮತದಾರರನ್ನು ತಲುಪಿದ್ದೇವೆ ಎಂದರು. ಕಾಂಗ್ರೆಸ್–ಜೆಡಿಎಸ್‌ಗೇ ಓಟ್ ಮಾಡಬೇಕು ಎಂಬ ಮನಸ್ಥಿತಿ ಹೊಂದಿರುವವರನ್ನೂ ಭೇಟಿ ಮಾಡಿ, ಮತ ಯಾಚನೆ ಮಾಡಿದ್ದೇವೆ. ಎರಡನೇ ಪ್ರಾಶಸ್ತ್ಯದ ಮತದ ಮೇಲೂ ನಂಬಿಕೆ ಇಟ್ಟು ಅವರಲ್ಲಿಯೂ ಮತ ಯಾಚನೆ ಮಾಡುತ್ತಿದ್ದೇವೆ ಎಂದರು.

ಎಸ್‌ಟಿ ಮೀಸಲಾತಿ ಹೆಚ್ಚಿಸುವ ಬೇಡಿಕೆ ಈಡೇರಿಸಲು ನಮ್ಮ ಸರ್ಕಾರ ಬದ್ಧ

ಮೈಸೂರು,ಜೂ.9(ಪಿಎಂ)– ಸಮುದಾಯದ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿಯವರು ನಡೆಸುತ್ತಿರುವ ಧರಣಿ 100 ದಿನಗಳನ್ನು ಪೂರೈಸಿದರೂ ಸರ್ಕಾರ ಏಕೆ ಸ್ಪಂದಿಸಿಲ್ಲ? ಎಂಬ ಬಗ್ಗೆ ಪ್ರತಿಕ್ರಿಯೆ ನೀಡಿದ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಒಂದಿಷ್ಟು ಕಾನೂನಾತ್ಮಕ ತೊಡಕುಗಳು ಇರುವ ಕಾರಣ ತತ್‌ಕ್ಷಣಕ್ಕೆ ಬೇಡಿಕೆ ಈಡೇರಿಸಲು ಸಾಧ್ಯವಾಗುತ್ತಿಲ್ಲ. ನಮ್ಮ ಸರ್ಕಾರ ಈ ಬೇಡಿಕೆ ಈಡೇರಿಸಲು ಬದ್ಧವಿದೆ ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ್ ಅವರ ಪತ್ರಿಕಾ ಗೋಷ್ಠಿಯಲ್ಲಿ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಜು, ಸಚಿವ ಶ್ರೀರಾಮುಲು ಮಾತ್ರವಲ್ಲದೆ, ಮುಖ್ಯಮಂತ್ರಿಗಳೂ ಶ್ರೀಗಳನ್ನು ಖುದ್ದು ಭೇಟಿ ಮಾಡಿ ಮಾತನಾಡಿದ್ದಾರೆ. ನಮ್ಮ ಸರ್ಕಾರದಿಂದ ಈ ಬೇಡಿಕೆ ಈಡೇರುವ ಪೂರ್ಣ ವಿಶ್ವಾಸವಿದೆ ಎಂದರು.

ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ವಿಚಾರ ಸಂವಿಧಾನಾತ್ಮಕವಾಗಿ ಮಾಡಬೇಕಾದ ಕೆಲಸ. ಹಾಗಾಗಿ ತತ್‌ಕ್ಷಣಕ್ಕೆ ನಿರ್ಧಾರ ಕೈಗೊಂಡರೆ ಅದರ ಪರಿಣಾಮ ಮುಂದೆ ಸಮಸ್ಯೆ ಉಂಟಾಗಬಹುದು. ಈ ಎಲ್ಲಾ ಹಿನ್ನೆಲೆಯಲ್ಲಿ ಪರಿಶೀಲಿಸಿ, ಸರ್ಕಾರ ಬೇಡಿಕೆ ಈಡೇರಿಸಲಿದೆ. ಬೇಡಿಕೆ ಈಡೇರುವವರೆಗೂ ಧರಣಿ ಕೈಬಿಡುವುದಿಲ್ಲ ಎಂದು ಶ್ರೀಗಳು ನಿರ್ಧರಿಸಿದ್ದಾರೆ. ಇದನ್ನು ನಾವು ಪ್ರಶ್ನೆ ಮಾಡಲಾಗದು ಎಂದು ಪ್ರಶ್ನೆಗಳಿಗೆ ಮಾಜಿ ಎಂಎಲ್‌ಸಿ ಸಿದ್ದರಾಜು ಉತ್ತರಿಸಿದರು.



ಮೈಸೂರು ಕೆಆರ್ ಕ್ಷೇತ್ರದ ವಿವಿಧ ಕಾಲೇಜುಗಳಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರ ಮತ ಯಾಚಿಸಲಾಯಿತು. ಈ ವೇಳೆ ನಗರಾಧ್ಯಕ್ಷ ಚೆಲುವೇಗೌಡ, ಕಾರ್ಯದರ್ಶಿ ಗಂಗಾಧರಗೌಡ, ಪಾಲಿಕೆ ಸದಸ್ಯೆ ಶೋಭಾ, ಮಾಜಿ ಉಪಮೇಯರ್ ಶೈಲೇಂದ್ರ, ಮುಖಂಡರಾದ ಚೆನ್ನಪ್ಪ, ಸಂತೋಷ್, ಲೋಕೇಶ್, ರಾಮು, ಪ್ರಶಾಂತ್, ಪ್ರಕಾಶ್, ಪ್ರಿಯದರ್ಶಿನಿ, ಯದುನಂದನ ಇನ್ನಿತರರಿದ್ದರು.

ಇಂದಿನಿಂದ ಭಾರೀ ಮಳೆ ಸಾಧ್ಯತೆ

ನವದೆಹಲಿ, ಜೂ.9– ರಾಜ್ಯದಲ್ಲಿ ಮುಂದಿನ ಐದು ದಿನಗಳವರೆಗೆ ಗುಡುಗು, ಮಿಂಚು ಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ. ಕರ್ನಾಟಕ ಸೇರಿದಂತೆ ಕೇರಳ, ಪುದುಚೇರಿ, ಗೋವಾ ರಾಜ್ಯಗಳಲ್ಲಿ ಮಳೆ ಆರ್ಭಟ ಜೋರಾಗಲಿದ್ದು, ಜೂ.13ರವರೆಗೂ ಹಲವು ಪ್ರದೇಶಗಳಲ್ಲಿ ಮಳೆಯಾಗಲಿದೆ. ಜೂ.9ರಿಂದ 13ರವರೆಗೆ ಈಶಾನ್ಯ ರಾಜ್ಯಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ.

ಪಠ್ಯ ಪುಸ್ತಕ ಪರಿಷ್ಕರಣೆ ಖಂಡಿಸಿ ಕಾಂಗ್ರೆಸ್ ಶಾಸಕರ ಪ್ರತಿಭಟನೆ

ವಿಧಾನಸೌಧದ ಬಳಿಯ ಗಾಂಧಿ ಪ್ರತಿಮೆ ಮುಂದೆ ಧರಣಿ; ಬಿಜೆಪಿ ಸರ್ಕಾರ, ಆರ್‌ಎಸ್‌ಎಸ್ ಪ್ರಾಯೋಜಿತ ಪರಿಷ್ಕರಣೆಗೆ ಖಂಡನೆ



ಬೆಂಗಳೂರು, ಜೂ.9(ಕೆಎಂಶಿ)–ನಾಡಿನ ದಾರ್ಶನಿಕರು, ಮಹಾನ್ ಚೇತನಗಳಿಗೆ ಅಪಮಾನ ಮಾಡಿ, ಇತಿಹಾಸ ತಿರುಚಿರುವ ಪಠ್ಯ ಪುಸ್ತಕ ಪರಿಷ್ಕರಣೆ ರದ್ದುಗೊಳಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಶಾಸಕರು ವಿಧಾನಸೌಧದ ಬಳಿಯ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದರು.

ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಶಾಸಕರು, ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಹಾಗೂ ಆರ್‌ಎಸ್‌ಎಸ್ ಪ್ರೇರಿತ ಪಠ್ಯ ಪುಸ್ತಕ ಪರಿಷ್ಕರಣೆ ಮಾಡಿದ ಸಮಿತಿ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಉಭಯ ನಾಯಕರು ಪಠ್ಯ ಪುಸ್ತಕ ಪರಿಷ್ಕರಣೆ ನೆಪದಲ್ಲಿ ಸಮಾಜದ ಶಾಂತಿ ಕೆಡಿಸಿ, ದೇಶ, ವಿದೇಶಗಳಲ್ಲಿ ಕರ್ನಾಟಕದ ಗೌರವ ಹರಾಜು ಹಾಕುತ್ತಿರುವ ಬೊಮ್ಮಾಯಿ ಅವರು ತಕ್ಷಣ ರಾಜೀನಾಮೆ ನೀಡಬೇಕು, ಈ ಬಿಜೆಪಿ ಸರಕಾರ ತೊಲಗಬೇಕು ಎಂದು ಆಗ್ರಹಿಸಿದರು.

ಬಸವಣ್ಣನವರಿಂದ ಹಿಡಿದು ಅಂಬೇಡ್ಕರ್‌ವರೆಗೂ, ನಾರಾಯಣ ಗುರುಗಳಿಂದ ಶಿವಕುಮಾರ ಸ್ವಾಮೀಜಿ, ಬಾಲಗಂಗಾಧರ ಸ್ವಾಮಿ, ಮುರುಘಾ ಮಠದ ಸ್ವಾಮಿಗಳು, ಭಗತ್‌ಸಿಂಗ್‌ವರೆಗೂ ಯಾರೊಬ್ಬರನ್ನೂ ಬಿಡದೆ ಈ ಸರ್ಕಾರ ಅಪಮಾನ ಮಾಡಿದೆ. ನಾವೆಲ್ಲರೂ ಸಂವಿಧಾನದ ಆಶ್ರಯದಲ್ಲಿ ಬದುಕುತ್ತಿದ್ದು, ಅಂಬೇಡ್ಕರ್ ಅವರು ಸಂವಿಧಾನ ಶಿಲ್ಪಿ ಅಲ್ಲವೇ? ಅಂಬೇಡ್ಕರ್ ಅವರನ್ನು ಮನೆ ದೇವರು ಎಂದು ಪರಿಗಣಿಸಿದ್ದು, ದೇಶದಾದ್ಯಂತ ಅವರ ಅತೀ ಹೆಚ್ಚು ಪುತ್ಥಳಿ ಇವೆ. ನಮ್ಮ ಕಚೇರಿಗಳಲ್ಲಿ ಅವರ ಫೋಟೋ ಇಟ್ಟುಕೊಂಡು ಗೌರವಿಸುತ್ತೇವೆ. ಆದರೆ ಬಿಜೆಪಿಯವರು ಅಂಬೇಡ್ಕರ್‌ರಿಗೆ ಹೀಗೆ ಅಪಮಾನ ಮಾಡುವುದು ಸರಿಯೇ? ಬಸವಣ್ಣನವರ, ನಾರಾಯಣ ಗುರುಗಳ ಆಚಾರ, ವಿಚಾರ ಪ್ರಚಾರ ಮಾಡುವ ವೇಳೆ ಅಪಮಾನ ಮಾಡಲಾಗುತ್ತಿದೆ. ಬುದ್ಧ, ಜೈನರ ತ್ಯಾಗವನ್ನು ನಾವು ಸ್ಮರಿಸುತ್ತೇವೆ. ಈ ಎಲ್ಲರಿಗೂ ಅಪಮಾನ ಮಾಡಿ, ಅವರ ವಿಚಾರಕ್ಕೆ ತಿಲಾಂಜಲಿ ಹಾಕಲು ಪ್ರಯತ್ನಿಸಲಾಗಿದೆ. ಜ್ಞಾನಪೀಠ ಪ್ರಶಸ್ತಿ ಪಡೆದ, ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟ ಎಂದು ಕರೆದ ಕುವೆಂಪು ಅವರಿಗೆ ಅಪಮಾನ ಮಾಡಿದ್ದಾರೆ. ಸರ್ಕಾರ ಮಾಡಲು ಸಾಧ್ಯವಾಗದ, ಅನ್ನ, ಅಕ್ಷರ ಹಾಗೂ ಆಶ್ರಯ ದಾಸೋಹವನ್ನು ಮಾಡಿದ ಶಿವಕುಮಾರ ಸ್ವಾಮೀಜಿ ಅವರ ಹೆಸರು ಅಳಿಸಲು ಬಿಜೆಪಿ ಸರ್ಕಾರ ಮುಂದಾಗಿದೆ.

ಈಗ ಸಮಿತಿ ವಿಸರ್ಜನೆ ಮಾಡಿದ ಮೇಲೆ ಆ ಸಮಿತಿ ಶಿಫಾರಸು ಮಾಡಿದ ಪಠ್ಯವನ್ನು ಇಟ್ಟುಕೊಂಡಿದೆ. ಸಮಿತಿ ವಜಾ ಆಗಿರುವುದರಿಂದ ಆ ಸಮಿತಿ ಪರಿಷ್ಕರಣೆ ಮಾಡಿದ ಪಠ್ಯವನ್ನು ಮಕ್ಕಳಿಗೆ ಬೋಧನೆ ಮಾಡಬಾರದು ಎಂದು ಸರ್ಕಾರವನ್ನು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಒತ್ತಾಯಿಸಿದರು. ಸರ್ಕಾರ ಪರಿಷ್ಕೃತ ಪಠ್ಯವನ್ನು ವಾಪಸು ಪಡೆಯಬೇಕು ಹಾಗೂ ಬರಗೂರು ರಾಮಚಂದ್ರಪ್ಪನವರು ಪರಿಷ್ಕರಣೆ ಮಾಡಿದ್ದ ಪಠ್ಯವನ್ನೇ ಮುಂದುವರೆಸಬೇಕು ಎಂಬುದು ನಮ್ಮ ಒತ್ತಾಯ. ಇದನ್ನು ಸರ್ಕಾರ ಈಡೇರಿಸದೆ ಹೋದರೆ ಮುಂದಿನ ಹೋರಾಟದ ರೂಪು–ರೇಷೆಗಳನ್ನು ಚರ್ಚಿಸಿ, ತೀರ್ಮಾನ ಮಾಡಲಾಗುವುದು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.06.2022 ಶುಕ್ರವಾರ, ಮಳೆ ನಕ್ಷತ್ರ : ಮೃಗಶಿರ 08.06.2022ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ಚಿತ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್** : 80ನೇ ಜಯಂತ್ಯುತ್ಸವ, ಬೆಳಗ್ಗೆ 9.30 ರಿಂದ ಅವಭೃತ ಸ್ನಾನ, ವಸಂತೋತ್ಸವ, ಪವಮಾನ ಹೋಮ, ಸಂಜೆ ಡೋಲೋತ್ಸವ, ಶಯನೋತ್ಸವ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವ, ಲಕ್ಷ ಶ್ರೀಸೂಕ್ತ ಮಹಾಯಾಗ ಮತ್ತು ಕೋಟಿ ದತ್ತ ಹೋಮ, ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 23ನೇ ಬ್ರಹ್ಮೋತ್ಸವ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ:** ವಿಮಾನ ಗೋಪುರ ಮತ್ತು ರಾಜಗೋಪುರ ಮಹಾ ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ 8ರಿಂದ ಶ್ರೀ ವಲ್ಲೀದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿ ಕಲ್ಯಾಣೋತ್ಸವ, ಪ್ರಕಾರೋತ್ಸವ, ಮಂಟಪಾರ್ಚನೆ, ರಾಜೋಪಚಾರ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ವಿಶ್ವೇಶ್ವರನಗರ.

■ **ಮೈಸೂರು ಆರ್ಟ್ ಗ್ಯಾಲರಿ:** ಕಲಾವಿದ ಎಂ.ಆರ್.ಮನೋಹರ ವೈವಿಧ್ಯಮಯ ಜಂಗಮ ವಾಣಿ (ಮೊಬೈಲ್) ಮೂಲಕ ಸೆರೆಹಿಡಿದ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ: ಅಂತರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕ ಎಸ್.ತಿಪ್ಪೇಸ್ವಾಮಿ, ಮುಖ್ಯ ಅತಿಥಿಗಳು: ಮೈಸೂರು ಆರ್ಟ್ ಗ್ಯಾಲರಿ ಸಂಸ್ಥಾಪಕ ಅಧ್ಯಕ್ಷ ಶಿವಲಿಂಗಪ್ಪ, ಅಧ್ಯಕ್ಷತೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 10ಕ್ಕೆ.

■ **ಶ್ರೀ ರಾಮಲಿಂಗ ಚೌಡೇಶ್ವರಿ ಅಮ್ಮನವರ ದೇವಸ್ಥಾನ:** ಶ್ರೀ ಮಾತಾ ಚೌಡೇಶ್ವರಿ ದೇವಿಯ ರಜತ ಉತ್ಸವಮೂರ್ತಿ ಚರಪ್ರತಿಷ್ಠಾ ಮಹೋತ್ಸವ, ಬೆಳಗ್ಗೆ 7ರಿಂದ ಕರ್ಮಾಂಗ ಪ್ರಾರಂಭ, 8.20ಕ್ಕೆ ಶ್ರೀದೇವಿಯ ಚರ ಪ್ರತಿಷ್ಠೆ, ಕಲಾವೃದ್ಧಿ ಹವನ, ಚಂಡೀಹವನ, ಮಹಾಪೂರ್ಣಾಹುತಿ, ಮಧ್ಯಾಹ್ನ12ಕ್ಕೆ ಕುಂಭಾಭಿಷೇಕ, ಧ್ವಜಸ್ತಂಭ ಪೂಜೆ, ಮಹಾಮಂಗಳಾರತಿ, ಶ್ರೀ ಗುರುಗಳ ಆಶೀರ್ವಾದ, ಅನ್ನಸಂತರ್ಪಣೆ, ವಿದ್ವಾನ್ ಶ್ರೀ ಮಂಜುನಾಥ್ ಭಟ್ ಅವರಿಂದ ಆಶೀರ್ವಚನ, ಸಂಜೆ 7ಕ್ಕೆ ರಂಗಪೂಜೆ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಮಲಿಂಗ ಚೌಡೇಶ್ವರಿ ಅಮ್ಮನವರ ದೇವಸ್ಥಾನ, ಕಾಳಮ್ಮನ ಗುಡಿ ಬೀದಿ, ಮಂಡಿ ಮೊಹಲ್ಲಾ.

■ **ಗಾನಭಾರತೀ :** ವಿದುಷಿ ಐಶ್ವರ್ಯ ಮಣಿಕರ್ಣಿಕ ಅವರಿಂದ ಹಾಡುಗಾರಿಕೆ, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ–ಡಾ. ಎ.ಎಸ್. ಚಂದ್ರಶೇಖರ್, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ–ಡಾ. ಎಸ್.ಜಿ. ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಎಸ್.ಸಂಗೀತಾ, ವ್ಯಾಖ್ಯಾನ– ಮ.ರಾಮಕೃಷ್ಣ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಮೈಸೂರು ಎಂ. ನಾಗರಾಜ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ **ಮಧ್ಯಾಹ್ನ:** 12.30 ದೇವರನಾಮ –ಪಿ.ಎಸ್. ರಂಜನಿ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ.ರವೀಂದ್ರಕುಮಾರ್, 4.00 ಮಹಿಳಾ ರಂಗ, ಜೀವನ್ಮುಖಿ, ಪ್ರಸ್ತುತಿ– ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ತೇಜಸ್ ಬಾಬ ಸಿ. ಕಳಸ್ತವಾಡಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ –ಕೃಷಿ ಬೀಜೋತ್ಪಾದನೆಯಲ್ಲಿ ಆರ್ಥಿಕ ಅಭಿವೃದ್ಧಿ ಕುರಿತು ಕಾಳಪ್ಪ ಅವರೊಡನೆ ಮಾತುಕತೆ, 7.45 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, ನಿರ್ಮಾಣ–ಎಸ್.ಲಕ್ಷ್ಮೀನಾರಾಯಣ, 9.00 ಕನ್ನಡ ಭಾರತಿ–ಕವಿ ಕಾಣದ್ದನ್ನು ಕವಿ ಕಂಡ, ರಚನೆ–ಡಾ.ವಿನೋದಾ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 10 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 55 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಜೆಡಿಎಸ್ ಅಭ್ಯರ್ಥಿಗೇ ನನ್ನ ಮತ

ಮೈಸೂರು, ಜೂ.9(ಆರ್‌ಕೆಬಿ)–ಶುಕ್ರವಾರ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ತಾವು ಜೆಡಿಎಸ್ ಅಭ್ಯರ್ಥಿಗೇ ಮತ ಹಾಕುವುದಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಇಂದಿಲ್ಲಿ ಮಾಹಿತಿ ನೀಡಿದ್ದಾರೆ.



ನಾನು ಜೆಡಿಎಸ್‌ನಿಂದ ಅಧಿಕೃತವಾಗಿ ಆಯ್ಕೆಯಾಗಿದ್ದೇನೆ. ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ಜೆಡಿಎಸ್ ಅಭ್ಯರ್ಥಿಗೇ ಮತ ಹಾಕುತ್ತೇನೆ. ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿ ನನಗೆ ಮತ ಹಾಕುವಂತೆ ಮನವಿ ಮಾಡಿದ್ದಾರೆ. ಅಲ್ಲದೆ ಹೆಚ್.ಡಿ.ಕುಮಾರಸ್ವಾಮಿ ಸಹ ಕೇಳಿದ್ದಾರೆ. ನನ್ನ ಬೆಂಬಲಿಗರು, ಕ್ಷೇತ್ರದ ಮುಖಂಡರ ಅಭಿಪ್ರಾಯವೂ ಅದೇ ಆಗಿದೆ. ಈ ಎಲ್ಲಾ ಕಾರಣದಿಂದ ತಾವು ಜೆಡಿಎಸ್ ಅಭ್ಯರ್ಥಿಗೇ ಮತ ಹಾಕಲಿದ್ದು, ಹಾಗಾಗಿ ಬೇರೆ ಯಾವುದೇ ವದಂತಿ, ಊಹಾಪೋಹಗಳಿಗೆ ಕಿವಿಗೊಡದಿರುವಂತೆ ಶಾಸಕ ಜಿ.ಟಿ.ದೇವೇಗೌಡರು ಬೆಂಬಲಿಗರಲ್ಲಿ ಮನವಿ ಮಾಡಿದ್ದಾರೆ.

ವಿಧಾನಸಭೆಯಿಂದ ರಾಜ್ಯಸಭೆಗೆ ಇಂದು ಚುನಾವಣೆ: ಕಾಂಗ್ರೆಸ್–ಜೆಡಿಎಸ್

‘ಜಾತ್ಯತೀತ’ ಜಂಗೀಕುಸ್ತಿ

■ ಬಿಜೆಪಿ ಸದ್ದು-ಗದ್ದಲವಿಲ್ಲದೆ ಗೆಲುವಿನ ದಡ ಸೇರುವ ನಿರೀಕ್ಷೆ ■ ಪಕ್ಷದ ಕುಪೇಂದ್ರ ರೆಡ್ಡಿ ಬೆಂಬಲಿಸಲು ಕಾಂಗ್ರೆಸ್ ವರಿಷ್ಠರಿಗೆ ಕುಮಾರಸ್ವಾಮಿ ಮನವಿ ■ ಜೆಡಿಎಸ್ ಶಾಸಕರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಮುಖೇನ ಮನವಿ; ಹೆಚ್‌ಡಿಕೆ ಆಕ್ರೋಶ

ಬೆಂಗಳೂರು, ಜೂ.9 (ಕೆಎಂಶಿ)–ವಿಧಾನಸಭೆಯಿಂದ ರಾಜ್ಯಸಭೆಯ 4ನೇ ಸ್ಥಾನಕ್ಕೆ ಕಾಂಗ್ರೆಸ್, ಜೆಡಿಎಸ್ ಒಬ್ಬರನ್ನೊಬ್ಬರು ನಿಂದಿಸಿಕೊಂಡು ಬಿಜೆಪಿ ಅಭ್ಯರ್ಥಿಗೆ ಸುಗಮ ದಾರಿ ಮಾಡಿಕೊಟ್ಟಂತಿದೆ.

ರಾಜ್ಯಸಭೆಯ 4 ಸ್ಥಾನಗಳಿಗೆ ನಾಳೆ ಚುನಾವಣೆ ನಡೆಯುತ್ತಿದ್ದು, ಪೂರ್ವದಿನವಾದ ಇಂದು ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ತಮ್ಮ ಅಭ್ಯರ್ಥಿಗಳಿಗೆ ಮತ ನೀಡುವಂತೆ ಒಬ್ಬರನ್ನೊಬ್ಬರು ಕೋರಿಕೊಂಡರೇ ಹೊರತು, ಇದರಿಂದ ಇಬ್ಬರಿಗೂ ಪ್ರಯೋಜನವಾಗಿಲ್ಲ. ಇವೆರಡೂ ಪಕ್ಷಗಳ ಕಿತ್ತಾಟವನ್ನು ರಾಜಕೀಯ ಲಾಭವಾಗಿ ಪಡೆದುಕೊಳ್ಳಲು ಬಿಜೆಪಿ ಮುಂದಾಗಿದ್ದು, ತಮ್ಮ ಇಬ್ಬರು ಅಭ್ಯರ್ಥಿಗಳಿಗೆ ಮೊದಲ ಪ್ರಾಶಸ್ತ್ಯದ ಮತಗಳನ್ನು ನೀಡಿ, ಮೂರನೇ ಅಭ್ಯರ್ಥಿಯನ್ನು ಗೆಲ್ಲಿಸಲು 32 ಮೊದಲ ಪ್ರಾಶಸ್ತ್ಯ ಮತಗಳ ಜೊತೆಗೆ ಉಳಿದ 91 ಮತಗಳ ಎರಡನೇ ಪ್ರಾಶಸ್ತ್ಯವನ್ನು ಮೂರನೇ ಅಭ್ಯರ್ಥಿ ಲೆಹರ್‌ಸಿಂಗ್‌ಗೆ ನೀಡಿ, ಗೆಲ್ಲಿಸಿಕೊಳ್ಳಲು ರಣತಂತ್ರ ರೂಪಿಸಿದೆ. ▶ 8ನೇ ಪುಟಕ್ಕೆ



ನಿರ್ಮಲಾ · ಜಗ್ಗೇಶ್ · ಲೆಹರ್ ಸಿಂಗ್ · ಜಯರಾಂ ರಮೇಶ್ · ಮನ್ಸೂರ್ ಖಾನ್ · ಕುಪ್ಪೇಂದ್ರ ರೆಡ್ಡಿ

ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್, ಅರಸೀಕೆರೆ ಶಾಸಕ ಶಿವಲಿಂಗೇಗೌಡ, ಕೋಲಾರ ಶಾಸಕ ಶ್ರೀನಿವಾಸಗೌಡ ಗೈರಾಗಿದ್ದರು.

ಯೆಚೂರಿ ಮಧ್ಯ ಪ್ರವೇಶ: ಜೆಡಿಎಸ್ ವಲಯದಲ್ಲಿ ಆಶಾಭಾವ

ಬೆಂಗಳೂರು, ಜೂ.9(ಕೆಎಂಶಿ)–ಕಾಂಗ್ರೆಸ್–ಜೆಡಿಎಸ್ ಆಂತರಿಕ ಜಗಳದಿಂದ ಬಿಜೆಪಿಗೆ ದಕ್ಕಬಹುದಾದ 3ನೇ ಸ್ಥಾನವನ್ನು ತಪ್ಪಿಸಲು ಸಿಪಿಎಂನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮಧ್ಯೆ ಪ್ರವೇಶ ಮಾಡಿದ್ದಾರೆ.




ಯೆಚೂರಿ

ಬಿಜೆಪಿಗೆ ಹೆಚ್ಚಿನ ಸ್ಥಾನ ಸಿಗುವುದನ್ನು ತಪ್ಪಿಸಲು ಮಾಜಿ ಪ್ರಧಾನಿ ದೇವೇಗೌಡರ ಮನವಿಗೆ ಸ್ಪಂದಿಸಿದ ಯೆಚೂರಿ, ಸೋನಿಯಾಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಕರ್ನಾಟಕದಲ್ಲಿ ಜೆಡಿಎಸ್ ಅಭ್ಯರ್ಥಿ ಬೆಂಬಲಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ಒಂದು ವೇಳೆ ಯೆಚೂರಿ ಅವರ ಮಾತಿಗೆ ಕಾಂಗ್ರೆಸ್ ವರಿಷ್ಠರು ಮನ್ನಣೆ ನೀಡಿದರೆ, ರಾಜ್ಯ ನಾಯಕರು ಅದಕ್ಕೆ ಸ್ಪಂದಿಸುತ್ತಾರೆಯೇ ಕಾದು ನೋಡಬೇಕಿದೆ. ಕಾಂಗ್ರೆಸ್ ತನಗೆ ಶಕ್ತಿ ಇಲ್ಲದಿದ್ದರೂ, ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ಜೆಡಿಎಸ್‌ನ ಮತ ಯಾಚನೆಗೆ ಮುಂದಾಗಿದೆ. ಆದರೆ ಜೆಡಿಎಸ್ ರಾಜ್ಯ ನಾಯಕರ ಮನವಿಗೆ ಸ್ಪಂದಿಸಿಲ್ಲ. ಕಾಂಗ್ರೆಸ್ ನಾಯಕರಂತೂ ತಮ್ಮ ಎರಡನೇ ಅಭ್ಯರ್ಥಿಯನ್ನು ಕಣದಿಂದ ನಿವೃತ್ತಿಗೊಳಿಸುವ ಮಾತೇ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಜು.18ಕ್ಕೆ ರಾಷ್ಟ್ರಪತಿ ಚುನಾವಣೆ ಜು.25ಕ್ಕೆ ನೂತನ ರಾಷ್ಟ್ರಪತಿ ಪದಗ್ರಹಣ


ನವದೆಹಲಿ, ಜೂ.9– ರಾಷ್ಟ್ರಪತಿ ಚುನಾವಣೆಯ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗವು ಗುರುವಾರ ಪ್ರಕಟಿಸಿದೆ. ಜುಲೈ 18ರಂದು ರಾಷ್ಟ್ರಪತಿ ಚುನಾವಣೆಗೆ ಮತದಾನ ನಡೆಯಲಿದ್ದು, ಜುಲೈ 21ರಂದು ಮತ ಎಣಿಕೆ ನಡೆಯುಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಹೇಳಿದ್ದಾರೆ. 2022ರ ಅಧ್ಯಕ್ಷೀಯ ಚುನಾವಣೆಗಳಲ್ಲಿ ಒಟ್ಟು 4,809 ಮತದಾರರು ಮತ ಚಲಾಯಿಸುತ್ತಾರೆ. ಈ ಚುನಾವಣೆಯಲ್ಲಿ ರಾಜ್ಯಸಭಾ ಚುನಾವಣೆಗಳಲ್ಲಿರುವಂತೆ ಯಾವುದೇ ರಾಜಕೀಯ ಪಕ್ಷವು ತನ್ನ ಸದಸ್ಯರಿಗೆ ವಿಪ್ ಜಾರಿಗೊಳಿಸುವಂತಿಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ. ದೇಶದ ಹಾಲಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಅವರ ಅವಧಿ ಜು.24ರಂದು ಮುಕ್ತಾಯವಾಗಲಿದೆ. ಕೊನೆಯ ಅಧ್ಯಕ್ಷೀಯ ಚುನಾವಣೆಯು 17 ಜುಲೈ 2017ರಂದು ನಡೆದಿತ್ತು.



2017ರ ಅಧ್ಯಕ್ಷೀಯ ಚುನಾವಣೆಯಲ್ಲಿ ಸುಮಾರು ಶೇ.50ರಷ್ಟು ಮತಗಳು ಎನ್‌ಡಿಎ ಪರವಾಗಿ ಇದ್ದವು. ಒಟ್ಟು 4,880 ಮತದಾರರಲ್ಲಿ 4,109 ಶಾಸಕರು ಮತ್ತು 771 ಸಂಸದರು ಮತ ಚಲಾಯಿಸಿದ್ದರು. ನೂತನ ರಾಷ್ಟ್ರಪತಿ ಜು.25ರಂದು ಅಧಿಕಾರ ಸ್ವೀಕರಿಸಲಿದ್ದಾರೆ.

ಪ್ರೀತಿಸಲು ನಿರಾಕರಿಸಿದ ಯುವತಿ ಮೇಲೆ ಮಾರಣಾಂತಿಕ ಹಲ್ಲೆ

● ಸಂಬಂಧಿಯಿಂದಲೇ ನೀಚ ಕೃತ್ಯ ● ಜನರಿಂದ ಯುವಕನಿಗೆ ಧರ್ಮದೇಟು; ಪೊಲೀಸರಿಂದ ಬಂಧನ



ಸಂಪತ್

ಮಂಡ್ಯ, ಜೂ.9(ಮೋಹನ್‌ರಾಜ್)–ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರೀತಿ ನಿರಾಕರಿಸಿದ್ದ ಯುವತಿ ಮೇಲೆ ಆ್ಯಸಿಡ್ ದಾಳಿ ನಡೆಸಿದ ಪ್ರಕರಣ ಮಾಸುವ ಮುನ್ನವೇ ಮಂಡ್ಯ ನಗರದ ಮಿಮ್ಸ್ ಆಸ್ಪತ್ರೆ ಆವರಣದಲ್ಲಿ ಪ್ರೀತಿ ಮಾಡಲು ನಿರಾಕರಿಸಿದ ಪ್ಯಾರಾ ಮೆಡಿಕಲ್ ವಿದ್ಯಾರ್ಥಿನಿ ಮೇಲೆ ಆಕೆಯ ಸಂಬಂಧಿಕ ಯುವಕನೇ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ಗುರುವಾರ ಸಂಜೆ ನಡೆದಿದೆ. ತಾಲೂಕಿನ ಗ್ರಾಮವೊಂದರ 19 ವರ್ಷದ ಪ್ಯಾರಾ ಮೆಡಿಕಲ್ ವಿದ್ಯಾರ್ಥಿನಿ ಹಿಂದೆ ಬಿದ್ದು ಪ್ರೀತಿ ಮಾಡುವಂತೆ ಪೀಡಿಸುತ್ತಿದ್ದ ಆಕೆಯ ಸಂಬಂಧಿ ಸಂಪತ್(20), ಇಂದು ಬೆಳಗ್ಗೆ ವಿದ್ಯಾರ್ಥಿನಿ ಕಾಲೇಜಿಗೆ ಹೋಗುವಾಗ ಆಕೆಯನ್ನು ಅಡ್ಡಗಟ್ಟಿ ಸಂಜೆಯೊಳಗೆ ತನ್ನನ್ನು ಪ್ರೀತಿಸುವುದಾಗಿ ಹೇಳಬೇಕು ಎಂದು ತಾಕೀತು ಮಾಡಿ ಗಡುವು ನೀಡಿದ್ದ. ಸಂಜೆ ಕಾಲೇಜಿನಿಂದ ಹೊರ ಬಂದ ಆಕೆ ಪ್ರೀತಿ ನಿರಾಕರಿಸಿದಾಗ ರಿಪೀಸ್ ಪಟ್ಟಿಯಿಂದ ಆಕೆಯ ತಲೆ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ತೀವ್ರವಾಗಿ ಗಾಯಗೊಂಡಿರುವ ವಿದ್ಯಾರ್ಥಿನಿಗೆ ಮಿಮ್ಸ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್‌ಗೆ ರವಾನಿಸಲಾಗಿದೆ. ವಿದ್ಯಾರ್ಥಿನಿ ಮೇಲೆ ಯುವಕ ಹಲ್ಲೆ ನಡೆಸುತ್ತಿದ್ದಾಗ ಆಕೆಯ ಸಹಾಯಕ್ಕೆ ಸಹಪಾಠಿಗಳು ಆಗಮಿಸಿದರಾದರೂ, ಅಷ್ಟರಲ್ಲಿ ಮಾರಣಾಂತಿಕ ಹಲ್ಲೆ ನಡೆದು ಬಿಟ್ಟಿತ್ತು. ವಿದ್ಯಾರ್ಥಿನಿಯ ಸಹಪಾಠಿಗಳು ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಯಮರಾಜ : "ಎಲೇ ಕುಡುಕನೇ, ನಿನ್ನ ಸಾವು ಹತ್ತಿರವಾಗಿದೆ. ಕೊನೆ ಆಸೆ ಏನಾದ್ರು ಇದೆಯಾ ಕೇಳು."

ಕುಡುಕ : "ಮುಂದಿನ ಜನ್ಮದಲ್ಲಿ ಹಲ್ಲನ್ನು ಒಂದೇ ಕೊಟ್ಟರೂ ಪರವಾಗಿಲ್ಲ, ಲಿವರ್ ಮಾತ್ರ 32 ಕೊಡು ಪ್ರಭು."

ಮೈಸೂರು ಮಿತ್ರ

ಶುಕ್ರವಾರ, 10 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮೊದಲು ಚಾರಿತ್ರ್ಯವನ್ನು ವೃದ್ಧಿಸಿ, ನೀವು ಮಾಡಬೇಕಾದ ಅತ್ಯುನ್ನತ ಕರ್ತವ್ಯವಿದು. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮಣದಷ್ಟು ಮಾತಿಗಿಂತ ಕಣದಷ್ಟು ಕೆಲಸ ಲೇಸು

ನಿಮ್ಮ ಪತ್ರಗಳು

ಫುಟ್‌ಪಾತ್ ಅತಿಕ್ರಮಿಸಿಕೊಂಡು ವ್ಯಾಪಾರ

ಮಾನ್ಯರೆ,



ಮೈಸೂರಿನ ಕೃಷ್ಣ ವಿಲಾಸ ರಸ್ತೆಯಲ್ಲಿ ಮಹಾರಾಣಿ ಜೂನಿಯರ್ ಕಾಲೇಜಿನ ಎದುರು ಭಾಗದಲ್ಲಿರುವ ಫಾಸ್ಟ್‌ಫುಡ್ ಅಂಗಡಿಗಳಲ್ಲಿ ಬಹಳಷ್ಟು ಅಂಗಡಿಗಳು ಸಾರ್ವಜನಿಕ ಫುಟ್‌ಪಾತ್ ಅತಿಕ್ರಮಿಸಿಕೊಂಡು ಹಗಲು– ರಾತ್ರಿ ವ್ಯಾಪಾರ ಮಾಡುತ್ತಿವೆ. ಗಿರಾಕಿಗಳು ಈ ಫಾಸ್ಟ್‌ಫುಡ್‌ಗಳ ಮುಂದೆ ಕಿಕ್ಕಿರಿದು ತುಂಬಿರುತ್ತಾರೆ. ಇದರಿಂದಾಗಿ ಪಾದಚಾರಿಗಳು, ವಯಸ್ಸಾದವರು, ಸುತ್ತಲಿನ ಶಾಲಾ–ಕಾಲೇಜು ವಿದ್ಯಾರ್ಥಿಗಳು ದಟ್ಟಣೆಯ ವಾಹನ ಸಂಚಾರವುಳ್ಳ ರಸ್ತೆಯಲ್ಲೇ ಓಡಾಡುವಂತಾಗಿದೆ. ಈ ರಸ್ತೆ ಎರಡೂ ಕಡೆ ಗಿರಾಕಿಗಳು ತಮ್ಮ ದ್ವಿಚಕ್ರ ವಾಹನಗಳು, ಕಾರುಗಳನ್ನು ಪಾರ್ಕ್ ಮಾಡುತ್ತಾರೆ. ಶನಿವಾರ, ಭಾನುವಾರದಂದು ರಾತ್ರಿ ವೇಳೆ ಈ ಫಾಸ್ಟ್‌ಫುಡ್ ಅಂಗಡಿಗಳ ಮುಂದೆ ಜನದಟ್ಟಣೆ, ವಾಹನ ದಟ್ಟಣೆ ಇನ್ನೂ ಹೆಚ್ಚಾಗಿರುತ್ತದೆ. ಹತ್ತಿರದಲ್ಲೇ ಅಂದರೆ ಶಿವರಾಂಪೇಟೆಯಲ್ಲಿ ಟ್ರಾಫಿಕ್ ಪೊಲೀಸ್ ಸ್ಟೇಷನ್ ಇದ್ದು, ಅವರು ದೇವರಾಜ ಅರಸು ರಸ್ತೆಯಲ್ಲಿ ಮಾತ್ರ ಬೀಟ್ ಮಾಡುತ್ತಾ ಅಲ್ಲಿ ಫುಟ್‌ಪಾತ್ ಅತಿಕ್ರಮಣದ ವ್ಯಾಪಾರ ನಡೆಯದಂತೆ ನೋಡಿಕೊಳ್ಳುತ್ತಿದ್ದಾರೆ. ಆದರೆ ಈ ಟ್ರಾಫಿಕ್ ಪೊಲೀಸರು ಶಾಲಾ ಕಾಲೇಜು ವಿದ್ಯಾರ್ಥಿಗಳು ಓಡಾಡುವ ಕೃಷ್ಣವಿಲಾಸ ರಸ್ತೆಯಲ್ಲಿ ಈ ಫಾಸ್ಟ್ ಫುಡ್ ಅಂಗಡಿಗಳು ಫುಟ್‌ಪಾತ್ ಅತಿಕ್ರಮಿಸಿ ವ್ಯಾಪಾರ ಮಾಡುತ್ತಿರುವುದನ್ನು ಯಾಕೆ ಕಟ್ಟುನಿಟ್ಟಾಗಿ ತಡೆಯುತ್ತಿಲ್ಲ? ಇಲ್ಲಿನ ಅಕ್ಕಪಕ್ಕದ ಅಂಗಡಿಗಳವರನ್ನು ಇದರ ಬಗ್ಗೆ ವಿಚಾರಿಸಿದಾಗ ಅವರು ಹೇಳೋದು ಪೊಲೀಸರ ಜೇಬಿಗೆ ಮಾಮೂಲು ಹೋಗುತ್ತಿರುವುದರಿಂದ, ಈ ಅವ್ಯವಸ್ಥೆ ಇಲ್ಲಿ ಮಾಮೂಲಾಗಿ ಬಿಟ್ಟಿದೆ ಎಂದು! ಹಾಗಾದರೆ ಇಲ್ಲಿ ಹೇಳೋರು ಕೇಳೋರು, ಸಾರ್ವಜನಿಕ ಹಿತಾಸಕ್ತಿ ಕಾಪಾಡಬೇಕಾದ ಜನಪ್ರತಿನಿಧಿಗಳು ಇಲ್ಲವೇ? ಅವರ ಕಚೇರಿ ಈ ರಸ್ತೆ ಹತ್ತಿರದಲ್ಲೇ ಇದ್ದು ಅವರು ಇದೇ ರಸ್ತೆಯಲ್ಲಿ ಓಡಾಡುತ್ತಿದ್ದು, ಇದು ಅವರ ಗಮನಕ್ಕೆ ಬಂದಿದ್ದರೂ, ಯಾಕೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಟ್ರಾಫಿಕ್ ಪೊಲೀಸ್ ಹಾಗೂ ನಗರಪಾಲಿಕೆ ಅಧಿಕಾರಿಗಳಿಗೆ ಏಕೆ ಸೂಚಿಸುತ್ತಿಲ್ಲ? ಫುಟ್‌ಪಾತ್ ಅತಿಕ್ರಮಣ ವ್ಯಾಪಾರವನ್ನು ತಡೆಗಟ್ಟುವ ಕಾನೂನು, ನಿಯಮಗಳು ಕೇವಲ ದೇವರಾಜ ಅರಸ್ ರಸ್ತೆಗೆ ಮಾತ್ರ ಅನ್ವಯ ಆಗುತ್ತದೆಯೇ? ಮೈಸೂರು ನಗರ ಪೊಲೀಸ್ ಆಯುಕ್ತರು ಹಾಗೂ ನಗರ ಪಾಲಿಕೆ ಆಯುಕ್ತರು, ವಾರ್ಡ್ 23 ರ ನಗರ ಪಾಲಿಕೆ ಸದಸ್ಯರು ಖುದ್ದಾಗಿ ಇಲ್ಲಿ ಪರಿಶೀಲನೆ ಮಾಡಿ, ಫುಟ್‌ಪಾತ್ ಅತಿಕ್ರಮಿಸಿ ವ್ಯಾಪಾರ ಮಾಡೋದನ್ನು ತಡೆಗಟ್ಟದಿದ್ದರೆ, ಈ ಅತಿಕ್ರಮಣ ಬೇರೆ ಬೇರೆ ರಸ್ತೆಗಳ ಫುಟ್‌ಪಾತ್‌ಗಳಿಗೂ ಹಬ್ಬುವುದರಲ್ಲಿ ಆಶ್ಚರ್ಯವಿಲ್ಲ.

–ಪ್ರೊ. ಶರ್ಮ, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಮಧುರ ಮಧುರವೀ ಮಂಜುಳಗಾನ ಮತ್ತೆ ಪ್ರಾರಂಭಿಸಿ

ಮಾನ್ಯರೆ,

ದೂರದರ್ಶನ ಚಂದನ ವಾಹಿನಿಯ ಬಹಳ ಜನಪ್ರಿಯ ಕಾರ್ಯಕ್ರಮ ಮಧುರ ಮಧುರವೀ ಮಂಜುಳಗಾನ ಕಾರ್ಯಕ್ರಮ ಒಂದು ವರ್ಷದಿಂದ ಪ್ರಸಾರ ಸ್ಥಗಿತಗೊಳಿಸಿರುವುದು ವಿಷಾದನೀಯ. ಈ ಬಗ್ಗೆ ನಿರೂಪಕ ಸಾರ್ಥವಳ್ಳಿ ನಾರಾಯಣಸ್ವಾಮಿಯವರು ತುರ್ತಾಗಿ ಕ್ರಮ ಕೈಗೊಂಡು ಸದರಿ ಕಾರ್ಯಕ್ರಮ ಮತ್ತೆ ಪ್ರಸಾರ ಕಾರ್ಯ ಪ್ರಾರಂಭಿಸಲಿ. ಇದು ಕನ್ನಡಿಗರ ಬಹಳ ಮೆಚ್ಚುಗೆಯ ಕಾರ್ಯಕ್ರಮ.

– ನೊಂದ ಕಲಾಭಿಮಾನಿಗಳು, ಮೈಸೂರು.

ತಪ್ಪು ಒಪ್ಪಿಕೊಂಡ ಶಿಕ್ಷಣ ಸಚಿವರು ನಿವೃತ್ತಿ ಹೊಂದಬೇಕು

ಮಾನ್ಯರೆ,

ಈಗಾಗಲೇ ಪಠ್ಯಪುಸ್ತಕಗಳಲ್ಲಾಗಿರುವ ಲೋಪದೋಷಗಳನ್ನು ಬೇಗ ಸರಿಪಡಿಸಲಾಗುವುದು. ಮತ್ತು ಅದರಲ್ಲಾದ ತಪ್ಪುಗಳನ್ನು "ನಾವು" ಒಪ್ಪಿಕೊಳ್ಳುತ್ತೇವೆ ಎಂದು ಮಾನ್ಯ ಶಿಕ್ಷಣ ಸಚಿವರು, ಹಾಲಿ ಶಾಸಕರು ಹೇಳಿದ್ದಾರೆ. ಹಾಗಾದರೆ ಇವರು ಗೊತ್ತಿದ್ದು ತಪ್ಪು ಮಾಡಿದಂತಾಯಿತು. ಸಚಿವರ ಬಾಯಲ್ಲಿ "ನಾವು" ಎಂದು ಬಂದಿರುವ ಪದವನ್ನು ಸೂಕ್ಷ್ಮವಾಗಿ ಗಮನಿಸಬೇಕು ನಾವು ಎಂದರೆ ಇನ್ನೂ ಮುಂತಾದವರು ಈ ಪಠ್ಯ ಪುಸ್ತಕ ಬದಲಾಯಿಸಲು ಸೇರಿದ್ದಾರೆ ಎಂದಾಯಿತು. ಇಂತಹವರ ಮೇಲೆ ಸರ್ಕಾರ ಸರಿಯಾದ ಕಾನೂನು ಕ್ರಮ ಜರುಗಿಸಬೇಕು.

ಮತ್ತು ಮೂರು ವರ್ಷದಿಂದ ಕೋವಿಡ್ 19ನಿಂದ ಶಾಲಾ ಕಾಲೇಜು ನೋಡದ ವಿದ್ಯಾರ್ಥಿಗಳು ಈಗ ತಾನೇ ಶಾಲೆಗೆ ಹೋದರೆ ಉತ್ತಮವಾದ ವಿದ್ಯಾಭ್ಯಾಸ ನೀಡಬೇಕೆಂಬುದನ್ನು ಅರಿಯದೆ, ಇಲ್ಲಸಲ್ಲದ ತಪ್ಪು ವಿಚಾರಧಾರೆಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿ ಮಕ್ಕಳು ಹಾಗೂ ಯುವಕರನ್ನು ದಿಕ್ಕು ತಪ್ಪಿಸಲು ಮುಂದಾಗಿರುವ ಸರ್ಕಾರ ನಮಗೆ ಯಾಕೇ ಬೇಕು?

ಸಚಿವ ಮತ್ತು ಶಾಸಕ ಸ್ಥಾನದಿಂದ ಸ್ವಯಂ ಪ್ರೇರಣೆಯಿಂದ ಬಿ.ಸಿ. ನಾಗೇಶ್ ರವರು ನಿವೃತ್ತಿಹೊಂದಬೇಕು. ಈಗಾಗಲೇ ಹಿಂದೆ ಇದ್ದ ಸೈಕಲ್ ಯೋಜನೆಯೂ ಇದೆಯಾ ಇಲ್ಲವೋ ಯಾರಿಗೆ ಗೊತ್ತು? ಕೋವಿಡ್ ನೆಪದಲ್ಲಿ ಮೂರು ವರ್ಷದಿಂದ ಪ್ರೌಢಶಾಲೆ ಮಕ್ಕಳಿಗೆ ವಿತರಣೆ ಮಾಡಿಲ್ಲ. ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚೆ ಮಾಡದೆ ಸರಿಯಾದ ಮಾಹಿತಿಯನ್ನು ಕೊಡುವುದಕ್ಕೆ ಆಗದಿರುವ ಶಿಕ್ಷಣ ಸಚಿವರು ನಮ್ಮ ರಾಜ್ಯದ ಶಿಕ್ಷಣ ಇಲಾಖೆಯನ್ನು ಹೇಗೆ ಅಭಿವೃದ್ಧಿ ಪಡಿಸುತ್ತಾರೆ? ಈಗ ಮಾಡಿರುವ ತಪ್ಪಿನಿಂದ ರಾಜ್ಯ ಶಿಕ್ಷಣ ಇಲಾಖೆಗೂ ಹಾಗೂ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುವವರಿಗೆ ಈ ಮೂಲಕ ಅಗೌರವ ತಂದಿದ್ದಾರೆ. ದಯವಿಟ್ಟು ಸರ್ಕಾರ ಸರಿಯಾದ ಕ್ರಮವನ್ನು ಹೊರಡಿಸಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ರಾಜ್ಯ ಮಟ್ಟದಲ್ಲಿ ಹೋರಾಟಗಳು ನಡೆಯುವ ಸಂಭವ ಹೆಚ್ಚಾಗಲಿದೆ....

–ನಾಗೇಶ್ .ಕೇ ಮಾನಸಗಂಗೋತ್ರಿ.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭಾರತ ವಿಶ್ವದ ಯೋಗಗುರು

ಯೋಗೇನ ಚಿತ್ತಸ್ಯ ಪದೇನ ವಾಚಾಂ
ಮಲಂ ಶರೀರಸ್ಯ ಚ ವೈದ್ಯಕೇನ ।
ಯೋಽಪಾಕರೋತ್ತಂ ಪ್ರವರಂ ಮುನೀನಾಂ
ಪತಂಜಲಿಂ ಪ್ರಾಂಜಲಿರಾನತೋಽಸ್ಮಿ॥

ಸಹಸ್ರ ವರ್ಷಗಳ ಹಿಂದೆ ವಿದ್ಯೆಯನ್ನು ಕಲಿಯಲು ವಿದ್ಯಾರ್ಥಿಗಳು ಭಾರತ ದೇಶಕ್ಕೆ ನಾನಾ ದಿಕ್ಕುಗಳಿಂದ ಬರುತ್ತಿದ್ದರಂತೆ. ತಕ್ಷಶಿಲಾ, ನಲಂದಾ ಮುಂತಾದ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣವನ್ನು ಪಡೆದು ತಮ್ಮ ನಾಡಿಗೆ ಹಿಂದಿರುಗುತ್ತಿದ್ದ ವಿದ್ಯಾರ್ಥಿಗಳು ಮನ್ನಣೆಗೂ ಗೌರವಕ್ಕೂ ಪಾತ್ರರಾಗುತ್ತಿದ್ದರಂತೆ. ಅಂದು ಆ ವಿಶ್ವವಿದ್ಯಾಲಯಗಳು ಕಲಿಸುತ್ತಿದ್ದ ವೇದ, ವೇದಾಂಗ, ವೇದಾಂತಾದಿ ಶಾಸ್ತ್ರಗಳಿಗೆ ಇಂದು ಬೆಲೆ ಇಲ್ಲವಾದರೂ ಯೋಗಕ್ಕೆ ಸಮಸ್ತ ಪ್ರಪಂಚದಲ್ಲಿ ಮಾನ್ಯತೆ ದೊರಕಿರುವುದರಿಂದ ಅನೇಕ ದೇಶಗಳ ನೂರಾರು ಯೋಗ ವಿದ್ಯಾರ್ಥಿಗಳು ಭಾರತ ದೇಶಕ್ಕೆ ಬಂದು ಕಲಿಯುತ್ತಿದ್ದಾರೆ. ವಿದೇಶಗಳಲ್ಲೂ ಈಗ ಎಲ್ಲಾ ನಗರಗಳಲ್ಲಿ ಯೋಗ ಶಾಲೆಗಳು ಆರಂಭಗೊಂಡಿವೆ. ಭಾರತದಲ್ಲಿ ಕೆಲವು ತಿಂಗಳಾದರೂ ನೆಲೆಸಿ ಉತ್ತಮೋತ್ತಮ ಯೋಗಾಚಾರ್ಯರಿಂದ ಶಿಕ್ಷಣವನ್ನು ಪಡೆಯಬೇಕೆಂಬ ಹಂಬಲ ಎಲ್ಲ ಯೋಗ ವಿದ್ಯಾರ್ಥಿಗಳಲ್ಲಿರುವುದನ್ನು ಕಾಣುತ್ತೇವೆ.

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಸ್ವಯಂ ಯೋಗದ ಮಹತ್ವವನ್ನರಿತು ವಿಶ್ವ ಯೋಗ ದಿನದ ಆಚರಣೆಗೆ ಮುಖ್ಯ ಕಾರಣರಾದರು. ಇದರಿಂದ ಭಾರತ ದೇಶದಲ್ಲಿ ಯೋಗಾಭ್ಯಾಸವನ್ನು ಮಾಡುವವರ ಸಂಖ್ಯೆ ನೂರ್ಮಡಿಯಾಗಿ ಬೆಳೆದಿದೆ. ಹಿತ್ತಲ ಗಿಡ ಮದ್ದಲ್ಲ ಎಂಬ ಧೋರಣೆ ದೂರವಾಗಿ ಯೋಗದ ನಾನಾ ಉಪಯೋಗಗಳು ಜನರ ಅರಿವಿಗೆ ಬಂದಿವೆ. ಎಷ್ಟೋ ಶಾಲೆಗಳಲ್ಲಿ ಸಮಸ್ತ ವಿದ್ಯಾರ್ಥಿಗಳು ಯೋಗವನ್ನು ಕಲಿಯುತ್ತಿದ್ದಾರೆ.

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥

ಎಂಬ ಭಗವದ್ಗೀತಾ ವಾಕ್ಯದಂತೆ ಒಬ್ಬ ಶ್ರೇಷ್ಠ ವ್ಯಕ್ತಿಯ ದೃಷ್ಟಾಂತ ಲಕ್ಷ ಜನರ ಜೀವನ ಪರಿವರ್ತನೆಗೆ ಕಾರಣ ವಾಗಿದೆ. ಈ ವರ್ಷ ವಿಶ್ವಯೋಗ ದಿನದಂದು ಪ್ರಧಾನ ಮಂತ್ರಿಗಳು ಮೈಸೂರಿಗೆ ಬಂದು ಸಾಮೂಹಿಕ ಯೋಗಾಭ್ಯಾಸದಲ್ಲಿ ಭಾಗವಹಿಸುವರೆಂಬುದು ಇಲ್ಲಿಯ ಎಲ್ಲಾ ಯೋಗ ವಿದ್ಯಾರ್ಥಿಗಳ ಉತ್ಸಾಹವನ್ನು ಹೆಚ್ಚಿಸಿದೆ.

ಪತಂಜಲಿಯ ಅಷ್ಟಾಂಗಯೋಗ



ಯೋಗವು ಭಾರತ ದೇಶದಲ್ಲಿ ಅನಾದಿ ಕಾಲದಿಂದ ಪ್ರಚಲಿತವಾಗಿತ್ತು. ವೇದಗಳಲ್ಲೂ ಉಪನಿಷತ್ತುಗಳಲ್ಲೂ ಯೋಗದ ಪ್ರಸ್ತಾವವಿದೆ. ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ ಯತಯಃ ಶುದ್ಧಸತ್ವಾಃ ಎಂಬ ಮಂತ್ರವನ್ನು ಎಲ್ಲರೂ ಕೇಳಿದ್ದೇವೆ. ಯೋಗ ಎಂಬುದು ಕೇವಲ ವ್ಯಾಯಾಮವಲ್ಲ, ಅದೊಂದು ಜೀವನ ದರ್ಶನ ಎಂಬುದನ್ನು ಮಹರ್ಷಿ ಪತಂಜಲಿಯು ತನ್ನ ಯೋಗಸೂತ್ರಗಳಲ್ಲಿ ಪ್ರತಿಪಾದಿಸಿದ್ದಾನೆ. ಅವನ ಸಿದ್ಧಾಂತದ ಪ್ರಕಾರ ಯೋಗ ಮನಶ್ಶುದ್ಧಿಗೆ ಕಾರಣವಾಗಿ ಆತ್ಮನ ಕೈವಲ್ಯಕ್ಕೂ ಮಾರ್ಗವಾಗುತ್ತದೆ. ಅವನು ಹೇಳಿರುವ ಅಷ್ಟಾಂಗಗಳು – ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿ. ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಐದು ಯಮಗಳು ಯೋಗಿಯು ಬಾಹ್ಯ ಜೀವನದಲ್ಲಿ ಅನುಸರಿಸಬೇಕಾದ ಶಿಸ್ತುಗಳು. ಶೌಚ, ಸಂತೋಷ, ತಪಸ್, ಸ್ವಾಧ್ಯಾಯ, ಈಶ್ವರ ಪ್ರಣಿಧಾನ ಎಂಬ ಐದು ನಿಯಮಗಳು ಯೋಗಿಯು ಅಂತರ್ಜೀವನದಲ್ಲಿ ಅನುಸರಿಸಬೇಕಾದ ಶಿಸ್ತುಗಳು. ಆಸನವು ಧ್ಯಾನಕ್ಕೆ ಅನುಕೂಲವಾದ, ಮನಸ್ಸಿನ ಏಕಾಗ್ರತೆಗೆ ಸಾಧಕವಾದ ಶರೀರದ ಸ್ಥಿತಿ. ಪ್ರಾಣಾಯಾಮವು ಪೂರಕ, ಕುಂಭಕ, ರೇಚಕ ಎಂಬ ರೂಪದ ಶ್ವಾಸ ನಿಯಂತ್ರಣ ಮತ್ತು ದೀರ್ಘೀಕರಣ. ಪ್ರತ್ಯಾಹಾರವು ಇಂದ್ರಿಯ ನಿಗ್ರಹ. ಧಾರಣೆಯು ಏಕವಸ್ತುವಿನಲ್ಲಿ ಮನಸ್ಸನ್ನು ನಿಲ್ಲಿಸುವ ಯತ್ನವಿಶೇಷ. ಒಂದೇ ಲಕ್ಷ್ಯವು ಮನಸ್ಸಿನಲ್ಲಿ ನಿಲ್ಲುವಂತೆ ಮಾಡಿ ಅದನ್ನು ಸಾಕ್ಷಾತ್ಕರಿಸಿಕೊಳ್ಳುವುದು ಧ್ಯಾನ ಸಾಕ್ಷಾತ್ಕರಿಸಿಕೊಂಡ ವಸ್ತುವೇ ಉಳಿದು ಮನಸ್ಸು ಅದರಲ್ಲೇ ಕರಗಿ ಅಭಿನ್ನವಾಗುವ ಉನ್ನತ ಸ್ಥಿತಿ ಸಮಾಧಿ. ಇವುಗಳನ್ನು ಪತಂಜಲಿಯು ಹಲವು ಸೂತ್ರಗಳಿಂದ ಪ್ರತಿಪಾದಿಸಿದ್ದಾನೆ. ಇವುಗಳ ಸ್ಪಷ್ಟ ವಿವರಣೆ ವ್ಯಾಸಭಾಷ್ಯದಲ್ಲೂ ವಾಚಸ್ಪತಿ ಮಿಶ್ರನ ಯೋಗ ವೈಶಾರದೀ ಎಂಬ ವ್ಯಾಖ್ಯಾನದಲ್ಲೂ ಲಭ್ಯವಾಗುತ್ತದೆ. ಅನೇಕ ಭಾರತೀಯರೂ ಪಾಶ್ಚಾತ್ಯ ವಿದ್ವಾಂಸರೂ ಈ ಬಗೆಗೆ ಹಲವಾರು ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ.

ಭಗವದ್ಗೀತೆ

ಯೋಗದ ಬಗೆಗೆ ಮಾಹಿತಿಯನ್ನು ನೀಡುವ ಉತ್ತಮ ಗ್ರಂಥ ಭಗವದ್ಗೀತೆ. ಅದು ಮಹಾಭಾರತದ ಭೀಷ್ಮ ಪರ್ವದ ಆದಿಯಲ್ಲಿದೆ. ಅದರ ಹದಿನೆಂಟು ಅಧ್ಯಾಯಗಳಲ್ಲಿ ಒಂದೊಂದಕ್ಕೂ ಯೋಗ ಶಬ್ದಾಂತವಾದ ಹೆಸರೇ ಇದೆ. ಅದು ಕೃಷ್ಣಾರ್ಜುನರ ಸಂವಾದದ ರೂಪದಲ್ಲಿದ್ದು, ಯೋಗೇಶ್ವರನಾದ ಕೃಷ್ಣನು ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ ಮುಂತಾದುವನ್ನು ಅರ್ಜುನನಿಗೆ ಉಪದೇಶಿಸಿದ್ದಾನೆ. ಯೋಗಃ ಕರ್ಮಸು ಕೌಸಲಮ್, ಸಮತ್ವಂ ಯೋಗ ಉಚ್ಯತೇ ಎಂಬುದಾಗಿ ಯೋಗದ ಲಕ್ಷಣಗಳನ್ನು ಭಗವದ್ಗೀತೆಯು ಹೇಳಿದೆ. ಪತಂಜಲಿಯ ಯೋಗ ಸೂತ್ರಗಳ ಸಾರವನ್ನೇ ಭಗವದ್ಗೀತೆಯು ವಿವರಿಸಿ ವಿಶದಗೊಳಿಸಿದೆ ಎನ್ನಬಹುದು. ಯೋಗಿಯು ಇನ್ನೂ ಸಾಧನೆ ಮಾಡುತ್ತಿದ್ದಾಗ ಅವನು ಆರುರುಕ್ಷು (ಮೇಲೇರಲು ಪ್ರಯತ್ನಿಸುತ್ತಿರುವವನು) ಅವನು ಜಗತ್ತಿನ ಲೋಕೋಪಕಾರಕ ಕರ್ಮಗಳಲ್ಲಿ ತೊಡಗಿ ಮನಸ್ಸಿನ ಶುದ್ಧಿಯನ್ನು ಮಾಡಿಕೊಳ್ಳಬೇಕು. ಯೋಗಿಯು ಸಂಪೂರ್ಣ ಸಿದ್ಧಿಯನ್ನು ಪಡೆದಾಗ ಯೋಗಾರೂಢ. ಆಗ ಅವನಿಗೆ ಕರ್ಮವು ಬೇಡ, ಶಮ ಅಥವಾ ಶಾಂತಿಯೇ ಮುಖ್ಯ ಲಕ್ಷಣವಾಗುವುದು ಎಂದು 6ನೆಯ ಅಧ್ಯಾಯದಲ್ಲಿ ಭಗವದ್ಗೀತೆಯು ತಿಳಿಸಿದೆ.

ಆರುರುಕ್ಷೋರ್ಮುನೇರ್ಯೋಗಂ
ಕರ್ಮಕಾಣಮುಚ್ಯತೇ।
ಯೋಗಾರೂಢಸ್ಯ ತಸ್ಯೈವ ಶಮಃ
ಕಾರಣಮುಚ್ಯತೇ॥

ಎಂಬುದು ಗೀತೆಯ ಮಾತು. ಚಿತ್ತವೃತ್ತಿ ನಿರೋಧವೇ ಯೋಗ ಎಂದು ಹೇಳಿದ ಪತಂಜಲಿಯು ಅದು ಹೇಗೆ ಸಾಧಿಸಲ್ಪಡುವುದು ಎಂಬುದಕ್ಕೆ ಅಭ್ಯಾಸವೈರಾಗ್ಯಾಭ್ಯಾರಿ ತನ್ನಿರೋಧಃ ಎಂದು ಉತ್ತರಿಸಿದ್ದಾನೆ. ಸತತವಾದ ಅಭ್ಯಾಸ ಮತ್ತು ಲೋಕದ ಸುಖಗಳಲ್ಲಿ ಅನಾಸಕ್ತಿ– ಇವುಗಳಿಂದ ಚಿತ್ತದ ನಿರೋಧ ಎಂಬುದು ಅದರ ತಾತ್ಪರ್ಯ. ಇದನ್ನೇ ಭಗವದ್ಗೀತೆಯು–

ಅಸಂಶಯಂ ಮಹಾಬಾಹೋ
ಮನೋ ದುರ್ನಿಗ್ರಹಂ ಚಲಮ್ ।
ಅಭ್ಯಾಸೇನ ತು ಕೌಂತೇಯ
ವೈರಾಗ್ಯೇಣ ಚ ಗೃಹ್ಯತೇ॥

"ಮನಸ್ಸು ಚಂಚಲವಾದುದರಿಂದ ಅದನ್ನು ನಿಗ್ರಹಿಸುವುದು ಕಷ್ಟ ಎಂಬುದರಲ್ಲಿ ಸಂಶಯವಿಲ್ಲ. ಆದರೂ ಅಭ್ಯಾಸ ಮತ್ತು ವೈರಾಗ್ಯಗಳಿಂದ ಅದನ್ನು ನಿಗ್ರಹಿಸಬಹುದು" ಎಂದು ವಿಶದೀಕರಿಸಿದೆ. ಈ ಕಾರಣದಿಂದಲೇ ಗೀತೆಯನ್ನು ಯೋಗಶಾಸ್ತ್ರ ಎಂದು ಕರೆದಿದ್ದಾರೆ.

ಪರಂಪರೆ

ರಾಜಪರಂಪರೆಯು ಯೋಗವನ್ನು ರಕ್ಷಿಸಿತು. ಜನಕ ಮುಂತಾದ ರಾಜರ್ಷಿಗಳು ಕರ್ಮ ಯೋಗದಿಂದ ಪೂರ್ಣಸಿದ್ಧಿಯನ್ನು ಪಡೆದರು ಎಂದು ಭಗವದ್ಗೀತೆಯು ತಿಳಿಸಿದೆ. ಇತ್ತೀಚೆಗೆ ಪ್ರಾತಃಸ್ಮರಣೀಯ ಕೃಷ್ಣಮಾಚಾರ್ಯರು, ಅವರ ಶಿಷ್ಯರಾಗಿದ್ದ ಬಿ.ಕೆ.ಎಸ್. ಅಯ್ಯಂಗಾರ್ಯರು, ಪಟ್ಟಾಭಿ ಜೋಯಿಸರು ಮೈಸೂರಿನಲ್ಲಿ ಯೋಗ ಪರಂಪರೆ ಅನುಸ್ಯೂತವಾಗಿ ಮುಂದುವರಿಯಲು ಕಾರಣರಾಗಿದ್ದಾರೆ. ಮೈಸೂರಿನ ಬೀದಿಗಳಲ್ಲಿ ನೂರಾರು ವೈದೇಶಿಕರು ಕಂಡು ಬರಲು ಮುಖ್ಯ ಕಾರಣ ಇವರ ಶಿಷ್ಯರು, ಪ್ರಶಿಷ್ಯರು. ಇದರಿಂದ ಮೈಸೂರು ಯೋಗರಾಜಧಾನಿ ಎನಿಸಿಕೊಳ್ಳಲು ಅರ್ಹವಾಗಿದೆ.

ಯೋಗಶಬ್ದದ ಅರ್ಥ ಕೇವಲ ಯೋಗಾಸನ ಎಂದು ಈಗ ಪ್ರಚಾರವಾಗುತ್ತಿದೆ. ಯೋಗದ ಎಂಟು ಅಂಗಗಳಲ್ಲಿ ಆಸನ ಒಂದು ಮಾತ್ರ. ಯೋಗದ ಸಮಗ್ರಾರ್ಥವನ್ನೂ ಅದರ ಮುಖ್ಯ ಉದ್ದೇಶವಾದ ಕೈವಲ್ಯದ ಸಾಧನೆ–ಸ್ವರೂಪಗಳನ್ನು ಇಂದಿನ ಅಭ್ಯಾಸಿಗಳು ಅರಿತುಕೊಂಡರೆ ಚೆನ್ನ. ಯೋಗದರ್ಶನದ ಮೂಲಾಂಶಗಳನ್ನೂ ತಿಳಿದುಕೊಳ್ಳದೆ ಯೋಗಿಗಳಾಗುವುದು ಹೇಗೆ ಸಾಧ್ಯ ಎಂಬುದನ್ನು ಯೋಚಿಸಬೇಕು.

ಯೋಗದರ್ಶನವು ದೇವರ ಅಸ್ತಿತ್ವವನ್ನು ಒಪ್ಪಿದೆ. ದೇವರನ್ನು ಅದು ಈಶ್ವರ ಎಂದು ಕರೆದಿದೆ. ಕ್ಲೇಶಕರ್ಮ ವಿಪಾಕಾಶಯೈಃ ಅಪರಾಮೃಷ್ಟಃ ಪುರುಷ ವಿಶೇಷಃ ಈಶ್ವರಃ ಎಂಬುದು ಪತಂಜಲಿಯ ಸೂತ್ರ. ಇದಕ್ಕೆ ವೇದಗಳನ್ನು ಪ್ರಮಾಣವಾಗಿಯೂ ಪತಂಜಲಿ ಅಂಗೀಕರಿಸಿದ್ದಾನೆ. ಆದ್ದರಿಂದ ಯೋಗವು ಆಸ್ತಿಕದರ್ಶನ. ಪ್ರಕೃತಿ ಪುರುಷರ ಪೃಥಕ್ತ್ವವನ್ನು ಅರಿತುಕೊಳ್ಳಬೇಕು. ಆ ವಿವೇಕವು ಕೈವಲ್ಯವೆಂಬ ಪರಮ ಪುರುಷಾರ್ಥವನ್ನು ಉಂಟು ಮಾಡುವುದು. ಅದರ ಮೂಲಕ ಕ್ಲೇಶ–ಕರ್ಮ–ವಿಪಾಕಗಳಿಂದ ಮುಕ್ತಿ, ಆತ್ಮನು ಆಗ ತನ್ನ ಸ್ವರೂಪಾನಂದನಲ್ಲಿರಬಹುದು ಎಂಬುದು ಅದರ ಸಿದ್ಧಾಂತ. ಇದರ ಸೋಪಾನವಾಗಿ ಅಷ್ಟಾಂಗ ಯೋಗವನ್ನು ಉಪದೇಶಿಸಲಾಗಿದೆ. ಮೆಟ್ಟಿಲು ಅಂದವಾಗಿದೆಯೆಂದು ಅದರಲ್ಲೇ ಕುಳಿತುಕೊಂಡಿರಬಾರದು. ಅದನ್ನೇರಿ ಹೋಗಿ ಗಮ್ಯಸ್ಥಳವನ್ನು ಸೇರಬೇಕು.

'ತಸ್ಮಾದ್ ಯೋಗೀ ಭವಾರ್ಜುನ'

ಎಂಬ ಶ್ರೀಕೃಷ್ಣನ ಸಂದೇಶ ಸಾರ್ಥಕವಾಗಲಿ.

ಮೈಸೂರು, ಕೊಡಗಿಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ 6 ದಿನಗಳ ಭೇಟಿ

ಮೈಸೂರು, ಜೂ.9(ಆರ್‌ಕೆ)–ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಕುಟುಂಬ ಸಮೇತ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ 6 ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಬುಧವಾರ ಸಂಜೆ 4.30 ಗಂಟೆ ವೇಳೆಗೆ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿದ ಅವರನ್ನು ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಸಿ.ಹೆಚ್.ವಿಜಯ ಶಂಕರ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ವಿಮಾನ ನಿಲ್ದಾಣದ ನಿರ್ದೇಶಕ ಆರ್.ಮಂಜುನಾಥ್ ಅವರು ಬರಮಾಡಿಕೊಂಡರು.

ಮೈಸೂರಿನ ರ‍್ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ಅಂದು ರಾತ್ರಿ ಪತ್ನಿ ಕಾಂಚನಾ ಗಡ್ಕರಿ ಹಾಗೂ ಕುಟುಂಬದ ಸದಸ್ಯರೊಂದಿಗೆ ವಾಸ್ತವ್ಯ ಹೂಡಿದ್ದ ನಿತಿನ್ ಗಡ್ಕರಿ ಗುರುವಾರ ಕೊಡಗು ಜಿಲ್ಲೆಗೆ ಭೇಟಿ ನೀಡಿದ್ದಾರೆ ಎಂದು ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಇದು ಅವರ ಖಾಸಗಿ ಭೇಟಿಯಾಗಿದ್ದು, ಯಾವುದೇ ಅಧಿಕೃತ ಸರ್ಕಾರಿ ಕಾರ್ಯಕ್ರಮವಲ್ಲ. ಇಂದು ಬೆಳಗ್ಗೆ ಗಡ್ಕರಿ ಅವರು ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಆಶೀರ್ವಾದ ಪಡೆದರು. ಮಧ್ಯಾಹ್ನ ಕೊಡಗು ಜಿಲ್ಲೆಯ ಪಾಲಿಬೆಟ್ಟಕ್ಕೆ ತೆರಳಿರುವ ಅವರು, ಅಲ್ಲಿನ ತನ್ನಿರ್‌ಹುಲ್ಲಾ ಬಂಗಲೋದಲ್ಲಿ ವಾಸ್ತವ್ಯ ಹೂಡುವರು. ನಾಳೆ (ಜೂ.10) ಸಚಿವರು ಕುಟುಂಬದವರೊಂದಿಗೆ ತಾಜ್ ಮಡಿಕೇರಿ ರೆಸಾರ್ಟ್ ಅಂಡ್ ಸ್ಪಾದಲ್ಲಿ ಸೋಮವಾರದವರೆಗೆ ವಾಸ್ತವ್ಯ ಹೂಡಲಿದ್ದು, ಅಂದು ಬೆಳಗ್ಗೆ ಮೈಸೂರಿಗೆ ಬಂದು ಚಾರ್ಟರ್ಡ್ ವಿಮಾನದಲ್ಲಿ ನಾಗಪುರ್‌ಗೆ ಹಿಂದಿರುಗುವರು ಎಂದು ಮೂಲಗಳು ತಿಳಿಸಿವೆ.







ಅಪಘಾತದಿಂದ ನಿಧನರಾದ ಪತ್ರಿಕಾ ವಿತರಕ ಸುರೇಶ್ ಅವರ ಪತ್ನಿ ಶ್ರೀಮತಿ ಪ್ರತಿಮಾ ಮತ್ತು ಅನಾರೋಗ್ಯದಿಂದ ಮೃತಪಟ್ಟ ಸುಮಂತ್ ಗೌಡ ಅವರ ತಾಯಿ ಪುಟ್ಟಲಕ್ಷ್ಮಮ್ಮ ಅವರಿಗೆ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಮತ್ತು ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಮೂರು ಕೇಂದ್ರಗಳ ಎಲ್ಲಾ ಪತ್ರಿಕಾ ವಿತರಕರ ವತಿಯಿಂದ ಸಾಂತ್ವನ ಹೇಳಿ, 3,500 ರೂ.ಗಳ ಚೆಕ್ ಹಸ್ತಾಂತರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಹೋಮದೇವ ಜೆ.ಎಸ್., ಪದಾಧಿಕಾರಿಗಳಾದ ಶ್ರೀಕಾಂತ, ದತ್ತಾತ್ರೇಯ, ಸಿ.ಡಿ.ಹರೀಶ್, ಗೋವಿಂದ ಶೆಟ್ಟಿ, ಎಂ.ನಾಗರಾಜು, ಶಿವಕುಮಾರ್, ಹರಿರಾವ್, ಈಶ್ವರ ಪ್ರಸಾದ್ ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು,ಜೂ.9–ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ 2021–22 ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಲು ಜೂ.30ರವರೆಗೆ ವಿಸ್ತರಣೆಯಾಗಿದೆ. ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್–ನಂತರದ ಪರಿಶಿಷ್ಟಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ssp.postmatrickarnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0821–25201910 ಸಂಪರ್ಕಿಸಬಹುದು.

ಒಂದು ವೇಳೆ ನಾನು ಸತ್ತರೆ ಅದಕ್ಕೆ ನನ್ನ ಅಪ್ಪ–ಅಮ್ಮನೇ ಕಾರಣ

ಪ್ರಿಯಕರನೊಂದಿಗೆ ಶಾಲಿನಿ ಮಾತನಾಡಿದ್ದ ಆಡಿಯೋ ವೈರಲ್

ಮೈಸೂರು, ಜೂ.9(ಆರ್‌ಕೆ)–'ನಾನೊಂದು ವೇಳೆ ಸತ್ತರೆ ಅದಕ್ಕೆ ನನ್ನ ಅಪ್ಪ–ಅಮ್ಮನೇ ಕಾರಣ' ಎಂದು ಬದುಕಿದ್ದಾಗ ಶಾಲಿನಿ ತನ್ನ ಪ್ರಿಯಕರನೊಂದಿಗೆ ಮಾತನಾಡಿದ್ದ ಆಡಿಯೋ ವೈರಲ್ ಆಗಿದೆ. ಪಿರಿಯಾಪಟ್ಟಣ ತಾಲೂಕು, ಕಗ್ಗುಂಡಿ ಗ್ರಾಮದಲ್ಲಿ ನಡೆದ ಶಾಲಿನಿ ಮರ್ಯಾದಾ ಹತ್ಯೆ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಪೊಲೀಸ್ ತನಿಖೆಗೆ ಸಾಕ್ಷ್ಯಾಧಾರಗಳು ದೊರೆಯುತ್ತಿವೆ.

ನಿನ್ನಿಷ್ಟದಂತೆ ಬದುಕಲು ಬಿಡುತ್ತೇವೆಂದು ಹೇಳಿ ಬಾಲಮಂದಿರದಿಂದ ಕರೆತಂದು ನಮ್ಮಪ್ಪ–ಅಮ್ಮ ನನ್ನನ್ನು ಕೆಲಸಕ್ಕಾಗಿ ಪಾಂಡವಪುರಕ್ಕೆ ಕಳುಹಿಸಿದ್ದಾರೆ. ನಾನು ಮಾತನಾಡುವುದನ್ನು ರೆಕಾರ್ಡ್ ಮಾಡಿಕೋ. ನಾನೊಂದು ವೇಳೆ ಸತ್ತರೆ ಆ ಆರೋಪವನ್ನು ನಿನ್ನ ಮೇಲೆ ಹೊರಿಸುವ ಸಾಧ್ಯತೆ ಇದೆ ಎಂದು ಶಾಲಿನಿ ಪ್ರಿಯಕರ ಮಂಜುವಿಗೆ ಎಚ್ಚರಿಸಿದ್ದಳು. ನೀನು ಬಾಲಮಂದಿರದಿಂದ ಬರಬಾರದಾಗಿತ್ತು. ನಿನಗೆ 18 ವರ್ಷ ವಯಸ್ಸಾಗುವವರೆಗೆ ಹುಷಾರಾಗಿರು. ಒಂದು ವೇಳೆ ನಿನಗೇನಾದರೂ ಆದರೆ, ನನಗೆ ಕಾಲ್ ಮಾಡು ಎಂದು ಮಂಜು ಹೇಳಿದ್ದನು. ಫೋನ್ ಮೂಲಕ ಶಾಲಿನಿ ಮಾತನಾಡಿದ್ದ ಆಡಿಯೋವನ್ನು ಮಂಜು ಈಗ ಪಿರಿಯಾಪಟ್ಟಣ ಠಾಣೆ ಪೊಲೀಸರಿಗೆ ನೀಡಿದ್ದು, ನನ್ನ ಪ್ರಿಯತಮೆ ಕೊಂದವರಿಗೆ ಶಿಕ್ಷೆಯಾಗಬೇಕೆಂದು ಮನವಿ ಮಾಡಿದ್ದಾರೆ.

ಕುಡಿದು ಬಂದು ಸದಾ ಉಪಟಳ: ಪತ್ನಿ, ತಂದೆಯಿಂದಲೇ ಎಲೆಕ್ಟ್ರಿಷಿಯನ್ ಹತ್ಯೆ

ಭಾಗಮಂಡಲ, ಜೂ.9–ಎಲೆಕ್ಟ್ರಿಷಿಯನ್ ಓರ್ವನನ್ನು ಪತ್ನಿ ಮತ್ತು ಆತನ ತಂದೆ ಹತ್ಯೆ ಮಾಡಿರುವುದು ಮರಣೋತ್ತರ ಪರೀಕ್ಷೆ ವರದಿಯಿಂದ ಬೆಳಕಿಗೆ ಬಂದಿದ್ದು, ಅವರಿಬ್ಬರನ್ನು ಭಾಗಮಂಡಲ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇಲ್ಲಿಗೆ ಸಮೀಪದ ತಣ್ಣೀಮಾನಿ ಗ್ರಾಮದ ಎಲೆಕ್ಟ್ರಿಷಿಯನ್ ಕೆ.ಎಸ್.ಡ್ಯಾನಿ (29) ಹತ್ಯೆಗೀಡಾದವನಾಗಿದ್ದು, ಈತನ ಪತ್ನಿ, ಅಂಗನವಾಡಿ ಕಾರ್ಯಕರ್ತೆ ಕೆ.ಡಿ.ಅನುಪ್ರಿಯ(25) ಹಾಗೂ ಆತನ ತಂದೆ ಸುಗುಣಾ ಎಸ್.ಕುಡುಕುಳಿ(53) ಬಂಧನಕ್ಕೊಳಗಾದವರು.

ವಿವರ: ಮದ್ಯಪಾನ ಮಾಡುವ ಚಟವಿದ್ದ ತನ್ನ ಪತಿ ಡ್ಯಾನಿ ಮೇ 28ರಂದು ಮಧ್ಯಾಹ್ನ 3.30ರಲ್ಲಿ ಪಾನಮತ್ತನಾಗಿ ಬಂದು ಮನೆ ಒಳಗೆ ಬಿದ್ದಿದ್ದ. ತಾನು ಆತನ ಚಿಕ್ಕಪ್ಪ ಶೇಖರ್ ಅವರಿಗೆ ಕರೆ ಮಾಡಿ ಕರೆಸಿಕೊಂಡು ಭಾಗಮಂಡಲ ಆಸ್ಪತ್ರೆಗೆ ಡ್ಯಾನಿಯನ್ನು ಕರೆದೊಯ್ದಿದ್ದೆವು. ಅಲ್ಲಿನ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗೆ ಮಡಿಕೇರಿ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ ಎಂದು ಅನುಪ್ರಿಯ ನೀಡಿದ ದೂರಿನನ್ವಯ ಭಾಗಮಂಡಲ ಪೊಲೀಸರು ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿದ್ದರು.

ಜೂ.1ರಂದು ವೈದ್ಯರು ಮರಣೋತ್ತರ ಪರೀಕ್ಷೆ ವರದಿ ನೀಡಿದ್ದು, ಅದರಲ್ಲಿ ಡ್ಯಾನಿಯನ್ನು ಕತ್ತು ಹಿಸುಕಿ ಕೊಲೆ ಮಾಡಿರುವುದಾಗಿ ನಮೂದಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ಅನುಪ್ರಿಯಾಳನ್ನು ವಿಚಾರಣೆಗೊಳಪಡಿಸಲಾಗಿ, ತನ್ನ ಪತಿ ಯಾವುದೇ ಕೆಲಸ ಮಾಡದೇ ಮದ್ಯಪಾನ ಮಾಡಿಕೊಂಡು ಜಗಳವಾಡುತ್ತಿದ್ದ. ಈ ಸಂದರ್ಭ ಪಕ್ಕದ ಮನೆಯಲ್ಲೇ ವಾಸವಿರುವ ಆತನ ತಂದೆ ಸುಗುಣ ಜಗಳ ಬಿಡಿಸಲು ಬಂದರೆ ನಮ್ಮಿಬ್ಬರಿಗೂ ಅನೈತಿಕ ಸಂಬಂಧ ಕಲ್ಪಿಸಿ ಬಯ್ಯುತ್ತಿದ್ದ. ಅದೇ ರೀತಿ ಮೇ 28ರಂದು ಮಧ್ಯಾಹ್ನ ಜಗಳ ನಡೆದಾಗ ಆತನ ತಂದೆ ಜಗಳ ಬಿಡಿಸಲು ಬಂದಿದ್ದರು. ಆಗಲೂ ಕೂಡ ಡ್ಯಾನಿ ಅನೈತಿಕ ಸಂಬಂಧ ಕಲ್ಪಿಸಿ ಬೈಯ್ದಾಗ ಕೋಪಗೊಂಡು ಕತ್ತು ಹಿಸುಕಿ ಕೊಲೆ ಮಾಡಿದ್ದೇನೆ ಎಂದು ಅನುಪ್ರಿಯ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾಳೆ. ಭಾಗಮಂಡಲ ಪೊಲೀಸರು ಅನುಪ್ರಿಯ ಮತ್ತು ಸುಗುಣ ಅವರನ್ನು ಬಂಧಿಸಿ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಬಹುಮಾನದ ಆಸೆಗೆ 23.23 ಲಕ್ಷ ಕಳೆದುಕೊಂಡ ಸರ್ಕಾರಿ ಅಧಿಕಾರಿ

ಹಾಸನ, ಜೂ.9–ಬಹುಮಾನ ಬಂದಿರುವುದಾಗಿ ಪೋಸ್ಟ್ ಕಳುಹಿಸಿ ಸರ್ಕಾರಿ ಅಧಿಕಾರಿಯೊಬ್ಬರಿಗೆ 23.23 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ಬೇಲೂರು ಟೌನ್ ನಿವಾಸಿ ಶ್ರೀನಿವಾಸಪ್ರಸಾದ್ (51) ವಂಚನೆಗೊಳಗಾದವರಾಗಿದ್ದು, ಏ.23ರಂದು ಇವರಿಗೆ Naaptol ಕಂಪನಿ ಹೆಸರುಳ್ಳ 2 ಕೂಪನ್‌ಗಳು ಸ್ಪೀಡ್‌ಪೋಸ್ಟ್ ಮೂಲಕ ಬಂದಿವೆ. ಒಂದು ಕೂಪನ್‌ನಲ್ಲಿ ಸ್ಕ್ರಾಚ್ ಅಂಡ್ ವಿನ್ ಎಂದು ನಮೂದಾಗಿದ್ದು, ಸ್ಕ್ರಾಚ್ ಮಾಡಿದಾಗ KIA SELTOS Car ಎಂದು ನಮೂದಾಗಿತ್ತು. ಮತ್ತೊಂದು ಕೂಪನ್‌ನಲ್ಲಿ ಮೊಬೈಲ್ ನಂಬರ್‌ಗಳು ಹಾಗೂ ಷರತ್ತುಗಳಿದ್ದವು. ಶ್ರೀನಿವಾಸಪ್ರಸಾದ್ ಕಾರಿಗೆ ಬದಲಾಗಿ 40 ಲಕ್ಷ ರೂ. ನಗದು ಬಹುಮಾನವನ್ನು ಆಯ್ಕೆ ಮಾಡಿಕೊಂಡಿದ್ದರು.

ಅಪರಿಚಿತ ವ್ಯಕ್ತಿಯು ಇವರ ಮೊಬೈಲ್‌ಗೆ ವಾಟ್ಸಾಪ್ ಮೆಸೇಜ್ ಮಾಡಿ ಬಹುಮಾನದ ಮೊತ್ತ ಪಡೆಯಲು ಆರ್‌ಬಿಐ ಟ್ಯಾಕ್ಸ್, ಜಿಎಸ್‌ಟಿ, ಸಿಜಿಎಸ್‌ಟಿ, ಎನ್‌ಓಸಿ ಹಾಗೂ ಇನ್‌ಕಂಟ್ಯಾಕ್ಸ್ ಹಣ ಸಂದಾಯ ಮಾಡಬೇಕೆಂದು ಬ್ಯಾಂಕ್ ಖಾತೆಯೊಂದರ ವಿವರ ನೀಡಿದ್ದಾರೆ. ಅದರಂತೆ ಅವರು 23,23,495 ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ಆದರೆ ಅವರಿಗೆ ಬಹುಮಾನವಂತೂ ಬಂದಿಲ್ಲ. ಈ ಸಂಬಂಧ ಹಾಸನ ಜಿಲ್ಲಾ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕ್ವಾರಿಯಲ್ಲಿ ಸ್ಫೋಟಕ ವಶ

ಮದ್ದೂರು, ಜೂ.9–ತಾಲೂಕಿನ ಅರೆಕಲ್ಲು ದೊಡ್ಡಿ ಗ್ರಾಮದ ಕ್ವಾರಿಯೊಂದರ ಮೇಲೆ ದಾಳಿ ನಡೆಸಿದ ಬೆಸಗರಹಳ್ಳಿ ಠಾಣೆ ಪೊಲೀಸರು ಅಪಾರ ಪ್ರಮಾಣದ ಸ್ಫೋಟಕಗಳನ್ನು ವಶಪಡಿಸಿಕೊಂಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ಬೆಸಗರಹಳ್ಳಿ ಸಬ್ ಇನ್ಸ್‌ಪೆಕ್ಟರ್ ಕೆ.ಎಂ.ಮಹೇಶ್ ಮತ್ತು ಸಿಬ್ಬಂದಿ ಜೂ.8ರಂದು ಬೆಳಗ್ಗೆ ಅರೆಕಲ್ಲು ದೊಡ್ಡಿ ಗ್ರಾಮದ ಹೊರ ವಲಯದಲ್ಲಿರುವ ಪರಮೇಶ್ ಎಂಬುವರಿಗೆ ಸೇರಿದ ಕ್ವಾರಿ ಮೇಲೆ ದಾಳಿ ನಡೆಸಿ ಗಿಡಗಳ ಪೊದೆಯಲ್ಲಿ ಅಡಗಿಸಿಟ್ಟಿದ್ದ ಐಡಿಯಲ್ ಪವರ್–90 ಮಾರ್ಕ್ ಇರುವ 14 ಹಿಟ್ಟಿನ ಮಾದರಿಯ ತೋಟಾ ಪ್ಯಾಕೆಟ್, ಸೂಪರ್ ಪವರ್–90 ಮಾರ್ಕ್ ಇರುವ 65 ಹಿಟ್ಟಿನ ಮಾದರಿಯ ಪ್ಯಾಕೆಟ್‌ಗಳು, ಸ್ಫೋಟಿಸಲು ಬಳಸುವ ವೈರ್‌ಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ

ಮಧು ಮಾದೇಗೌಡರ ಬೆಂಬಲಿಸಿ: ಕಾಂಗ್ರೆಸ್ ನಾಯಕರ ಮನವಿ

ಕೆಪಿಸಿಸಿ ಪ್ರಚಾರಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್, ಮಾಜಿ ಸಚಿವ ಕೃಷ್ಣ ಬೈರೇಗೌಡ, ಮಧು ಪರ ಮತಯಾಚನೆ



ಮೈಸೂರು, ಜೂ. 9 (ಆರ್‌ಕೆ)– ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಧು ಜಿ. ಮಾದೇಗೌಡರನ್ನು ಬೆಂಬಲಿಸುವಂತೆ ಕಾಂಗ್ರೆಸ್ ನಾಯಕರಾದ ಎಂ.ಬಿ. ಪಾಟೀಲ್ ಹಾಗೂ ಕೃಷ್ಣಬೈರೇಗೌಡ, ಪದವೀಧರರನ್ನು ಮನವಿ ಮಾಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ನಡೆದ ಜಂಟಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಜೂನ್ 13 ರಂದು ನಡೆಯಲಿರುವ ಪದವೀಧರರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಧು ಮಾದೇಗೌಡರು, ಮಂಡ್ಯದಲ್ಲಿ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದು, ಸಹಸ್ರಾರು ವಿದ್ಯಾರ್ಥಿಗಳಿಗೆ ಜ್ಞಾನದಾಸೋಹ ನೀಡುತ್ತಿರುವುದಲ್ಲದೆ, 2000 ಮಂದಿಗೆ ಉದ್ಯೋಗ ನೀಡಿದ್ದಾರೆ ಎಂದರು.

ಎರಡು ದಶಕಗಳ ಕಾಲ ಕಾವೇರಿ ನದಿ ನೀರಿನ ರಕ್ಷಣೆ, ರೈತರ ಪರ ಹಾಗೂ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ ಉಳಿವಿಗಾಗಿ ನಿರಂತರ ಹೋರಾಟ ನಡೆಸಿದ್ದ ಜಿ. ಮಾದೇಗೌಡರ ಮಗನಾದ ಮಧು ಮಾದೇಗೌಡರೂ ತಂದೆಯ ಹಾದಿಯಲ್ಲೇ ಸಾಗುತ್ತಿರುವ ಸಹೃದಯದ ವ್ಯಕ್ತಿಯಾಗಿದ್ದು, ಪದವೀಧರರ ಶ್ರೇಯೋಭಿವೃದ್ಧಿಗೆ ದುಡಿಯುವ ತುಡಿತ ಹೊಂದಿರುವ ಯುವ ನಾಯಕರಾಗಿರುವುದರಿಂದ ದಕ್ಷಿಣ ಪದವೀಧರರ ಚುನಾವಣೆಯಲ್ಲಿ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸುವಂತೆ ಅವರು ಕೋರಿದ್ದಾರೆ.

ಸದಾ ಜನರೊಟ್ಟಿಗಿದ್ದು, ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತಿರುವುದಲ್ಲದೇ, ವಿದ್ಯಾರ್ಥಿಗಳು, ಶಿಕ್ಷಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಮಧು ಮಾದೇಗೌಡರನ್ನು ವಿಧಾನಪರಿಷತ್‌ಗೆ ಆರಿಸಿ ಕಳುಹಿಸಿದಲ್ಲಿ ಜನರ ದನಿಯಾಗಿ ಕೆಲಸ ಮಾಡುತ್ತಾರೆ. ಈಗಾಗಲೇ ನಾಲ್ಕೂ ಜಿಲ್ಲೆಗಳಲ್ಲೂ ಪದವೀಧರರನ್ನು ಸಂಪರ್ಕಿಸಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಒಗ್ಗಟ್ಟಾಗಿ ಚುನಾವಣಾ ಪ್ರಚಾರ ಮಾಡಿರುವುದರಿಂದ ಪೂರಕ ಫಲಿತಾಂಶ ನಿರೀಕ್ಷಿಸಲಾಗಿದೆ ಎಂದು ಅವರು ನುಡಿದರು.

ಕೃಷ್ಣಬೈರೇಗೌಡರು ಮಾತನಾಡಿ, ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ ಮಧು ಮಾದೇಗೌಡರು ವಿದ್ಯಾವಂತ, ಬುದ್ಧಿವಂತ ಹಾಗೂ ಜನರ ಆಶೋತ್ತರಗಳಿಗೆ ಸದಾ ಸ್ಪಂದಿಸುವ ಯುವಕ. ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆ ನಡೆಸಿದ ಅನುಭವ, ಸಾರ್ವಜನಿಕ ಸೇವೆ ಕುಟುಂಬದ ಹಿನ್ನೆಲೆಯುಳ್ಳವರಾಗಿರುವ ಅವರಿಗೆ ಎಲ್ಲಾ ಬಗೆಯ ಅರ್ಹತೆ ಇದೆ. ಅವರ ಗೆಲುವಿಗೆ ಕಾಂಗ್ರೆಸ್ ಮುಖಂಡರು, ನಾಯಕರೆಲ್ಲರೂ ಪ್ರಯತ್ನಿಸುತ್ತಿದ್ದಾರೆ. ಪದವೀಧರರು ಮತ ನೀಡಿ ಜಯಶೀಲರಾಗಲು ಸಹಕರಿಸಬೇಕೆಂದು ಕೋರಿಕೊಂಡರು.

ಕಾಂಗ್ರೆಸ್ ಮುಖಂಡರಾದ ರಿಜ್ವಾನ್ ಹರ್ಷದ್, ಶರತ್ ಬಚ್ಚೇಗೌಡ, ಆರ್. ಧ್ರುವನಾರಾಯಣ್, ಡಾ. ಯತೀಂದ್ರ ಸಿದ್ದರಾಮಯ್ಯ, ಹೆಚ್.ಪಿ. ಮಂಜುನಾಥ್, ಆರ್. ಮೂರ್ತಿ, ಅನಿಲ್ ಚಿಕ್ಕಮಾದು, ಬಿ.ಜೆ. ವಿಜಯಕುಮಾರ್, ಸೂರಜ್, ಎಂ.ಕೆ. ಸೋಮಶೇಖರ್, ಕೆ. ಹರೀಶ್‌ಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜಾತ್ಯತೀತ ತತ್ವದ ಮೇಲೆ ನಂಬಿಕೆ ಇದ್ದರೆ ಬೆಂಬಲಿಸಲಿ

ಜೆಡಿಎಸ್‌ಗೆ ಕಾಂಗ್ರೆಸ್ ನಾಯಕ ಕೃಷ್ಣಬೈರೇಗೌಡ ಮನವಿ

ಮೈಸೂರು, ಜೂ.9(ಆರ್‌ಕೆ)–ಜಾತ್ಯತೀತ ತತ್ವದ ಮೇಲೆ ನಂಬಿಕೆ ಇದ್ದರೆ ರಾಜ್ಯಸಭಾ ಚುನಾವಣೆಯಲ್ಲಿ ನಮ್ಮ ಎರಡನೇ ಅಭ್ಯರ್ಥಿಯನ್ನು ಜೆಡಿಎಸ್ ಶಾಸಕರು ಬೆಂಬಲಿಸಲಿ ಎಂದು ಕಾಂಗ್ರೆಸ್ ನಾಯಕರಾದ ಮಾಜಿ ಸಚಿವ ಕೃಷ್ಣಬೈರೇಗೌಡರು ಇಂದಿಲ್ಲಿ ತಿಳಿಸಿದ್ದಾರೆ. ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ಸಂದರ್ಭ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯಸಭಾ ಚುನಾವಣೆಗೆ ನಾವು ಎರಡನೇ ಅಭ್ಯರ್ಥಿ ಹಾಕಿದ್ದೇವೆ. ಅವರಿಗೆ ಮತ ಚಲಾಯಿಸುವುದು ಜೆಡಿಎಸ್‌ನವರ ಧರ್ಮ. ಜಾತ್ಯತೀತ ತತ್ವದ ಮೇಲೆ ನಂಬಿಕೆ ಇದ್ದರೆ ಮತ ಹಾಕಬೇಕು ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತುಮಕೂರು ಕ್ಷೇತ್ರದಲ್ಲಿ ಅವಕಾಶ ನೀಡಿದ ಕಾಂಗ್ರೆಸ್, ಅಲ್ಲಿನ ಆಕಾಂಕ್ಷಿಯಾಗಿದ್ದ ಮುದ್ದಹನುಮೇಗೌಡರನ್ನು ಕಡೆಗಣಿಸಿದ್ದರಿಂದ ಉಂಟಾದ ಡ್ಯಾಮೇಜ್ ಅನ್ನು ಇನ್ನೂ ಸರಿ ಮಾಡಲು ಸಾಧ್ಯವಾಗಿಲ್ಲ. ಅಲ್ಲದೆ ಜೆಡಿಎಸ್ ಕೇವಲ 37 ಸ್ಥಾನ ಪಡೆದಿದ್ದರೂ, ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲಿಲ್ಲವೆ ಎಂದು ಅವರು ಪ್ರಶ್ನಿಸಿದರು. ಕುಪೇಂದ್ರ ರೆಡ್ಡಿ ಸೇರಿದಂತೆ ಈ ಹಿಂದೆ ಜೆಡಿಎಸ್‌ನ ಹಲವರಿಗೂ ಕಾಂಗ್ರೆಸ್ ಸಹಾಯ ಮಾಡಿದೆ. ಆ ಕೃತಜ್ಞತೆ ಇದ್ದರೆ ಈ ರಾಜ್ಯಸಭಾ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಯನ್ನು ಜೆಡಿಎಸ್ ಬೆಂಬಲಿಸಬೇಕು. ಮತ ನೀಡಿ ಎಂದು ನಾವು ಕೇಳಿಕೊಂಡಿದ್ದೇವೆ. ಆತ್ಮಸಾಕ್ಷಿಗನುಗುಣವಾಗಿ ನಡೆದುಕೊಳ್ಳುತ್ತಾರೆ ಎಂದು ಕಾಂಗ್ರೆಸ್ ನಂಬಿದೆ. ಮತ ಹಾಕುವುದು–ಬಿಡುವುದು ಜೆಡಿಎಸ್‌ಗೆ ಬಿಟ್ಟಿದ್ದು ಎಂದರು.

1 ವರ್ಷಕ್ಕೆ 2 ಕೋಟಿಯಂತೆ 8 ವರ್ಷಕ್ಕೆ 16 ಕೋಟಿ ಉದ್ಯೋಗ: ಕೇಂದ್ರ ಭರವಸೆ ಬರೀ ಹುಸಿ

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷರೂ ಆದ ಮಾಜಿ ಸಚಿವ ಎಂ.ಬಿ.ಪಾಟೀಲ್ ಆಕ್ರೋಶ

ಮೈಸೂರು, ಜೂ. 9 (ಆರ್‌ಕೆ)– ವರ್ಷಕ್ಕೆ 2 ಕೋಟಿಯಂತೆ 8 ವರ್ಷಗಳಲ್ಲಿ 16 ಕೋಟಿ ಉದ್ಯೋಗ ನೀಡುತ್ತೇವೆಂದು ಭರವಸೆಯನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹುಸಿ ಮಾಡಿರುವುದಲ್ಲದೆ, ಇರುವ ಉದ್ಯೋಗವನ್ನೂ ಕಸಿದುಕೊಂಡು ಯುವಕರನ್ನು ಬೀದಿಗೆಳೆದಿದೆ ಎಂದು ಮಾಜಿ ಸಚಿವ ಎಂ.ಬಿ. ಪಾಟೀಲ್ ಗಂಭೀರ ಆರೋಪ ಮಾಡಿದ್ದಾರೆ.



ಮೈಸೂರಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿ 35 ವರ್ಷದೊಳಗಿನ ಶೇ. 65, 25 ವರ್ಷಗೊಳಗಿನ ಶೇ. 50 ರಷ್ಟು ಯುವಕರಿದ್ದಾರೆ. ಆದರೆ ಕಳೆದ 8 ವರ್ಷದಲ್ಲಿ ಕೇಂದ್ರ ಸರ್ಕಾರವು ವಿವಿಧ ಇಲಾಖೆಗಳಲ್ಲಿ ಮಂಜೂರಾಗಿರುವಂತಹ ಹುದ್ದೆಗಳನ್ನು ಕಡಿತ ಮಾಡಿದ್ದರಿಂದ ಯುವಕರು ಉದ್ಯೋಗ ಕಳೆದುಕೊಂಡಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವುದಿರಲಿ, ಇರುವ ಉದ್ಯೋಗವನ್ನೂ ಕೇಂದ್ರ ಸರ್ಕಾರ ಕಿತ್ತುಕೊಂಡಿದೆ ಎಂದರು.

ನೋಟು ಅಮಾನ್ಯದಿಂದಾಗಿ ಆರ್ಥಿಕ ಪೆಟ್ಟು ಬಿದ್ದಿದೆ. ಕಾರ್ಖಾನೆ, ಕೈಗಾರಿಕೆಗಳು ಮುಚ್ಚಿದವು. ದೇಶದಲ್ಲಿ ಗಲಭೆ ಉಂಟಾದ ಕಾರಣ ಕಂಪನಿ ಸ್ಥಾಪಿಸಲು ಮುಂದಾಗಿದ್ದ ಉದ್ಯಮಿಗಳು ಹೆದರಿ ಬೇರೆ ದೇಶಗಳಿಗೆ ಹೋದರು. ಪೆಟ್ರೋಲ್, ಗ್ಯಾಸ್, ಕಬ್ಬಿಣ, ಸಿಮೆಂಟ್ ಬೆಲೆಗಳು ಶೇ. 60 ರಷ್ಟು ಹೆಚ್ಚಳವಾದವು. ಜೊತೆಗೆ ಶೇ. 40 ರಷ್ಟು ಭ್ರಷ್ಟಾಚಾರವಿರುವುದರಿಂದ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಪಾಟೀಲ್ ನುಡಿದರು. ಕಾಂಗ್ರೆಸ್ ಸರ್ಕಾರದಲ್ಲಿ ದೇಶ ಸ್ವಾವಲಂಬನೆಯಾಗಿ ರಫ್ತು ವಹಿವಾಟು ಜಾಸ್ತಿ ಇತ್ತು. ಆರೋಗ್ಯ, ಶಿಕ್ಷಣ, ಅಣೆಕಟ್ಟು, ನೀರಾವರಿ ಯೋಜನೆ, ವಿದ್ಯುತ್ ಸ್ಥಾವರಗಳಂತಹ ಅಭಿವೃದ್ಧಿ ಕೆಲಸಗಳಾಗುತ್ತಿತ್ತು. ರಾಷ್ಟ್ರದ ಆರ್ಥಿಕ ಸಂಪತ್ತು ಸುಭಿಕ್ಷವಾಗಿತ್ತು. ಆದರೆ ಬಿಜೆಪಿ ಸರ್ಕಾರವು ಅಭಿವೃದ್ಧಿ ಕಡೆಗಣಿಸಿ ಸಮಾಜದಲ್ಲಿ ಕೋಮು ದಳ್ಳುರಿ ಸೃಷ್ಟಿಸಿ ಜನರ ಶಾಂತಿ ಕದಡುತ್ತಿರುವುದನ್ನೇ ಪ್ರಗತಿ ಎಂದು ಬಿಂಬಿಸುತ್ತಿದೆ ಎಂದು ಅವರು ಟೀಕಿಸಿದರು.

ಕಾಂಗ್ರೆಸ್ ಸರ್ಕಾರವು ಐಟಿ–ಬಿಟಿ ಕೌಶಲ್ಯಾಭಿವೃದ್ಧಿ, ಶಿಕ್ಷಣ ಹಾಗೂ ಕೈಗಾರಿಕೆಗೆ ಒತ್ತು ನೀಡಿ ಉದ್ಯೋಗ ಸೃಷ್ಟಿಸಿತ್ತು ಆದರೆ ಬಿಜೆಪಿ ಸರ್ಕಾರ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದು ಜನರ ಮನಸುಗಳನ್ನು ಒಡೆಯುವ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ ತಿಳಿಯುತ್ತಿಲ್ಲ ಎಂದ ಎಂ.ಬಿ. ಪಾಟೀಲ್, ಕಾಂಗ್ರೆಸ್‌ನಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದರು.

ರಿಜ್ವಾನ್ ಹರ್ಷದ್ ಮಾತನಾಡಿ, ಸಂಘ ಪರಿವಾರದವರು ಪ್ರಚೋದನೆ ನೀಡಿ ಸಂಘರ್ಷ ಉಂಟು ಮಾಡುತ್ತಿದ್ದಾರೆ. ಜನರಲ್ಲಿ ಕೋಮು ವಿಷ ಬೀಜ ಬಿತ್ತಿ ಜನರ ನೆಮ್ಮದಿ ಹಾಳು ಮಾಡುತ್ತಿರುವುದೇ ಸರ್ಕಾರದ ಸಾಧನೆಯಾಗಿದೆ. ಪಠ್ಯಪುಸ್ತಕ ಪರಿಷ್ಕರಣೆ ವಿವಾದ ಸೃಷ್ಟಿಸಿ ರಾಜ್ಯವನ್ನೇ ಹೊತ್ತಿ ಉರಿಯುವಂತೆ ಮಾಡುತ್ತಿರುವುದು, ಬಸವಣ್ಣ, ಕುವೆಂಪು, ಡಾ. ಅಂಬೇಡ್ಕರ್, ನಾರಾಯಣಗುರು ಅವರಂತಹ ಮಹನೀಯರಿಗೆ ಅವಮಾನಿಸುತ್ತಿರುವುದನ್ನು ಜನ ಸಹಿಸುವುದಿಲ್ಲ. ಈ ಸರ್ಕಾರಕ್ಕೆ ತಕ್ಕಪಾಠ ಕಲಿಸಬೇಕು ಎಂದರು. ಪಠ್ಯಪುಸ್ತಕ ಪರಿಷ್ಕರಣೆ ಹೆಸರಲ್ಲಿ ಮಕ್ಕಳ ಮನಸ್ಸಿನಲ್ಲಿ ವಿಷ ಬೀಜ ಬಿತ್ತುವ ಸರ್ಕಾರ ಗಣ್ಯರಿಗೆ ಅವಮಾನಿಸುತ್ತಿರುವುದು ಖಂಡನೀಯ. ತಾವು ಅನುಭವಿಸಿದ ನೋವಿನ ಆಧಾರದಲ್ಲಿ ಜನಸಾಮಾನ್ಯರಿಗಾಗಿ ಹಲವು ಕಾರ್ಯಕ್ರಮಗಳನ್ನು ನೀಡಿದ ಸಿದ್ದರಾಮಯ್ಯ ಅನುಭವಗಳ ಐರಾವತ. ಅವರನ್ನು ಆರ್ಥಿಕ ತಜ್ಞರೇ ಎಂದು ಪ್ರಶ್ನಿಸುವುದು ಸರಿಯಲ್ಲ ಎಂದು ಶಾಸಕ ಹೆಚ್.ಪಿ. ಮಂಜುನಾಥ್, ಬಿಜೆಪಿ ವಿರುದ್ಧ ಹರಿಹಾಯ್ದರು.

ಸೂರಜ್ ಮಾತನಾಡಿ, ಪಕೋಡ ಮಾಡುವವರೂ ಉದ್ಯಮಿಗಳೇ ಎನ್ನುತ್ತಿರುವ ಕೇಂದ್ರ ಸರ್ಕಾರ ಪದವಿ ಗಳಿಸಿದ ವಿದ್ಯಾವಂತರಿಗೆ ಉದ್ಯೋಗ ನೀಡದ ಕಾರಣ, ಯುವಕರು ಓಲಾ, ಊಬರ್, ಟ್ಯಾಕ್ಸಿ ಓಡಿಸುವಂತಾಗಿದೆ. ಆನ್‌ಲೈನ್ ಬುಕ್ಕಿಂಗ್ ಮಾಡಿದವರ ಮನೆ ಬಾಗಿಲಿಗೆ ಆಹಾರ ಪೂರೈಸುವ ಅನಿವಾರ್ಯತೆ ಉಂಟಾಗಿದೆ ಎಂದು ಆರೋಪಿಸಿದರು.

ಪದವೀಧರರಿಗೆ ಮೊದಲೇ ನನ್ನ ಪರಿಚಯವಿದೆ

ಗೆಲುವಿನ ಬಗ್ಗೆ ಮಧು ಜಿ.ಮಾದೇಗೌಡ ವಿಶ್ವಾಸ



ಮೈಸೂರು, ಜೂ.9(ಎಂಕೆ)– ಶಿಕ್ಷಣ ಕ್ಷೇತ್ರದಲ್ಲಿ 20 ವರ್ಷಗಳ ಅನುಭವ, ಗಾಂಧೀವಾದಿ ಜಿ.ಮಾದೇಗೌಡ ಪುತ್ರ ಹಾಗೂ ಈ ಹಿಂದೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯಕ್ಕೆ ನೀಡಿರುವ ಕೊಡುಗೆಗಳು ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ನನ್ನ ಗೆಲುವಿಗೆ ಕಾರಣವಾಗಲಿದ್ದು, ನಿರೀಕ್ಷೆಗೂ ಮೀರಿದ ಬೆಂಬಲ ದೊರೆತಿದೆ. ಪದವೀಧರರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಅವರ ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದು ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಹೇಳಿದರು.

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ ಹಿನ್ನೆಲೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯ 4 ಜಿಲ್ಲೆ, 27 ತಾಲೂಕು ಹಾಗೂ 29 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಪ್ರವಾಸ ಮಾಡಿದ್ದೇನೆ. ಪದವೀಧರ ಮತದಾರರು ನನ್ನ ಮೇಲೆ ಅಪಾರ ಒಲವನ್ನು ತೋರಿದ್ದಾರೆ. ಸುಮಾರು 70 ಸಾವಿರ ಮತದಾರರನ್ನು ಖುದ್ದು ಭೇಟಿಯಾಗಿ ಮತಯಾಚನೆ ಮಾಡಿದ್ದೇನೆ. ಎಲ್ಲೇ ಹೋದರು. ಮಾದೇಗೌಡರ ಮಗ ಮಧು ಜಿ.ಮಾದೇಗೌಡ ಎಂದೇ ಗುರ್ತಿಸುತ್ತಿದ್ದಾರೆ ಎಂದರು.

ಎಂಬಿಎ ವಿದ್ಯಾರ್ಹತೆ ಹೊಂದಿದ್ದು, ಕಳೆದ 20 ವರ್ಷದಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಮಾಡಿದ್ದೇನೆ. 4 ಶಾಲೆ, 4 ಪಿಯು ಕಾಲೇಜು, 3 ಪ್ರಥಮ ದರ್ಜೆ ಕಾಲೇಜು, ಇಂಜಿನಿಯರಿಂಗ್, ನರ್ಸಿಂಗ್ ಸೇರಿದಂತೆ ನಮ್ಮದೇ 36 ಶಿಕ್ಷಣ ಸಂಸ್ಥೆಗಳಿದ್ದು, 13 ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸಾವಿರಕ್ಕೂ ಹೆಚ್ಚು ಮಂದಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಪದವೀಧರರ ಸಮಸ್ಯೆಗಳ ಸಂಪೂರ್ಣ ಅರಿವಿದ್ದು, ಅವರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ನನಗೆ ರಾಜಕೀಯವಾಗಿ ಶಕ್ತಿ ನೀಡಿದರೆ ನಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತಾರೆ ಎಂಬ ನಂಬಿಕೆಯೂ ಮತದಾರರಲ್ಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

2.5 ಲಕ್ಷ ವಿದ್ಯಾರ್ಥಿಗಳು ತೇರ್ಗಡೆ: ನಮ್ಮ ಶಿಕ್ಷಣ ಸಂಸ್ಥೆಗಳಿಂದ ಇಲ್ಲಿಯವರೆಗೆ 2.5 ಲಕ್ಷ ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆದಿದ್ದಾರೆ. ಅದರಲ್ಲಿ 20 ಸಾವಿರಕ್ಕೂ ಹೆಚ್ಚು ಮಂದಿ ಪದವಿ ಪಡೆದವರು ಮೈಸೂರು ಜಿಲ್ಲೆಯವರಾಗಿದ್ದು, ಎಲ್ಲರಿಗೂ ನನ್ನ ಬಗ್ಗೆ ಗೊತ್ತಿದೆ. ದಕ್ಷಿಣ ಪದವೀಧರ ಕ್ಷೇತ್ರಕ್ಕೆ ಸೂಕ್ತ ಅಭ್ಯರ್ಥಿ ಎಂದೇ ಎಲ್ಲರೂ ನನ್ನನ್ನು ಗುರ್ತಿಸಿದ್ದಾರೆ. ಎಲ್ಲರ ಭರವಸೆ ಈಡೇರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಮುಖ್ಯವಾಗಿ ಸರ್ಕಾರಿ ನೌಕರರಿಗೆ ಪಿಂಚಣಿ ಸೌಲಭ್ಯ ದೊರಕಿಸಿಕೊಡುವುದು ಹಾಗೂ ನಿರುದ್ಯೋಗ ಸಮಸ್ಯೆ ಬಗೆಹರಿಸುವುದು ನನ್ನ ಮುಖ್ಯ ಉದ್ದೇಶವಾಗಿದೆ. ಖಾಸಗಿ ಶಾಲಾ–ಕಾಲೇಜುಗಳಲ್ಲಿ ಸಮಸ್ಯೆಗಳಿದ್ದು, ಜನಪರ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಗಾಂಧಿ ಗ್ರಾಮ ನಿರ್ಮಾಣ: ಜಿ.ಮಾದೇಗೌಡರ ಕನಸಾದ ಗಾಂಧಿ ಗ್ರಾಮ ನಿರ್ಮಾಣ ಮಾಡುವ ಜವಾಬ್ದಾರಿ ನನ್ನ ಮೇಲಿದೆ. ಅಡ್ಡದಾರಿ ಹಿಡಿಯುತ್ತಿರುವ ಯುವಕರನ್ನು ಸರಿದಾರಿಗೆ ತರಬೇಕಾದರೆ ಗಾಂಧೀಜಿಯವರ ತತ್ವಾದರ್ಶಗಳನ್ನು ತಿಳಿಸುವುದು ಮುಖ್ಯವಾಗಿದೆ. ಒಮ್ಮೆ ಗಾಂಧಿ ಗ್ರಾಮಕ್ಕೆ ಭೇಟಿ ನೀಡಿದರೆ, ಗಾಂಧೀಜಿ ಅವರೊಂದಿಗೆ ಇದ್ದಂತಹ ಅನುಭವವಾಗಬೇಕು ಎನ್ನುವ ರೀತಿಯ ನೂರು ಕೋಟಿ ರೂ. ಯೋಜನೆ ಇದಾಗಿದೆ. ನನಗೆ ರಾಜಕೀಯವಾಗಿ ಶಕ್ತಿ ನೀಡಿದರೆ, ಗಾಂಧಿ ಗ್ರಾಮ ನಿರ್ಮಾಣಕ್ಕೆ ಶ್ರಮಿಸಲಾಗುವುದು. ಈ ನಿಟ್ಟಿನಲ್ಲಿ ನನಗೆ ಪದವೀಧರ ಮತದಾರರು ಮೊದಲ ಪ್ರಾಶಸ್ತ್ಯ ಮತ ನೀಡುವಂತೆ ಮನವಿ ಮಾಡಿದ್ದಾರೆ.

ಟ್ರಾಫಿಕ್ ಪೊಲೀಸರೊಂದಿಗೆ ಅರವಿಂದ ಲಿಂಬಾವಳಿ ಪುತ್ರಿ ರಂಪಾಟ: 10 ಸಾವಿರ ದಂಡ

ಪೊಲೀಸರ ಕ್ಷಮೆ ಕೋರಿದ ಲಿಂಬಾವಳಿ



ಬೆಂಗಳೂರು, ಜೂ.9– ಸಂಚಾರ ನಿಯಮ ಉಲ್ಲಂಘಿಸಿದ್ದಲ್ಲದೇ ಪೊಲೀಸರಿಗೆ ಆವಾಜ್ ಹಾಕಿದ ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಪುತ್ರಿಗೆ 10,000 ರೂ. ದಂಡ ವಿಧಿಸಲಾಗಿದೆ. ರ‍್ಯಾಷ್ ಡ್ರೈವಿಂಗ್ ಮಾಡಿಕೊಂಡು ಬಂದ ಲಿಂಬಾವಳಿ ಪುತ್ರಿ ಪೊಲೀಸರಿಗೂ ಕೇರ್ ಮಾಡದೇ ಪೊಲೀಸರ ಮೇಲೆಯೇ ಕಾರು ಹತ್ತಿಸುವಂತೆ ಕಾರು ಚಲಾಯಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬೆನ್ನತ್ತಿದ ಪೊಲೀಸರನ್ನು ನೋಡಿ ಕ್ಯಾಪಿಟಲ್ ಹೋಟೆಲ್ ಒಳಗೆ ಕಾರು ಚಲಾಯಿಸಿದ್ದಾರೆ. ಕಾರು ವಾಪಸ್ ಬರುತ್ತಿದ್ದ ವೇಳೆ ಹೋಟೆಲ್ ಗೇಟ್ ಬಳಿಯೇ ಪೊಲೀಸರು ತಡೆದಿದ್ದಾರೆ. ಈ ವೇಳೆ ಟ್ರಾಫಿಕ್ ಪೊಲೀಸರ ಮೇಲೆಯೇ ದರ್ಪ ತೋರಿ 'ನಾನು ಅರವಿಂದ ಲಿಂಬಾವಳಿ ಮಗಳು' ಎಂದು ಆವಾಜ್ ಹಾಕಿದ್ದಾರೆ. ಅದಕ್ಕೆ ಸೊಪ್ಪು ಹಾಕದಪೊಲೀಸರು ಅರವಿಂದ ಲಿಂಬಾವಳಿ ಪುತ್ರಿ 10 ಸಾವಿರ ರೂ. ದಂಡ ಕಟ್ಟಿದ ಬಳಿಕ ಕಾರನ್ನು ಬಿಟ್ಟು ಕಳುಹಿಸಿದ್ದಾರೆ.

ಕ್ಷಮೆ ಕೋರಿದ ಲಿಂಬಾವಳಿ: ಈ ಘಟನೆಯ ಸಂಬಂಧ ಶಾಸಕ ಅರವಿಂದ ಲಿಂಬಾವಳಿ ನನ್ನ ಮಗಳ ವರ್ತನೆಯಿಂದ ನೋವಾಗಿದ್ದರೇ ಕ್ಷಮಿಸಿ ಎಂದು ಕ್ಷಮೆ ಯಾಚಿಸಿದ್ದಾರೆ. ಈ ಕುರಿತಂತೆ ಸುದ್ದಿಗಾರರೊಂದಿಗೆ ಮಾತನಾಡಿರುವಂತ ಅವರು, ನನ್ನ ಮಗಳು ರೇಣುಕಾ ಅವರ ಸ್ನೇಹಿತ ತರುಣ್ ಎಂಬಾತ ಕಾರನ್ನು ಜೋರಾಗಿ ಓಡಿಸಿದ್ದಾನೆ.

ಸಂಚಾರ ನಿಯಮ ಉಲ್ಲಂಘಿಸಿದ ಕಾರಣ, ಪೊಲೀಸರಿಗೆ ನನ್ನ ಮಗಳ ಸ್ನೇಹಿತನೇ ದಂಡ ಕಟ್ಟಿದ್ದಾನೆ ಎಂದು ಹೇಳಿದರು. ನನ್ನ ಮಗಳ ವರ್ತನೆಯಿಂದ ಪೊಲೀ ಸರಿಗೆ, ಯಾರಿಗಾದರೂ ನೋವಾಗಿದ್ದರೇ ಕ್ಷಮೆ ಯಾಚಿಸುತ್ತೇನೆ. ಈ ಮೂಲಕ ಸಂಚಾರಿ ಪೊಲೀಸರೊಂದಿಗೆ ಲಿಂಬಾವಳಿ ಪುತ್ರಿಯ ಕಿರಿಕ್‌ಗೆ ತಂದೆ ಕ್ಷಮೆಯಾಚಿಸುತ್ತೇನೆ ಎಂದಿದ್ದಾರೆ.

ವಾಯುವಿಹಾರದಲ್ಲಿದ್ದ ಯುವಕನ ಮೊಬೈಲ್ ಕಿತ್ತುಕೊಂಡು ಪರಾರಿಯಾದ ಬೈಕ್ ಸವಾರರು

ಮೈಸೂರು, ಜೂ.9(ಎಸ್‌ಬಿಡಿ)– ದುಷ್ಕರ್ಮಿಗಳು ವಾಯುವಿಹಾರದಲ್ಲಿದ್ದ ಯುವಕನ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಶಕ್ತಿನಗರ ಸಮೀಪದ ರಿಂಗ್‌ರಸ್ತೆಯಲ್ಲಿ ಗುರುವಾರ ಬೆಳಗ್ಗೆ ನಡೆದಿದೆ. ಶಕ್ತಿನಗರದ 18 ವರ್ಷದ ಯುವಕ ಗುರುವಾರ ಬೆಳಗ್ಗೆ 6.30ರ ವೇಳೆಯಲ್ಲಿ ರಿಂಗ್‌ರಸ್ತೆಯಲ್ಲಿ ವಾಯುವಿಹಾರದಲ್ಲಿದ್ದ. ಈ ವೇಳೆ ಹಿಂದಿನಿಂದ ಬಿಳಿ ಬಣ್ಣದ ಅಪಾಚೆ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು, ಯುವಕನ ಮಾತನಾಡಿಸುವಂತೆ ನಟಿಸಿ ಆತನ ಕೈಲಿದ್ದ ಸುಮಾರು 17 ಸಾವಿರ ರೂ. ಬೆಲೆಯ ಮೊಬೈಲ್ ಅನ್ನು ಏಕಾಏಕಿ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಯುವಕ ನೀಡಿದ ದೂರಿನನ್ವಯ ಉದಯಗಿರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಸುತ್ತಮುತ್ತಲ ಸಿಸಿಟಿವಿ ಕ್ಯಾಮರಾಗಳ ದೃಶ್ಯಾವಳಿಯನ್ನು ಪರಿಶೀಲನೆ ನಡೆಸುತ್ತಿದ್ದಾರೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರು, ಮೊಬೈಲ್ ಕಳ್ಳರ ಪತ್ತೆಗೆ ತಂಡ ರಚಿಸಿದ್ದು, ಸಿಬ್ಬಂದಿಯ ಗಸ್ತು ಹೆಚ್ಚಿಸಲಾಗಿದೆ. ಪ್ರಧಾನಿ ಮೋದಿ ಅವರು ಜೂ.21ಕ್ಕೆ ಮೈಸೂರಿಗೆ ಆಗಮಿಸಲಿರುವ ಹಿನ್ನೆಲೆಯಲ್ಲಿ ಪೊಲೀಸರು ಎಲ್ಲೆಡೆ ಕಟ್ಟೆಚ್ಚರ ವಹಿಸಿದ್ದಾರೆ. ರಿಂಗ್ ರಸ್ತೆಯಲ್ಲಿ ದರೋಡೆ, ಅಸಹಾಯಕ ಮಹಿಳೆಯರ ಸರ ಕಳ್ಳತನ, ಮನೆ ಕಳ್ಳತನ, ವಾಹನ ಕಳವು ಇನ್ನಿತರ ದುಷ್ಕೃತ್ಯಗಳನ್ನು ತಡೆಯಲು ಪರಿಣಾಮಕಾರಿ ಕ್ರಮಕ್ಕೆ ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

ರಾಜ್ಯ ಪ್ರವಾಸದ ಬಗ್ಗೆ ಸಿಎಂ ಜೊತೆ ಮೋದಿ ಚರ್ಚೆ



ಬೆಂಗಳೂರು, ಜೂ.9– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿ, ಜೂ.20, 21ರಂದು ರಾಜ್ಯದಲ್ಲಿ 2 ದಿನಗಳ ಪ್ರವಾಸ ಕಾರ್ಯಕ್ರಮದ ವಿವರಗಳ ಕುರಿತು ಚರ್ಚಿಸಿದರು. ಈ ವೇಳೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ಪ್ರಸ್ತಾಪಿಸಲಾದ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

ಸಭೆಯ ನಂತರ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಧಾನಿಗಳ ಭೇಟಿ ಕಾರ್ಯಕ್ರಮಕ್ಕೆ ಸಕಲ ರೀತಿಯ ಸಿದ್ಧತೆ ಮಾಡಿಕೊಳ್ಳಿ. ಯಾವುದೇ ರೀತಿಯ ಲೋಪಗಳು ಆಗದಂತೆ ಮುನ್ನೆಚ್ಚರಿಕೆ ವಹಿಸಿ ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಯೋಗ ದಿನಾಚರಣೆಗೆ ಸಮರ್ಪಕ ಸಿದ್ಧತೆ ಮಾಡಿಕೊಳ್ಳಿ ಎಂದು ಹೇಳಿದ ಅವರು, ಪ್ರಧಾನಿಗಳ ಎರಡು ದಿನಗಳ ಸಿದ್ಧತೆಗಳ ಕುರಿತು ವಿವರವಾಗಿ ಚರ್ಚಿಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಸಿಎಂ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್, ಲೋಕೋಪಯೋಗಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅನಿಲ್‌ಕುಮಾರ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಕೌಶಲ್ಯಾಭಿವೃದ್ಧಿ ಮತ್ತು ಶಿಕ್ಷಣ ಇಲಾಖೆ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಸಿಎಂ ಕಾರ್ಯದರ್ಶಿ ಶ್ರೀಕರ್, ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ರಶ್ಮಿ ಮಹೇಶ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಮತ್ತು ಇತರ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.



ದಕ್ಷಿಣ ಪದವೀಧರ ಕ್ಷೇತ್ರದ ಜೆ.ಡಿ.ಎಸ್. ಅಭ್ಯರ್ಥಿ ಹೆಚ್.ಕೆ. ರಾಮು ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಗಳ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿ.ಪಂ. ಮಾಜಿ ಸದಸ್ಯ ಎಂ.ಟಿ. ಕುಮಾರ್, ಮುಖಂಡರಾದ ಅಪೆಕ್ಸ್ ಶ್ರೀನಿವಾಸ್, ರಮೇಶ್, ಮಹದೇವ್, ದಿನೇಶ್, ರಘು ಹಾಜರಿದ್ದರು.

ರಾಷ್ಟ್ರೀಯ ಆರ್ಮ್ ರೆಸ್ಲಿಂಗ್‌ನಲ್ಲಿ ಮೈಸೂರಿನ ರಾಜುಗೆ ಚಿನ್ನದ ಪದಕ



ಮೈಸೂರು, ಜೂ.9(ಎಂಕೆ)– ಮೈಸೂರಿನ ಆರ್ಮ್ ರೆಸ್ಲಿಂಗ್(ಪಂಜಕುಸ್ತಿ)ಪಟು ಎಂ.ರಾಜು, ಹೈದರಾಬಾದ್‌ನಲ್ಲಿ ನಡೆದ 44ನೇ ರಾಷ್ಟ್ರೀಯ ಆರ್ಮ್ ರೆಸ್ಲಿಂಗ್ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ತರಬೇತುದಾರ ಕೆ.ವಿಶ್ವನಾಥ್ ಮಾರ್ಗದರ್ಶನದಲ್ಲಿ 95 ಕೆ.ಜಿಯ ಎಡಗೈ ಹಾಗೂ ಬಲಗೈ ವಿಭಾಗದಲ್ಲಿಯೂ ಜಯಸಾಧಿಸುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಅಲ್ಲದೆ ಮುಂದಿನ ಅಕ್ಟೋಬರ್ ತಿಂಗಳಿನಲ್ಲಿ ಟರ್ಕಿಯಲ್ಲಿ ನಡೆಯುವ ಆರ್ಮ್ ರೆಸ್ಲಿಂಗ್ ವರ್ಲ್ಡ್ ಚಾಂಪಿಯನ್‌ಶಿಪ್‌ಗೂ ಆಯ್ಕೆಯಾಗಿದ್ದಾರೆ.

ಜೂ.12, ಮೈಸೂರಿನ ವಿವಿಧೆಡೆ ಶೀಲಾ ಇರಾನಿ ಜನ್ಮ ಶತಮಾನೋತ್ಸವ





ಮೈಸೂರು, ಜೂ.9(ಎಂಟಿವೈ)– ಶಿಕ್ಷಣ ತಜ್ಞೆ, ರೋಟರಿ ಮಕ್ಕಳ ಶಾಲೆಯ ಸಂಸ್ಥಾಪಕಿ ಶೀಲಾ ಇರಾನಿ ಅವರ ಜನ್ಮ ಶತಮಾನೋತ್ಸವವನ್ನು ಜೂ.12ರಂದು ಮೈಸೂರಿನ ವಿವಿಧೆಡೆ ಆಚರಿಸಲು ರೋಟರಿ ಸಂಸ್ಥೆಗಳು ನಿರ್ಧರಿಸಿವೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಶಾಲೆ ಹಾಗೂ ಬೃಂದಾವನ ಬಡಾವಣೆಯಲ್ಲಿರುವ ಚಾಮುಂಡಿ ಮಕ್ಕಳ ಮನೆಯಲ್ಲಿ ಜೂ.12ರಂದು ಬೆಳಗ್ಗೆ 10 ಗಂಟೆಗೆ ಶೀಲಾ ಇರಾನಿ ಅವರ ಜನ್ಮ ಶತಮಾನೋತ್ಸವ ಸಮಾರಂಭವನ್ನು ಆಚರಿಸಿ, ಮಾನವತಾವಾದಿಗೆ ಗೌರವ ಸಮರ್ಪಿಸಲಾಗುವುದು.

ರೋಟರಿ ಶಾಲೆಯಲ್ಲಿ ಅಂದು ಶಿಕ್ಷಕರು ಹಾಗೂ ಸಂಸ್ಥೆಯ ಪದಾಧಿಕಾರಿಗಳು ಶೀಲಾ ಇರಾನಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನಮನ ಸಲ್ಲಿಸಲಿದ್ದಾರೆ. ಬಳಿಕ ಶೀಲಾ ಇರಾನಿ ಅವರ ಸಮಾಜಮುಖಿ ಸೇವೆಗಳ ಸ್ಮರಿಸಿಕೊಳ್ಳಲಾಗುವುದು. ಜೂ.14ರಂದು ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಶೀಲಾ ಇರಾನಿ ಅವರ ಸಾಮಾಜಿಕ ಸೇವೆಯ ಬಗ್ಗೆ ಮಕ್ಕಳಿಗೆ ತಿಳಿಸಲಾಗುವುದು.

ಚಾಮುಂಡಿ ಮಕ್ಕಳ ಮನೆಯಲ್ಲಿ ವಿವಿಧ ರೋಟರಿ ಕ್ಲಬ್‌ಗಳ ನೆರವಿನೊಂದಿಗೆ ಆಯೋಜಿಸಿರುವ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಶೀಲಾ ಇರಾನಿ ಅವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ, ಗೌರವ ಸಮರ್ಪಿಸಲಾಗುವುದು.

ಶೀಲಾ ಇರಾನಿ ಅವರ ಪರಿಚಯ: ಶಿಕ್ಷಣ ತಜ್ಞೆ ಶೀಲಾ ಇರಾನಿ ಅವರು, ಜಾರ್ಜ್ ಎಗ್ಬರ್ಟ್ ಫರ್ಗುಸನ್ ಮತ್ತು ಉನಾ ಮೌಡ್ ಫರ್ಗುಸನ್ ದಂಪತಿ ಪುತ್ರಿಯಾಗಿ 1922ರ ಜೂನ್ 12ರಂದು ಉತ್ತರಾಖಂಡದ ನೈನಿತಾಲ್‌ನಲ್ಲಿ ಜನಿಸಿದರು. ಬಾಂಬೆ(ಈಗಿನ ಮುಂಬೈ)ಯಲ್ಲಿ ಶಿಕ್ಷಕರ ತರಬೇತಿ ಕೋರ್ಸ್ ಮುಗಿಸಿದ ಅವರು, ದೆಹಲಿಯಲ್ಲಿ ನರ್ಸರಿ ಶಿಕ್ಷಕಿಯಾಗಿ ತಮ್ಮ ವೃತ್ತಿಜೀವನ ಪ್ರಾರಂಭಿಸಿದರು. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿ, ವೈಸ್‌ರಾಯ್‌ನ ಪ್ರಶಂಸೆ ಪಡೆದಿದ್ದರು. 1968ರಲ್ಲಿ ಮೈಸೂರಿನಲ್ಲಿ ಐಡಿಯಲ್ ಜಾವಾ ರೋಟರಿ ಮಕ್ಕಳ ಶಾಲೆಯನ್ನು ಸ್ಥಾಪಿಸಿದ್ದು, ಇದು ನಗರದ ಅತ್ಯಂತ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾಗಿ ಬೆಳೆದಿದೆ. ಶೈಕ್ಷಣಿಕ ಸೇವೆಯ ಅನಾಥಾಶ್ರಮದ ಉಪಾಧ್ಯಕ್ಷರಾಗಿ ಮತ್ತು ಮಿಷನ್ ಆಸ್ಪತ್ರೆಯ ಟ್ರಸ್ಟಿಯಾಗಿ ಸೇವೆ ಸಲ್ಲಿಸಿದ್ದರು.

ಶೀಲಾ ಅವರು ಕೈಗಾರಿಕೋದ್ಯಮಿ ಫರೋಖ್ ಕೆ.ಇರಾನಿ(ಎಫ್.ಕೆ.ಇರಾನಿ) ವಿವಾಹವಾದ ಬಳಿಕ ಎಫ್.ಕೆ.ಇರಾನಿ ಐಡಿಯಲ್ ಜಾವಾ (ಇಂಡಿಯಾ) ಲಿಮಿಟೆಡ್ ಪ್ರಾರಂಭಿಸಿದ್ದರು. ಜಾವಾ ಕಂಪನಿಯು ಜಾವಾ ಮೋಟಾರ್ ಸೈಕಲ್ ಮತ್ತು ಯೆಜ್ಡಿ ರೋಡ್ ಕಿಂಗ್ ಬೈಕ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೂಲಕ ಸಂಚಲನ ಸೃಷ್ಟಿಸಿತ್ತಲ್ಲದೆ ಅಪಾರ ಜನಮನ್ನಣೆ ಗಳಿಸಿತ್ತು. ಶೀಲಾ ಇರಾನಿ ದಂಪತಿಗೆ ಪುತ್ರರಾದ ರೈಯಾನ್ ಇರಾನಿ ಹಾಗೂ ಖೈರಸ್ ಎಫ್.ಇರಾನಿ ಮತ್ತು ಪುತ್ರಿ ಮೊರ್ವಾರಿಡ್ ಫೆರ್ನಾಂಡಿಸ್ ಇದ್ದಾರೆ.

ಕರ್ನಾಟಕ ವಿಧಾನಸಭೆಗೆ ನಾಮನಿರ್ದೇಶನಗೊಳ್ಳುವ ಮೂಲಕ 1968ರಲ್ಲಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದ ಶೀಲಾ ಇರಾನಿ, 1978ರವರೆಗೆ ಸದಸ್ಯರಾಗಿ ಸೇವೆ ಸಲ್ಲಿಸಿದರು. 1993 ಮತ್ತು 1995ರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದರು. 1995ರಲ್ಲಿ ಅವರು ಆಂಗ್ಲೋ–ಇಂಡಿಯನ್ನರಿಗೆ ಮೀಸಲಾದ ಸ್ಥಾನಗಳಲ್ಲಿ ಒಂದಕ್ಕೆ ಸಂಸತ್ತಿನ 10ನೇ ಲೋಕಸಭೆಗೆ ನಾಮನಿರ್ದೇಶನಗೊಂಡಿದ್ದರಲ್ಲದೆ ಆಂಗ್ಲೋ–ಇಂಡಿಯನ್ ಅಸೋಸಿಯೇಶನ್‌ನ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

ಸಾಮಾಜಿಕ ಕಾರ್ಯಗಳಲ್ಲೂ ಹೆಚ್ಚು ತೊಡಗಿಸಿಕೊಂಡಿದ್ದ ಅವರು ಮೈಸೂರಿನಲ್ಲಿ ಕುಷ್ಠ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಹಲವು ಆಸ್ಪತ್ರೆಗಳ ಟ್ರಸ್ಟಿಯಾಗಿ ಕೆಲಸ ಮಾಡಿದರು. ಪಿ.ಕೆ.ಸ್ಯಾನಿಟೋರಿಯಂನ ಮಂಡಳಿಯಲ್ಲಿದ್ದರು. ಮಿಷನ್ ಆಸ್ಪತ್ರೆಯ ಟ್ರಸ್ಟಿ, ಬೆಂಗಳೂರಿನ ಫ್ರಾಂಕ್ ಆಂಥೋನಿ ಪಬ್ಲಿಕ್ ಸ್ಕೂಲ್, ಕ್ಯಾಥೆಡ್ರಲ್ ಹೈಸ್ಕೂಲ್, ನೀಲಗಿರಿಯ ಲೈಡ್ಲಾವ್ ಮೆಮೋರಿಯಲ್ ಸ್ಕೂಲ್‌ನಲ್ಲಿ ಬೋರ್ಡ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಮೈಸೂರಿನಲ್ಲಿ ನಿರ್ಮಿಸಿರುವ ಚಾಮುಂಡಿ ಮಕ್ಕಳ ಮನೆ ಇಂದಿಗೂ ಕಾರ್ಯನಿರ್ವಹಿಸುತ್ತಿದೆ. 2003ರ ಏ.10 ರಂದು ಶೀಲಾ ಇರಾನಿ ನಿಧನರಾದರು. ಆದರೆ ಅವರ ಸೇವೆ ಆದರ್ಶಗಳನ್ನು ರೋಟರಿ ಸೇರಿದಂತೆ ಇನ್ನಿತರ ಸಂಸ್ಥೆಗಳು ಅನುಸರಿಸುತ್ತಿರುವುದು ಗಮನಾರ್ಹ.

ಶ್ರೀ ವೆಂಕಟೇಶ್ವರ ದೇವಾಲಯ ಲೋಕಾರ್ಪಣೆ



ಭಾರತೀನಗರ, ಜೂ.9(ಅ.ಸತೀಶ್)– ಭಾರತೀನಗರದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀವೆಂಕಟೇಶ್ವರ ದೇವಾಲಯವನ್ನು ಗುರುವಾರ ಲೋಕಾರ್ಪಣೆಗೊಳಿಸಲಾಯಿತು.

ಮುಂಜಾನೆಯಿಂದಲೇ ಹೋಮ, ಹವನ ಇತ್ಯಾದಿಗಳೊಂದಿಗೆ ಶ್ರೀವೆಂಕಟೇಶ್ವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಮಹಾಕುಂಭ ಪ್ರೋಕ್ಷಣೆ, ಮಹಾಭಿಷೇಕ, ಕುಂಭಾಭಿಷೇಕ, ಅಲಂಕಾರ ದರ್ಪಣ, ಪಂಚಕನ್ಯಾ, ಮಹಾನೈವೇದ್ಯ ಹಾಗೂ ರಾಜಾಶೀರ್ವಾದ ಇತ್ಯಾದಿ ಪೂಜಾ ಕೈಂಕರ್ಯ ನಡೆಯಿತು. ಡಾ.ಶೆಲ್ವ ಪಿಳ್ಳೆ ಅಯ್ಯಂಗಾರ್ ನೇತೃತ್ವದಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನ ನೆರವೇರಿತು.

ದೇವಾಲಯದ ಕಳಸ ಪ್ರತಿಷ್ಠಾಪನಾ ಕಾರ್ಯದಲ್ಲಿ ಭಾಗವಹಿಸಿ ಮಾತನಾಡಿದ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, ನಮ್ಮ ನಾಡಿನ ಸಂಸ್ಕೃತಿ ಪರಂಪರೆಗೆ ತನ್ನದೇ ಆದ ಮಹತ್ವವಿದೆ. ಮೈಸೂರು ಮಹಾರಾಜರು ದೇವಾಲಯಗಳ ನಿರ್ಮಾಣಕ್ಕೆ ಹೆಚ್ಚಿನ ಮಹತ್ವ ನೀಡಿದ ಪರಿಣಾಮ ಅನೇಕ ದೇವಾಲಯಗಳು ಇಂದಿಗೂ ತಮ್ಮ ವಿಶೇಷತೆ ಉಳಿಸಿಕೊಂಡಿವೆ. ಹಾಗಾಗಿ ಭಾರತೀನಗರದಲ್ಲಿ ನಿರ್ಮಾಣವಾಗಿರುವ ಶ್ರೀವೆಂಕಟೇಶ್ವರ ದೇವಾಲಯವೂ ಭಕ್ತಿಭಾವ ಮೂಡಿಸುತ್ತಿದೆ. ಸುತ್ತಮುತ್ತಲ ಪರಿಸರದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಸಂರಕ್ಷಿಸುವತ್ತಲೂ ಗಮನ ನೀಡಬೇಕೆಂದು ಸಲಹೆ ನೀಡಿದರು. ಈ ವೇಳೆ ಆದಿಚುಂಚನಗಿರಿ ಡಾ.ನಿರ್ಮಲಾನಂದಶ್ರೀಗಳು ಉಪಸ್ಥಿತರಿದ್ದರು. ಬಳಿಕ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಡಿ.ಸಿ.ತಮ್ಮಣ್ಣ, ಭಕ್ತರು ತಮ್ಮ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ತಿರುಪತಿಗೆ ಹೋಗಿ ಬರುತ್ತಿದ್ದರು. ಇಂದು ಭಾರತೀನಗರ ದಲ್ಲೇ ಶ್ರೀವೆಂಕಟೇಶ್ವರ ದರ್ಶನ ಮಾಡಬಹುದು ಎಂದರು.

ಟ್ರಸ್ಟ್ ಕಾರ್ಯಾಧ್ಯಕ್ಷ ವೆಂಕಟೇಶ್ ಮಾತನಾಡಿ, ಭಕ್ತರ ಸಹಕಾರದಿಂದ ಅಚ್ಚುಕಟ್ಟಾದ ದೇವಸ್ಥಾನ ನಿರ್ಮಿಸಲು ಸಾಧ್ಯವಾಗಿದೆ ಎಂದರು. ಇದಕ್ಕೂ ಮುನ್ನಾ ಭಾರತೀ ಎಜುಕೇಷನ್ ಟ್ರಸ್ಟ್ ಆದ ದಕ್ಷಿಣ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಮಧು ಜಿ.ಮಾದೇಗೌಡ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದರು. ಚಾಂಷುಗರ್ಸ್ ಉಪಾಧ್ಯಕ್ಷ ಮಣಿ, ಉಪ ವ್ಯವಸ್ಥಾಪಕ ರವಿ ಮಾತನಾಡಿದರು. ಉದ್ಯಮಿ ರಾಜಣ್ಣ, ಜಿಪಂ ಮಾಜಿ ಸದಸ್ಯ ಎ.ಟಿ.ಬಲ್ಲೇಗೌಡ, ಶೇಖರ್, ಮಹೇಂದ್ರ, ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮುಖಂಡರಾದ ಭೀಮೇಶ್, ನಾಗರಾಜು, ವೆಂಕಟೇಶ್, ಶಿವರಾಮೇಗೌಡ, ಧರ್ಮಸ್ಥಳ ಸಂಸ್ಥೆ ಚೇತನ, ಬಿಇಟಿ ನಿವೃತ್ತ ಪ್ರಾಂಶುಪಾಲ ಬಿ.ಎಸ್.ಬೋರೇಗೌಡ ಮತ್ತಿತರರಿದ್ದರು.



ಶ್ರೀರಂಗಪಟ್ಟಣ ತಾಲೂಕು ಆಡಳಿತದಿಂದ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 6 ಸಾವಿರ ಗಿಡ ನೆಡುವ ಕಾರ್ಯಕ್ರಮವನ್ನು ತಹಶಿಲ್ದಾರ್ ಶ್ವೇತಾ ಎನ್.ರವೀಂದ್ರ ಉದ್ಘಾಟಿಸಿದರು. ಈ ವೇಳೆ ಬಿಇಒ ಎ.ಆರ್.ಅನಂತರಾಜು, ತಾಲೂಕು ಆರೋಗ್ಯಾಧಿಕಾರಿ ಡಾ.ಎನ್.ಕೆ.ವೆಂಕಟೇಶ್, ಎಸ್.ಆರ್.ಸಿದ್ದೇಶ್ ಇತರರಿದ್ದರು.

ಜುಲೈ ಕೊನೆ ವಾರ ಮೈಷುಗರ್ ಕಾರ್ಯಾರಂಭ ಖಚಿತ

ಮೈಷುಗರ್ ಎಂಡಿ ಪಾಟೀಲ ಅಪ್ಪಾ ಸಾಹೇಬ್ ಭರವಸೆ

ಮಂಡ್ಯ, ಜೂ.9(ಮೋಹನ್‌ರಾಜ್)– ಜುಲೈ ಕೊನೆ ವಾರ ಮೈಷುಗರ್ ಕಾರ್ಯಾರಂಭ ಖಚಿತವಾಗಿದ್ದು, ಯಂತ್ರಗಳ ದುರಸ್ತಿ ಕಾರ್ಯ ಭರದಿಂದ ಸಾಗಿದೆ ಎಂದು ಮೈಷುಗರ್ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಪಾಟೀಲ ಅಪ್ಪಾ ಸಾಹೇಬ್ ಭರವಸೆ ನೀಡಿದರು.

ನಗರದ ಮೈಷುಗರ್ ಕಾರ್ಖಾನೆ ದುರಸ್ತಿ ಕಾರ್ಯ ಪರಿಶೀಲಿಸಲು ಆಗಮಿಸಿದ್ದ ವಿವಿಧ ಸಂಘಟನೆಗಳ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮೊದಲ ಹಂತದಲ್ಲಿ ಸರ್ಕಾರದಿಂದ ಈಗಾಗಲೇ 15 ಕೋಟಿ ರೂ. ಬಿಡುಗಡೆಯಾಗಿದೆ. ಅದರಲ್ಲಿ 3.5 ಕೋಟಿ ರೂ. ಖಾತೆಗೆ ಜಮೆ ಆಗಿದ್ದು, ಉಳಿದ ಹಣ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈಗಾಗಲೇ 2.80 ಕೋಟಿ ರೂ.ಗಳನ್ನು ದುರಸ್ತಿ ಕಾರ್ಯಗಳಿಗೆ ನೀಡಲಾಗಿದೆ. ಇನ್ನು ಶೇ.20ರಷ್ಟು ಹಣವನ್ನು 2ನೇ ಕಂತಿನಲ್ಲಿ ನೀಡಬೇಕಾಗಿತ್ತು. ಅದಕ್ಕಾಗಿ 5 ಕೋಟಿ ರೂ. ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಜುಲೈ ತಿಂಗಳಲ್ಲಿ ಪ್ರಾಯೋಗಿಕವಾಗಿ ಕಾರ್ಖಾನೆ ಯಂತ್ರಗಳ ಚಾಲನೆ ನೀಡಲಾಗುವುದು ಎಂದರು.



ಪ್ರಸಕ್ತ ಸಾಲಿನಲ್ಲಿ 5 ಲಕ್ಷ ಟನ್ ಕಬ್ಬು ಅರೆಯುವ ಗುರಿ ಹೊಂದಲಾಗಿದೆ. ಮೈಷುಗರ್ ವ್ಯಾಪ್ತಿಯಲ್ಲಿ 7ರಿಂದ 8 ಟನ್ ಕಬ್ಬು ಲಭ್ಯವಿದೆ. ಈಗಾಗಲೇ 1.50 ಲಕ್ಷ ಟನ್ ಕಬ್ಬನ್ನು ರೈತರಿಂದ ಒಪ್ಪಿಗೆ ಮಾಡಿಕೊಳ್ಳಲಾಗಿದೆ. ಪ್ರತಿದಿನ 4500 ಟನ್ ಕಬ್ಬು ಅರೆಯಲಿದ್ದು, ಪ್ರತಿ ತಿಂಗಳು 1 ಲಕ್ಷ ಟನ್ ಕಬ್ಬು ಅರೆಯುವ ಗುರಿ ಇದೆ. ಅದರಂತೆ ಫೆಬ್ರವರಿ ತಿಂಗಳವರೆಗೂ ಕಾರ್ಖಾನೆ ನಡೆಯಲಿದೆ ಎಂದರು.

ಖಾಸಗಿ ಕಾರ್ಖಾನೆಗಳು ಕಚೇರಿ ತೆರೆದು ಕಬ್ಬು ಒಪ್ಪಿಗೆ ಮಾಡಿಕೊಳ್ಳಲು ಗ್ಯಾಂಗ್‌ಮೆನ್‌ಗಳನ್ನು ನೇಮಕ ಮಾಡಿದ್ದವು. ಈ ಬಗ್ಗೆ ಜಿಲ್ಲಾಧಿಕಾರಿಗೆ ದೂರು ನೀಡಿದ್ದೆವು. ಜಿಲ್ಲಾಧಿಕಾರಿ ಖಾಸಗಿ ಕಾರ್ಖಾನೆಗಳು ಕಚೇರಿ ತೆರವುಗೊಳಿಸುವಂತೆ ಆದೇಶ ಹೊರಡಿಸಿದ್ದಾರೆ. ಇದರಿಂದ ನಮ್ಮ ಕಬ್ಬು ಕಾರ್ಖಾನೆಗೆ ಸಿಗಲಿದೆ. 15 ರಿಂದ 20 ಮಂದಿ ಗ್ಯಾಂಗ್‌ಮೆನ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಒಪ್ಪಿಗೆ ಕಾರ್ಯ ಮುಂದುವರೆದಿದೆ. 6 ತಿಂಗಳಿಗೆ 6 ಲಕ್ಷ ಟನ್ ಕಬ್ಬು ಅರೆಯಬಹುದು. ಜುಲೈ ಮೊದಲ ವಾರದಲ್ಲೇ ಕಾರ್ಖಾನೆ ಆರಂಭಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಕಾರ್ಖಾನೆಯಲ್ಲಿ ಪುಣೆ ಹಾಗೂ ಹೈದರಾಬಾದ್‌ನ 2 ಕಂಪನಿಗಳಿಂದ ಈಗಾಗಲೇ ಯಂತ್ರಗಳ ದುರಸ್ತಿ ಕಾರ್ಯ ಭರದಿಂದ ಸಾಗಿದೆ. 200 ಮಂದಿ ಕಾರ್ಮಿಕರ ಅಗತ್ಯವಿದೆ. ಈಗಾಗಲೇ 100 ಮಂದಿ ಕಾರ್ಮಿಕರು ಆಗಮಿಸಿದ್ದು, ಶನಿವಾರದೊಳಗೆ ಇನ್ನುಳಿದ 100 ಮಂದಿ ಕಾರ್ಮಿಕರು ಆಗಮಿಸಲಿದ್ದಾರೆ. ಎಲ್ಲ ಕಾರ್ಮಿಕರಿಗೂ ವಸತಿ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಸರ್ಕಾರ ಘೋಷಿಸಿರುವ 50 ಕೋಟಿ ರೂ. ಅನುದಾನದಲ್ಲಿ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಿ ವಿಆರ್‌ಎಸ್ ತೆಗೆದುಕೊಂಡಿರುವ ನೌಕರರಿಗೆ ಬಾಕಿ 3.9 ಕೋಟಿ ರೂ. ತಿರುವಳಿ ಮಾಡಬೇಕಾಗಿದೆ. ಇನ್ನುಳಿದ ಅನುದಾನದಲ್ಲಿ ಕಾರ್ಖಾನೆ ಆರಂಭಿಸುವ ಸರ್ಕಾರದ ಆದೇಶದ ಇದೆ. ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಲು ರೈತರೇ ಖುದ್ದಾಗಿ ಕಾರ್ಖಾನೆಗೆ ಆಗಮಿಸಿ ಒಪ್ಪಿಗೆ ನೋಂದಣಿ ಮಾಡಿಸುತ್ತಿದ್ದಾರೆ. ಕಾರ್ಖಾನೆ ಆರಂಭಿಸಲು ರೈತರೂ ಸಹಕರಿಸುತ್ತಿದ್ದಾರೆ ಎಂದರು.

ಸಭೆಯಲ್ಲಿ ಮೈಷುಗರ್ ಉಳಿಸಿ ಹೋರಾಟ ಸಮಿತಿ ಅಧ್ಯಕ್ಷ ಎಸ್.ಕೃಷ್ಣ, ಜಿಪಂ ಮಾಜಿ ಅಧ್ಯಕ್ಷ ವೆಂಕಟೇಶ್, ರೈತ ಮುಖಂಡ ಮುದ್ದೇಗೌಡ, ಕನ್ನಡ ಸೇನೆ ಮಂಜುನಾಥ್, ಸಿಐಟಿಯು ಸಿ.ಕುಮಾರಿ, ಕೃಷಿ ಪ್ರಾಂತ ರೈತಸಂಘದ ಟಿ.ಎಲ್.ಕೃಷ್ಣೇಗೌಡ, ಟಿ.ಯಶವಂತ, ಕೃಷಿ ಕೂಲಿಕಾರರ ಸಂಘದ ಪುಟ್ಟಮಾಧು, ದಸಂಸ ಮುಖಂಡ ಎಂ.ವಿ.ಕೃಷ್ಣ ಸೇರಿದಂತೆ ಮತ್ತಿತರರಿದ್ದರು.

ಸರ್ಕಾರದಿಂದಲೇ ದೂರು ದಾಖಲಿಸಲು ಕ್ರಮ

ಕಾರ್ಖಾನೆಯಲ್ಲಿ 121 ಕೋಟಿ ರೂ. ಅವ್ಯವಹಾರಕ್ಕೆ ಸಂಬಂಧಿಸಿದಂತೆ ಹಿಂದಿನ ಅಧ್ಯಕ್ಷ ನಾಗರಾಜಪ್ಪ ವಿರುದ್ಧ ದೂರು ದಾಖಲಿಸುವಂತೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಹೊರಡಿಸಿರುವ ಆದೇಶಕ್ಕೆ ಸರ್ಕಾರದಿಂದಲೇ ದೂರು ದಾಖಲಿಸಲು ಕ್ರಮ ವಹಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಇಲ್ಲಿ ದೂರು ದಾಖಲಿಸಿದರೆ ಪ್ರಭಾವ ಬೀರುವ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರದ ಮಟ್ಟದಲ್ಲೇ ದೂರು ದಾಖಲಿಸಿ 121 ಕೋಟಿ ರೂ.ಗೆ ಶೇ.18 ರಷ್ಟು ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು ಎಂದು ಎಂಡಿ ಪಾಟೀಲ ಅಪ್ಪಾ ಸಾಹೇಬ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖಂಡ ಎಸ್.ಕೃಷ್ಣ ಸರ್ಕಾರ ಮಟ್ಟದಲ್ಲಿಯೇ ಪ್ರಕರಣ ದಾಖಲಾದರೆ ಅದಕ್ಕೆ ಅಗತ್ಯ ದಾಖಲಾತಿ ಹಾಗೂ ನಮ್ಮ ಕಡೆಯಿಂದಲೂ ಮತ್ತೊಂದು ಪ್ರಕರಣ ದಾಖಲಿಸಲಾಗುವುದು ಎಂದರು.

ಸಂತೆ, ಜಾತ್ರೆ, ಮದ್ಯ ಮಾರಾಟ ನಿಷೇಧ

ಮಂಡ್ಯ, ಜೂ.9– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮತದಾರರಿಗೆ ಮುಕ್ತ ಮತ್ತು ನ್ಯಾಯೋಚಿತ ಮತದಾನಕ್ಕೆ ಅವಕಾಶ ಕಲ್ಪಿಸುವ ಸಲುವಾಗಿ ದಂಡ ಪ್ರಕ್ರಿಯೆ ಸಂಹಿತೆ (ಸಿಆರ್‌ಪಿಸಿ) ಕಲಂ 144 ಅಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜೂ.13ರಂದು ಜಿಲ್ಲಾದ್ಯಂತ ಮತದಾನ ನಡೆಯುವ ಮತಕೇಂದ್ರಗಳ 200 ಮೀಟರ್ ಸುತ್ತಳತೆ ವ್ಯಾಪ್ತಿಯಲ್ಲಿ ಯಾವುದೇ ಜಾತ್ರೆ ಸೇರಿದಂತೆ ಸಂತೆ, ಉತ್ಸವ ಹಾಗೂ ಜೂ.11ರ ಸಂಜೆ 4ರಿಂದ ಜೂ.13ರ ಸಂಜೆ 4ರ ವರೆಗೆ ಎಲ್ಲಾ ತರಹದ ಮದ್ಯದ ಅಂಗಡಿ/ ಬಾರ್ ಅಂಡ್ ರೆಸ್ಟೋರೆಂಟ್/ ಕ್ಲಬ್‌ಗಳಲ್ಲಿ ಮದ್ಯ ಮಾರಾಟ ನಿಷೇಧಿಸಿರುತ್ತಾರೆ. ಈ ಅವಧಿಯಲ್ಲಿ ಮದ್ಯ ಮಾರಾಟ, ಹಂಚಿಕೆ, ಸಾಗಾಣಿಕೆ ಮತ್ತು ಶೇಖರಣೆ ನಿಷೇಧಿಸಿ "ಒಣ ದಿನ" (DRY DAY) ವೆಂದು ಡಿಸಿ ಎಸ್.ಅಶ್ವತಿ ಆದೇಶ ಹೊರಡಿಸಿದ್ದಾರೆ.

ಮೈ.ವಿ. ರವಿಶಂಕರ್ ಪರ ನೂತನ ಎಂಎಲ್‌ಸಿ ಹೇಮಲತಾ ನಾಯಕ್, ರಾಮಚಂದ್ರ ಮತಯಾಚನೆ



ಚಾಮರಾಜನಗರ, ಜೂ.9– ನೂತನ ವಿಧಾನ ಪರಿಷತ್ ಸದಸ್ಯೆ ಕೊಪ್ಪಳದ ಹೇಮಲತಾ ನಾಯಕ್ ಹಾಗೂ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ನಗರದಲ್ಲಿ ವಿವಿಧ ಶಾಲಾ ಕಾಲೇಜು, ಸರ್ಕಾರಿ ಕಚೇರಿಗಳಿಗೆ ತೆರಳಿ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಪರ ಮತಯಾಚಿದರು.

ನಗರದ ಶ್ರೀ ರಾಮಚಂದ್ರ ಪ್ರೌಢಶಾಲೆ, ನಗರಸಭೆ ಕಚೇರಿ ಸೇರಿದಂತೆ ಇನ್ನಿತರ ಕಡೆಗಳಲ್ಲಿ ತೆರಳಿ ಪದವೀಧರ ಶಿಕ್ಷಕರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಭೇಟಿಯಾಗಿ ಕೇಂದ್ರ, ರಾಜ್ಯ ಸರ್ಕಾರ ಹಾಗೂ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಒಳ್ಳೆಯ ವ್ಯಕ್ತಿತ್ವ, ಸರಳ ಸಜ್ಜನಿಕೆಗೆ ಹೆಸರುವಾಸಿಯಾಗಿರುವ ಇವರನ್ನು ಗೆಲ್ಲಿಸಿ ವಿಧಾನಪರಿಷತ್‌ಗೆ ಕಳುಹಿಸಿಕೊಡಿ ಎಂದು ಮನವಿ ಮಾಡಿಕೊಂಡರು.

ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ್ ಮಾತನಾಡಿ, ದಕ್ಷಿಣ ಪದವೀಧರರ ಕ್ಷೇತ್ರಗಳ ನಾಲ್ಕು ಸ್ಥಾನಗಳಿಗೂ ಚುನಾವಣೆ ನಡೆಯುತ್ತಿದೆ. ನಾಲ್ಕರಲ್ಲೂ ಸಹ ಬಿಜೆಪಿ ಅಭ್ಯರ್ಥಿಗಳು ಜಯಗಳಿಸಲಿದ್ದಾರೆ. ಕೇಂದ್ರ ಹಾಗೂ ರಾಜ್ಯ ದಲ್ಲಿ ಬಿಜೆಪಿ ಸರ್ಕಾರ ಸಾಧನೆಯನ್ನು ಅರಿತಿರುವ ಪ್ರಬುದ್ಧ ಮತದಾರರು ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸಿ ಪ್ರಥಮ ಪ್ರಾಶಸ್ತ್ಯದ ಮತಗಳನ್ನು ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಕಲ್ಯಾಣಕ್ಕಾಗಿ ಬಿಜೆಪಿ ಅವಿರತವಾಗಿ ಶ್ರಮಿಸುತ್ತಿದೆ. ಈಗಾಗಲೇ ಅನೇಕ ಯೋಜನೆಗಳನ್ನು ಅನುಷ್ಠಾನ ಮಾಡುವ ಜೊತೆಗೆ ಜನಾಂಗದ ಮಕ್ಕಳ ಶಿಕ್ಷಣ, ಉದ್ಯೋಗ ಹಾಗೂ ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯಗಳನ್ನು ಕಲ್ಪಿಸಿ, ಸ್ವಾವಲಂಬಿ ಜೀವನ ನಡೆಸಲು ನೆರವಾಗುತ್ತಿವೆ. ಈಗಾಗಲೇ ನಾಯಕ ಜನಾಂಗದ ಪರ್ಯಾಯ ಪದಗಳಾದ ಪರಿವಾರ ಮತ್ತು ತಳವಾರವನ್ನು ಎಸ್ಟಿಗೆ ಸೇರಿಸಿದೆ. ಶೇ.7.5ರಷ್ಟು ಮೀಸಲಾತಿ ನೀಡಲು ಬಿಜೆಪಿ ಸರ್ಕಾರ ಬದ್ಧವಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಎಸ್ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ರಾಜ್ಯ ಕಾರ್ಯಕಾರಿಣಿ ಸದಸ್ಯ ಸುರೇಶ ನಾಯಕ, ಎಸ್ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಗಂಗಾಧರ್, ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾ ಅಧ್ಯಕ್ಷ ಜಯಸುಂದರ್,ಪ್ರಧಾನ ಕಾರ್ಯದರ್ಶಿ ಶಂಕರ್, ನಗರ ಸಭಾ ಅಧ್ಯಕ್ಷೆ ಆಶಾ ನಟರಾಜು ಇತರರಿದ್ದರು.

ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಧರಣಿ ಕೈಬಿಡಲು ಮನವಿ

ಚಾಮರಾಜನಗರ: ನಾಗಮೋಹನ್ ದಾಸ್ ವರದಿ ಜಾರಿಗೆ ಒತ್ತಾಯಿಸಿ ಕಳೆದ 120 ದಿನಗಳಿಂದ ನಿರಂತರವಾಗಿ ಧರಣಿ ನಡೆಸುತ್ತಿರುವ ದಾವಣಗೆರೆ ಜಿಲ್ಲೆಯ ರಾಜನಹಳ್ಳಿಯ ವಾಲ್ಮೀಕಿ ಮಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರ ಮತ್ತು ನಾಯಕ ಸಮಾಜದ ನಾಯಕರ ಮೇಲೆ ವಿಶ್ವಾಸವನ್ನಿಟ್ಟು ಧರಣಿಯನ್ನು ಕೈಬಿಡುವಂತೆ ನೂತನ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ಮನವಿ ಮಾಡಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಗಳು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 120 ದಿನಗಳಿಂದ ನಡೆಸುತ್ತಿರುವ ಧರಣಿಗೆ ನಾನು ಸಹ ಸಮಾಜದ ಹೆಣ್ಣು ಮಗಳಾಗಿ ಬೆಂಬಲ ಸೂಚಿಸುತ್ತೇನೆ. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಾಯಕ ಸಮುದಾಯದ ಪರವಾಗಿದ್ದು, ಪರಿಶಿಷ್ಟ ವರ್ಗಗಳಿಗೆ ಬಹಳಷ್ಟು ಸೌಲಭ್ಯಗಳನ್ನು ಶಿಕ್ಷಣ, ಆರೋಗ್ಯ ಕ್ಷೇತ್ರ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಕಲ್ಪಿಸಿಕೊಡುತ್ತಿವೆ. ಸಚಿವ ಶ್ರೀರಾಮುಲು ನೇತೃತ್ವದಲ್ಲಿ ರಾಜ್ಯ ಸರ್ಕಾರಕ್ಕೆ ಸಮಸ್ಯೆಯ ಬಗ್ಗೆ ಹಾಗೂ ಶೇ.7.5 ಮೀಸಲಾತಿ ನೀಡುವ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ನಾನು ಸಹ ಮೀಸಲಾತಿ ಒಂದು ಭಾಗವಾಗಿ ವಿಧಾನ ಪರಿಷತ್ ಸದಸ್ಯಳಾಗಿದ್ದೇನೆ ಎಂದರು.

ಇದೊಂದು ಸೂಕ್ಷ್ಮ ವಿಚಾರವಾಗಿದೆ. ಪಕ್ವವಾದ ಕಾಲದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಶೇ.7.5 ರಷ್ಟು ಮೀಸಲಾತಿಯನ್ನು ಕೊಟ್ಟೇ ಕೊಡುತ್ತದೆ ಎಂಬ ಭರವಸೆ ಇದ್ದು, ಸರ್ಕಾರದ ಮೇಲೆ ಸ್ವಾಮೀಜಿಗಳು ವಿಶ್ವಾಸ ಹೊಂದಬೇಕು. ಹೋರಾಟದ ಮೂಲಕವೇ ಪಡೆದುಕೊಳ್ಳುತ್ತೇವೆ ಎಂಬುದು ಸರಿಯಾದ ಕ್ರಮವಲ್ಲ, ಜಾತಿಗಳ ಪಟ್ಟಿಗಳಲ್ಲಿ ಕಾನೂನು ತೊಡಕು ಇದೆ. ಇದನ್ನು ಪರಿಹರಿಸಿ ನಂತರ ಶೇ.7.5 ರಷ್ಟು ಮೀಸಲಾತಿಯನ್ನು ಘೋಷಣೆ ಮಾಡುತ್ತದೆ ಹೀಗಾಗಿ ಧರಣಿಯನ್ನು ಕೈಬಿಡಬೇಕು ಎಂದು ಹೇಮಲತಾ ನಾಯಕ್ ಶ್ರೀಗಳಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಂಡರು.

ಇಂದಿನಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜೂ.9– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಗುಂಡ್ಲುಪೇಟೆ ತಾಲೂಕಿನ ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜೂ.10 ಮತ್ತು 11 ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜೂ.10 ರಂದು ಹಾಲಳ್ಳಿ, ಕಮರಹಳ್ಳಿ, ಬೊಗ್ಗನಪುರ, ಮರಳಾಪುರ, ರಂಗನಾಥಪುರ, ತೊರವಳ್ಳಿ, ನಿಟ್ರೆ, ಹಿರಿಕಾಟಿ, ಚಿಕ್ಕಾಟಿ, ಅರೆಪುರ, ತೊಂಡವಾಡಿ ಹಾಗೂ ಸುತ್ತಮುತ್ತಲ ಪ್ರದೇಶಗಳು ಜೂ.11 ರಂದು ಹಿರಿಕಾಟಿ, ನಿಟ್ರೆ ಬೇಗೂರು, ವಾಟರ್ ಸಪ್ಲೈ, ಹೆಗ್ಗಡಹಳ್ಳಿ, ಮಂಚಳ್ಳಿ ಎನ್.ಜೆ.ವೈ, ಶೆಟ್ಟಿಹಳ್ಳಿ, ದೇಸಿಪುರ, ಇಂಡಸ್ಟ್ರಿಯಲ್, ಹೊರೆಯಾಲ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ.1912 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಸಂಸದ ಪ್ರತಾಪ್ ವಿರುದ್ಧ ಜಿಲ್ಲಾ ವಕೀಲರ ಸಂಘದಿಂದ ಪ್ರತಿಭಟನೆ



ಚಾಮರಾಜನಗರ, ಜೂ.9– ವಕೀಲಿ ವೃತ್ತಿ ಕುರಿತು ಸಂಸದ ಪ್ರತಾಪ್ ಸಿಂಹ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆಪಾದಿಸಿ ಜಿಲ್ಲಾ ವಕೀಲರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ನಗರದ ಜಿಲ್ಲಾ ನ್ಯಾಯಾಲಯದ ಪಕ್ಕದಲ್ಲಿರುವ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ ಅವರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಚರ್ಚಿಸಿ ವಕೀಲರು ಒಕ್ಕೊರಲಿನಿಂದ ಪ್ರತಾಪ್ ಸಿಂಹ ಹೇಳಿಕೆ ಖಂಡಿಸಿ ಪ್ರತಿಭಟನೆ ನಡೆಸಿದರು. ಪ್ರತಾಪ್ ಸಿಂಹ ವಿರುದ್ಧ ಘೋಷಣೆ ಕೂಗಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತನಾಡಿ, ಈ ದೇಶಕ್ಕೆ ವಕೀಲರ ಕೊಡುಗೆ ಅಪಾರವಾದದ್ದು, ಆದರೆ ಪ್ರತಾಪ್ ಸಿಂಹ ಮಾಜಿ ಮುಖ್ಯಮಂತ್ರಿಯೊಬ್ಬರನ್ನು ಕುರಿತು ಮಾತನಾಡುವಾಗ ತಾಲೂಕು ನ್ಯಾಯಾಲಯದಲ್ಲಿ ಅಭ್ಯಾಸ ಮಾಡುತ್ತಿದ್ದರು. ಅವರಿಗೆ ಆರ್ಥಿಕತೆ ಬಗ್ಗೆ ಏನು ಗೊತ್ತು ಎಂದು ಹೇಳುವ ಮೂಲಕ ವಕೀಲರಿಗೆ ಅವಮಾನ ಮಾಡಿರುವುದಲ್ಲದೆ. ವಕೀಲಿ ವೃತ್ತಿಯನ್ನು ಹೀಯಾಳಿಸಿದ್ದಾರೆ. ತಾಲೂಕು ನ್ಯಾಯಾಲಯದಲ್ಲಿ ಅಭ್ಯಾಸ ಮಾಡುವವರು ವಕೀಲರಲ್ಲವೇ? ವಕೀಲ ವೃತ್ತಿ ಬಗ್ಗೆ ಪ್ರತಾಪ್ ಸಿಂಹ ಅವರಿಗೇನು ಗೊತ್ತು. ಪ್ರತಾಪ್ ಸಿಂಹ ಅವರು ತಮ್ಮ ಹೇಳಿಕೆ ಕುರಿತು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಕೆ.ವಿರೂಪಾಕ್ಷಸ್ವಾಮಿ, ಜಂಟಿ ಕಾರ್ಯದರ್ಶಿ ಮಲ್ಲು ಹಾಗೂ ವಕೀಲರು ಭಾಗವಹಿಸಿದ್ದರು.

ಚಾಮುಲ್ ಚುನಾವಣೆಯಲ್ಲಿ ಬಿಜೆಪಿ ಪರ ಮತದಾನ

ಗುಂಡ್ಲುಪೇಟೆ, ಜೂ.9(ಸೋಮ್.ಜಿ)–



ಕೇಂದ್ರದಲ್ಲಿ ಮೋದಿ ಸರ್ಕಾರ ತೆಗೆದುಕೊಂಡ ಅನೇಕ ದಿಟ್ಟ ಕ್ರಮಗಳು ಮತ್ತು ರೈತರಿಗೆ ಅನುಕೂಲವಾಗಲಿರುವ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯನ್ನು ಸ್ಮರಿಸಿ ಚಾಮುಲ್ ಚುನಾವಣೆಯಲ್ಲಿ ಮತದಾರ ಪ್ರಭುಗಳು ಮತದಾನ ಮಾಡಲಿದ್ದಾರೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಚುನಾವಣೆ ಪ್ರಚಾರ ಕೈಗೊಂಡಿರುವ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಮಾಜಿ ಸಿಎಂ ಯಡಿಯೂರಪ್ಪ ಅವರು ರೈತರಿಗೆ ನೀಡಿದ ಪ್ರೋತ್ಸಾಹಧನ ಮತ್ತು ಹಾಲಿ ಸಿಎಂ ಬಸವರಾಜ ಬೊಮ್ಮಾಯಿ ಅವರು ರೈತರ ಮಕ್ಕಳಿಗೆ ತಂದಿರುವ ವಿದ್ಯಾಸಿರಿಯಂತಹ ನೂರಾರು ರೈತಪರ ಕಾರ್ಯಕ್ರಮವನ್ನು ಮೆಚ್ಚಿ ಮತದಾರ ಪ್ರತಿನಿಧಿಗಳು ಈ ಬಾರಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳನ್ನು ಜಯಶೀಲರನ್ನಾಗಿ ಮಾಡಲಿದ್ದಾರೆ ಎಂದರು.

ಕೆಲವರು ತಾವೇ ಬಿಜೆಪಿ ಅಭ್ಯರ್ಥಿಗಳು ಎಂದು ಹೇಳಿಕೊಂಡು ಪ್ರಚಾರದಲ್ಲಿ ತೊಡಗಿದ್ದಾರೆ. ಈ ವಿಚಾರ ನನ್ನ ಗಮನಕ್ಕೆ ಬಂದಿದ್ದು, ಅವರ ವಿರುದ್ಧ ಕ್ರಮಕೈಗೊಳ್ಳುವಂತೆ ಜಿಲ್ಲಾ ಘಟಕಕ್ಕೆ ತಿಳಿಸಿದ್ದೇವೆ ಎಂದರು.

ಈ ಬಗ್ಗೆ ಯಾರೂ ಸಹ ಗೊಂದಲಕ್ಕೆ ಈಡಾಗದೇ ಬಿಜೆಪಿಯ ಬೆಂಬಲಿತ ಅಭ್ಯರ್ಥಿಗಳಾದ ಕಣ್ಣೇಗಾಲ ಸ್ವಾಮಿ ಮತ್ತು ಸುಜೇಂದ್ರ ರವರಿಗೆ ಮತ ನೀಡಬೇಕೆಂದು ಮನವಿ ಮಾಡಿದ್ದಾರೆ.

ಗದ್ದಲದ ಗೂಡಾದ ವಿ.ಪೇಟೆ ಪಪಂ ಸಭೆ



ವಿರಾಜಪೇಟೆ, ಜೂ. 9– ಇಲ್ಲಿನ ಪಟ್ಟಣ ಪಂಚಾಯಿತಿ ವಿಶೇಷ ಸಭೆಯಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆದು, ಕೂಗಾಟ ಚೀರಾಟಗಳೇ ಮೇಳೈಸಿ ಸಭೆ ಗದ್ದಲದ ಗೂಡಾಗಿತ್ತು. ನಂತರ ಗದ್ದಲ ತಹಬದಿಗೆ ಬಾರದ ಕಾರಣ ಪಂಚಾಯಿತಿ ಅಧ್ಯಕ್ಷೆ ಸುಸ್ಮಿತಾ ಸಭೆಯನ್ನು ಮುಂದೂಡಿದರು.

ಸಭೆಯ ಆರಂಭದಲ್ಲಿ ಕಾಂಗ್ರೆಸ್ ಸದಸ್ಯ ಸಿ.ಕೆ.ಪೃಥ್ವಿನಾಥ್ ಮಾತನಾಡಿ, ನಮ್ಮ ಬಳಿ ಎರಡು ಕಾರ್ಯಸೂಚಿ ಇದ್ದು ಯಾವುದರಲ್ಲಿ ಸಭೆ ನಡೆಸಬೇಕು ಎಂದಾಗ ಸಭೆಯಲ್ಲಿ ಆಡಳಿತ ಹಾಗೂ ವಿಪಕ್ಷಗಳ ನಡುವೆ ಮಾತಿಗೆ ಮಾತು ಬೆಳೆದು ಗೊಂದಲ ಉಂಟಾಯಿತು.

ಈ ವೇಳೆ ಅಧ್ಯಕ್ಷೆ ಸುಸ್ಮಿತಾ ಅವರು ಕಾರ್ಯಸೂಚಿಯಂತೆ ಸಭೆ ನಡೆಸಲು ಸೂಚಿಸಿದರು. ಈ ಕುರಿತು ಪ್ರತಿಪಕ್ಷ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರುಗಳು ಕಾರ್ಯಸೂಚಿ ಸರಿಯಾಗಿಲ್ಲ. ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ನಡೆಯಬೇಕೆಂದು ಪಟ್ಟು ಹಿಡಿದು, ಹಳೆ ಕಾರ್ಯಸೂಚಿಯಂತೆ ಸಭೆ ನಡೆಸಲು ಏರುದನಿಯಲ್ಲಿ ಆಗ್ರಹಿಸಿದರು. ಈ ವೇಳೆ ಅಧ್ಯಕ್ಷರು ಕುಳಿತುಕೊಳ್ಳುವಂತೆ ಸೂಚಿಸಿದರು. ಇದರಿಂದ ಆಡಳಿತರೂಢ ಬಿಜೆಪಿ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ವಾಗ್ವಾದ ನಡೆದು, ಸದಸ್ಯ ಪೃಥ್ವಿನಾಥ್ ಕಾರ್ಯಸೂಚಿ ಹರಿದು ಎಸೆದರು. ಇದು ಇನ್ನಷ್ಟು ಕೂಗಾಟ ರಾದ್ಧಾಂತಕ್ಕೆ ಕಾರಣವಾಯಿತು.

ಬಿಜೆಪಿ ಪಕ್ಷದ ಆಡಳಿತದ ವಿರುದ್ಧ ಕಾಂಗ್ರೆಸ್ ಮತ್ತು ಜೆಡಿಎಸ್ ಖಂಡನಾ ನಿರ್ಣಯಕ್ಕೆ ಆಗ್ರಹಿಸಿದಾಗ ಸದಸ್ಯರುಗಳು ಪರಸ್ಪರ ಧಿಕ್ಕಾರ ಕೂಗಿದರು. ಈ ಸಂದರ್ಭ ಮುಖ್ಯಾಧಿಕಾರಿ ಚಂದ್ರಕುಮಾರ್ ಸಭೆಯನ್ನು ಕೆಲಕಾಲ ಮುಂದೂಡಿದರು. ನಂತರ ಸಭೆ ಮತ್ತೆ ಸೇರಿದಾಗ ಉಪಾಧ್ಯಕ್ಷ ವಿಯಾಂಕ್ ಕುಟ್ಟಪ್ಪ ಮಾತನಾಡಿ ಜನಪರ ಕಾಳಜಿ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಶಾಂತಿಯುತವಾಗಿ ಸಭೆಯನ್ನು ನಡೆಸುವಂತೆ ಪ್ರತಿಪಕ್ಷದವರನ್ನು ವಿನಂತಿಸಿದರು. ಇದಕ್ಕೆ ಪೂರಕವಾಗಿ ಕಾಂಗ್ರೆಸ್ ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ, ನಾವು ಮೇ 26 ರಂದು ನಡೆದ ಸಭೆಗೆ ಕಾಳಜಿಯಿಂದ ಬಂದಾಗ ಆಡಳಿತ ಬಿಜೆಪಿಯ ಯಾವುದೇ ಸದಸ್ಯರು ಸಭೆಗೆ ಬಾರದೆ ಇರುವುದರಿಂದ ಪಂಚಾಯಿತಿ ನಿಯಮದಂತೆ ಹಿಂದಿನ ಸಭೆಯ ಕಾರ್ಯಸೂಚಿಯಂತೆ ಸಭೆ ನಡೆಸು ವಂತೆ ಒತ್ತಾಯಿಸಿದರು. ಇದರಿಂದ ಮತ್ತೆ ಗೊಂದಲ ಉಂಟಾಗುತ್ತಿದ್ದಂತೆ ಅಧ್ಯಕ್ಷೆ ಸಭೆ ಮುಂದೂಡಿರುವುದಾಗಿ ಘೋಷಿಸಿದರು.

ನಕ್ಸಲ್ ಮುಖಂಡನ ಕೋರ್ಟ್‌ಗೆ ಹಾಜರುಪಡಿಸಿದ ಪೋಲೀಸರು



ಮಡಿಕೇರಿ,ಜೂ.9– ನಕ್ಸಲ್ ಸಂಘಟನೆಯ ಶಂಕಿತ ಮುಖಂಡ ರೂಪೇಶ್‌ನನ್ನು ಬಿಗಿ ಭದ್ರತೆಯಲ್ಲಿ ಮಡಿಕೇರಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಕೇರಳ ರಾಜ್ಯದ ವೈವೂರು ಕೇಂದ್ರ ಕಾರಾಗೃಹದಲ್ಲಿ ಬಂಧಿಯಾಗಿರುವ ರೂಪೇಶ್‌ನನ್ನು ಬುಧವಾರ ಸಂಜೆ ಮಡಿಕೇರಿಗೆ ಕರೆತಂದು ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿರಿಸಲಾಗಿತ್ತು. ಗುರುವಾರ ಬೆಳಗ್ಗೆ ಶಸ್ತ್ರ ಸಜ್ಜಿತ ಕೊಡಗು ಕಮಾಂಡೋ ಮತ್ತು ಕೇರಳ ಥಂಡರ್ ಬೋಲ್ಟ್ ಕಮಾಂಡೋಗಳ ಬಿಗಿ ಭದ್ರತೆಯಲ್ಲಿ ರೂಪೇಶ್‌ನನ್ನು ನ್ಯಾಯಾಲಯಕ್ಕೆ ಕರೆತರಲಾಯಿತು. ಪೊಲೀಸ್ ವಾಹನದಿಂದ ಕೆಳಗಿಳಿಯುತ್ತಿದ್ದಂತೆಯೇ 'ಡೌನ್‌ಡೌನ್ ಸಿಲ್ವರ್ ಲೈನ್'. 'ಕಮ್ಯುನಿಸ್ಟ್ ಸರಕಾರಗಳು ನವ ಉದಾರವಾದಿ ನೀತಿಗೆ ಜೋತು ಬಿದ್ದಿವೆ' ಎಂದು ಅಸಮಾಧಾನದ ಘೋಷಣೆ ಕೂಗಿ ನ್ಯಾಯಾಲಯ ಆವರಣ ಪ್ರವೇಶಿಸಿದ. ಬಳಿಕ ಸಿಜೆಎಂ ನ್ಯಾಯಾಲಯದ ನ್ಯಾಯಾಧೀಶರಾದ ಎನ್.ಬಿ. ಜಯಲಕ್ಷ್ಮಿ ಅವರ ಮುಂದೆ ಶಂಕಿತ ನಕ್ಸಲ್ ಮುಖಂಡ ರೂಪೇಶ್‌ನನ್ನು ಹಾಜರುಪಡಿಸಲಾಯಿತು.

ಪ್ರಕರಣ ಹಿನ್ನೆಲೆ: 2013ರ ಫೆಬ್ರವರಿ 1 ರಂದು ಭಾಗಮಂಡಲ ಪೊಲೀಸ್ ಠಾಣಾ ವ್ಯಾಪ್ತಿಯ ಮುಂಡ್ರೋಟು ಎಂಬ ಪ್ರದೇಶದಲ್ಲಿರುವ ಮಾಗುಂಡಿ ತೋಟದಲ್ಲಿ 4 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಸಂಜೆ ವೇಳೆ ಕೆಲ ಶಂಕಿತ ವ್ಯಕ್ತಿಗಳು ಆಗಮಿಸಿ 'ತಾವು ನಕ್ಸಲರು' ಎಂದು ಹೇಳಿಕೊಂಡಿದ್ದರಲ್ಲದೇ, ಅಲ್ಲಿದ್ದ ಕಾರ್ಮಿಕರಿಂದ ಬಲವಂತವಾಗಿ ದಿನ ಬಳಕೆ ವಸ್ತುಗಳನ್ನು ಪಡೆದು ಕಾಲ್ಕಿತ್ತಿದ್ದರು. ಈ ಕುರಿತು ಭಾಗಮಂಡಲ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ತದನಂತರ ನಡೆದ ಬೆಳವಣಿಗೆಯಲ್ಲಿ ರೂಪೇಶ್ ತಮಿಳುನಾಡಿನಲ್ಲಿ ಸೆರೆಸಿಕ್ಕಿದ್ದು, ವಿಚಾರಣೆ ಸಂದರ್ಭ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ರೂಪೇಶ್ ವಿರುದ್ಧ ಪ್ರಕರಣ ದಾಖಲಾಗಿರುವುದು ಕಂಡು ಬಂದಿತ್ತು ಈ ಕಾರಣದಿಂದ ಮಡಿಕೇರಿ ನ್ಯಾಯಾಲಯದಲ್ಲೂ ವಿಚಾರಣೆ ನಡೆಸಲಾಗುತ್ತಿದೆ. 2013ರಲ್ಲಿ ಮಾಗುಂಡಿ ತೋಟದಲ್ಲಿ ಕೆಲಸ ಮಾಡುತ್ತಿದ್ದ 3 ಮಂದಿ ಕಾರ್ಮಿಕರು, ದಿನಸಿ ಅಂಗಡಿ ಮಾಲೀಕ, ಓರ್ವ ಆಟೋ ಚಾಲಕ ಕೂಡ ಗುರುವಾರ ಮಡಿಕೇರಿ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಸಾಕ್ಷಿ ವಿಚಾರಣೆ ನಡೆಸಿದ ನ್ಯಾಯಾಧೀಶರು ಮುಂದಿನ ವಿಚಾರಣೆಯ ಜೂ.24ಕ್ಕೆ ನಿಗದಿಪಡಿಸಿದರು.

ನಗರ ಠಾಣಾಧಿಕಾರಿ ದಿವಾಕರ್ ನೇತೃತ್ವದಲ್ಲಿ ನ್ಯಾಯಾಲಯದ ಆವರಣದಲ್ಲಿ ಬಿಗಿ ಪೊಲೀಸ್ ಭದ್ರತೆಯನ್ನು ಏರ್ಪಡಿಸಲಾಗಿತ್ತು. ನ್ಯಾಯಾಲಯಕ್ಕೆ ಹಾಜರಾಗಿ ಹೊರ ಬಂದ ರೂಪೇಶ್‌ನನ್ನು ಪೊಲೀಸ್ ಸರ್ಪಗಾವಲಿನಲ್ಲಿ ಕೇರಳದ ವೈವೂರು ಕೇಂದ್ರ ಕಾರಾಗೃಹಕ್ಕೆ ಕರೆದೊಯ್ಯಲಾಯಿತು.

ರಾಜ್ಯ ಗುಪ್ತ ದಳ, ರಾಜ್ಯ ಆಂತರಿಕ ಭದ್ರತಾ ವಿಭಾಗದ ಅಧಿಕಾರಿಗಳು ಮತ್ತು ಕ್ರೈಂ ವಿಭಾಗದ ಸಿಬ್ಬಂದಿಗಳು ಮಫ್ತಿಯಲ್ಲಿ ನ್ಯಾಯಾಲಯದ ಆವರಣದಲ್ಲಿ ಹಾಜರಿದ್ದರು.

ಕೇಂದ್ರ ಸಚಿವ ನಿತಿನ್ ಗಡ್ಕರಿ ಕೊಡಗಿನಲ್ಲಿ ವಿಶ್ರಾಂತಿ



ಮಡಿಕೇರಿ,ಜೂ.9– ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ವಿಶ್ರಾಂತಿಗಾಗಿ ಕುಟುಂಬ ಸಹಿತ ಕೊಡಗು ಜಿಲ್ಲೆಗೆ ಆಗಮಿಸಿದ್ದು, ಗುರುವಾರ ಮಧ್ಯಾಹ್ನ ಕುಶಾಲನಗರ–ಕೊಪ್ಪ ಗಡಿ ಭಾಗದಲ್ಲಿ ಬಿಜೆಪಿ ಕಾರ್ಯಕರ್ತರು ಅವರನ್ನು ಆತ್ಮೀಯವಾಗಿ ಬರ ಮಾಡಿಕೊಂಡರು.

ಝೆಡ್ ಪ್ಲಸ್ ಭದ್ರತೆಯ ಮೂಲಕ ಮಡಿಕೇರಿ ರಸ್ತೆಯಲ್ಲಿರುವ ಖಾಸಗಿ ರೆಸಾರ್ಟ್‌ಗೆ ಆಗಮಿಸಿದ ಸಚಿವ ನಿತಿನ್ ಗಡ್ಕರಿ ಅವರನ್ನು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲೀರ ಅಯ್ಯಪ್ಪ ಅವರುಗಳು ಸ್ವಾಗತಿಸಿದರು. ಬಳಿಕ ರೆಸಾರ್ಟ್‌ನಲ್ಲಿ ಸಚಿವರು ತಮ್ಮ ಕುಟುಂಬದೊಂದಿಗೆ ಭೋಜನ ಸವಿದರು.

ತದನಂತರ ರಸ್ತೆ ಮಾರ್ಗವಾಗಿ ಸಿದ್ದಾಪುರ ವ್ಯಾಪ್ತಿಯ ಖಾಸಗಿ ರೆಸಾರ್ಟ್‌ಗೆ ತೆರಳಿದರು. ಶುಕ್ರವಾರ ಸಂಜೆ ರಸ್ತೆ ಮಾರ್ಗವಾಗಿ ಮಡಿಕೇರಿ ಹೊರವಲಯದ ಪಂಚತಾರ ರೆಸಾರ್ಟ್‌ಗೆ ಆಗಮಿಸಲಿರುವ ಸಚಿವರು ಮತ್ತವರ ಕುಟುಂಬ 3 ದಿನಗಳ ಕಾಲ ಇಲ್ಲಿ ವಾಸ್ತವ್ಯ ಹೂಡಲಿದ್ದು, ಸೋಮವಾರ ಬೆಂಗಳೂರು ಮೂಲಕ ನಾಗ್‌ಪುರಕ್ಕೆ ತೆರಳಲಿದ್ದಾರೆ.

ಮರು ಮೌಲ್ಯಮಾಪನದಲ್ಲಿ 624 ಅಂಕ ಗಳಿಸಿದ ಸಿಂಚನಾ

ಸೋಮವಾರಪೇಟೆ, ಜೂ.9– ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ



622 ಅಂಕ ಪಡೆದಿದ್ದ ಇಲ್ಲಿನ ಜ್ಞಾನವಿಕಾಸ ಆಂಗ್ಲಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಪಿ.ಬಿ. ಸಿಂಚನ, ಮರು ಮೌಲ್ಯ ಮಾಪನದಲ್ಲಿ ಮತ್ತೆ ಎರಡು ಅಂಕಗಳನ್ನು ಪಡೆಯುವ ಮೂಲಕ 624 ಅಂಕ ಪಡೆದಿದ್ದಾರೆ. ಇಂಗ್ಲಿಷ್ ಭಾಷಾ ವಿಷಯದಲ್ಲಿ 98 ಅಂಕ ಪಡೆದಿದ್ದರು. ಮರುಮೌಲ್ಯ ಮಾಪನಕ್ಕೆ ಹಾಕಿದ ಸಂದರ್ಭ ಎರಡು ಅಂಕಗಳು ಹೆಚ್ಚಾಗಿ ದೊರಕಿದ್ದು, ಒಟ್ಟು 624 ಅಂಕ ಪಡೆದಿದ್ದು, ರಾಜ್ಯಕ್ಕೆ ದ್ವಿತೀಯ ಸ್ಥಾನಗಳಿಸಿದ್ದಾರೆ.

ಮಂಜಣ್ಣ (ಮಂಜು) ನಿಧನ



ನಾಪೋಕ್ಲು : ಸಮೀಪದ ಬೇತು ಗ್ರಾಮದ ನಿವಾಸಿ ಮಂಜು ಹೇರ್ ಡ್ರೆಸ್ ಮಾಲೀಕ ಮಂಜಣ್ಣ (ಮಂಜು 69) ಗುರುವಾರ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಮಗ ಶೃಂಗಾರ್ ಹೇರ್ ಡ್ರೆಸ್ ಮಾಲೀಕ ಸತೀಶ್, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜೂ.10 ರಂದು ನಾಪೋಕ್ಲು ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸ್ಟ್ಯಾನಿ ಡಿ ರೊಜಾರಿಯೋ



ಸೋಮವಾರಪೇಟೆ: ಸಮೀಪದ ಹಾನಗಲ್ಲು ಗ್ರಾಮದ ನಿವಾಸಿ ಸ್ಟ್ಯಾನಿ ಡಿ ರೊಜಾರಿಯೋ (92) ಗುರುವಾರ ಮುಂಜಾನೆ ನಿಧನರಾದರು. ಇಬ್ಬರು ಪುತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಗರೂರಿನ ಒಎಲ್ವಿ ಚರ್ಚ್‌ನ ರುದ್ರಭೂಮಿಯಲ್ಲಿ ನಡೆಯಿತು.

ನಂದ



ಸೋಮವಾರಪೇಟೆ, ಜೂ.9–ಇಲ್ಲಿಗೆ ಸಮೀಪದ ಐಗೂರು ಗ್ರಾಮದ ನಂದ(53) ಬುಧವಾರ ನಿಧನರಾದರು. ಮೃತರು ಪತ್ನಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸ್ವ ಗ್ರಾಮದಲ್ಲಿ ನಡೆಯಿತು.

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ




ಉಪೇಂದ್ರ ಹೊಸ ಚಿತ್ರ U ಗೆ ಚಾಲನೆ

ಉಪ್ಪಿ 2 ಚಿತ್ರದ ನಂತರ ಕಳೆದ 7 ವರ್ಷಗಳಿಂದ ಉಪೇಂದ್ರ ಯಾವುದೇ ಚಿತ್ರ ನಿರ್ದೇಶನ ಮಾಡಿರಲಿಲ್ಲ. ಅವರ ನಿರ್ದೇಶನದ ಚಿತ್ರಕ್ಕಾಗಿ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದರು. ಈ ಅದಕ್ಕೆ ಉತ್ತರ ಸಿಕ್ಕಿದೆ. ಉಪೇಂದ್ರ ನಿರ್ದೇಶಿಸಿ, ನಾಯಕರಾಗೂ ನಟಿಸುತ್ತಿರುವ ನೂತನ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ಬಂಡೆಮಹಾಕಾಳಿ ದೇವಸ್ಥಾನದಲ್ಲಿ ನಡೆಯಿತು. ಚಿತ್ರದ ಮೊದಲ ಸನ್ನಿವೇಶಕ್ಕೆ ಸುದೀಪ್ ಆರುಭ ಫಲಕ ತೋರಿದರೆ, ಶಿವರಾಜಕುಮಾರ್ ಕ್ಯಾಮೆರಾ ಚಾಲನೆ ಮಾಡಿದರು.

ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್ ಟೈನ್ ಮೆಂಟ್ ಲಾಂಛನದಲ್ಲಿ ಜಿ.ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ಮೂರು ನಾಮದ ಚಿಹ್ನೆ ರೀತಿಯ ಶೀರ್ಷಿಕೆಯಡಿ ಈ ಚಿತ್ರದ ಶೀರ್ಷಿಕೆಯಾಗಿದೆ ಇದನ್ನು ಕೆಲವರು ಮೂರು ನಾಮ ಅಂದುಕೊಂಡರೆ, ಮತ್ತೆ ಕೆಲವರು ಯು ಮತ್ತು ಐ ಅಂದು ಕೊಳ್ಳುತ್ತಾರೆ. ನಾನು ಮತ್ತು ನೀನು ಎಂಬ ಅರ್ಥ ಬರುವ ಹಾಗಿದೆ ಆ ಚಿಹ್ನೆ. ಒಟ್ಟಿನಲ್ಲಿ ತಮ್ಮ ಹಿಂದಿನ ಚಿತ್ರಗಳಂತೆ ಉಪೇಂದ್ರ ಅವರು ಈ ಚಿತ್ರದಲ್ಲೂ ಪ್ರೇಕ್ಷಕರ ತಲೆಗೆ ಹುಳ ಬಿಟ್ಟಿದ್ದಾರೆ. ವಿಭಿನ್ನ ಶೀರ್ಷಿಕೆಯಿದು. ನಿಮಗೆಲ್ಲಾ ಏನು ಅನಿಸುತ್ತದಯೋ, ಅದೇ ಶೀರ್ಷಿಕೆ ಆಗಿರುತ್ತದೆ. ನಾನು ಕಥೆ ರೆಡಿ ಮಾಡಿಕೊಂಡಿರುತ್ತೇನೆ. ಚಿತ್ರದ ಶೀರ್ಷಿಕೆ ಹಾಗೂ ಪೋಸ್ಟರ್ ಬಗ್ಗೆ ಸಾಕಷ್ಟು ಚರ್ಚೆಗಳಾಗುತ್ತಿದೆ. ಅದರ ಬಗ್ಗೆ ಒಬ್ಬೊಬ್ಬರ ಮನಸ್ಸಿನಲ್ಲಿ ಒಂದೊಂದು ಹೊಳೆಯುತ್ತಿದೆ. ನಿಮಗೆಲ್ಲಾ ಏನು ಅನಿಸುವುದೊ, ಅದೆಲ್ಲವೂ ಚಿತ್ರದಲ್ಲಿ ಇರುತ್ತದೆ. ಚಿತ್ರದ ಕಥೆ ಹೇಳಿದರೂ ಅರ್ಥವಾಗುವುದಿಲ್ಲ. ನೋಡಿದಾಗಷ್ಟೇ ಗೊತ್ತಾಗುತ್ತೆ ಎಂದ ಉಪೇಂದ್ರ, ಒಟ್ಟಿನಲ್ಲಿ ಉತ್ತಮ ಚಿತ್ರವೊಂದನ್ನು ನಿಮ್ಮ ಮುಂದೆ ಇಡುತ್ತೇನೆ. ನಿಮ್ಮ ನಿರೀಕ್ಷೆ ಸುಳ್ಳು ಮಾಡುವುದಿಲ್ಲವೆಂದು ತಿಳಿಸಿದರು.


ಕಲಾವಿದರು ಹಾಗೂ ತಾಂತ್ರಿಕ ವರ್ಗದ ಕುರಿತು ಮಾಹಿತಿಯನ್ನು ಮುಂದಿನ ದಿನಗಳಲ್ಲಿ ನೀಡುವುದಾಗಿ ಉಪೇಂದ್ರ ಹೇಳಿದರು. ಉಪೇಂದ್ರ ನಿರ್ದೇಶನ ಮಾಡಲು ಒಪ್ಪಿರುವುದೇ ಖುಷಿಯಾಗಿದೆ. ಇದು ನಮ್ಮ ನಿರ್ಮಾಣದ ಮೂರನೇ ಚಿತ್ರ ಲಹರಿ ಫಿಲಂಸ್ ನಾವು ಜಂಟಿಯಾಗಿ ಈ ಸಿನಿಮಾ ಮಾಡುತ್ತಿದ್ದೇವೆ ಎಂದರು ನಿರ್ಮಾಪಕ ಕೆ.ಪಿ.ಶ್ರೀಕಾಂತ್. ನಾನು ಹಾಗೂ ಉಪೇಂದ್ರ ಅವರು ಸಹಪಾಠಿಗಳು. ತುಂಬಾ ವರ್ಷಗಳಿಂದ ಪರಿಚಯ. ಅವರೊಂದಿಗೆ ಸಿನಿಮಾ ಮಾಡುವುದೇ ದೊಡ್ಡ ಅನುಭವ ಎಂದು ಲಹರಿ ವೇಲು ಹೇಳಿದರು.



ಡೊಳ್ಳು ಚಿತ್ರಕ್ಕೆ ಪ್ರಶಸ್ತಿಗಳ ಸುರಿಮಳೆ

ನಿರ್ದೇಶಕ ಪವನ್ ಒಡೆಯರ್, ತಮ್ಮದೇ ಆದ ಒಡೆಯರ್ ಮೂವೀಸ್ ಮೂಲಕ ನಿರ್ಮಿಸಿರುವ 'ಡೊಳ್ಳು' ಚಿತ್ರವು ಸಾಕಷ್ಟು ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಸಾಗರ ಪುರಾಣಿಕ್ ಈ ಚಿತ್ರದ ನಿರ್ದೇಶಕರು.

ಚಿತ್ರದ ಕುರಿತು ಮಾತನಾಡಿದ ಪವನ ಒಡೆಯರ್, ನಮ್ಮ ಸಂಸ್ಥೆಯ ಮೊದಲ ಸಿನಿಮಾ ಇದಾಗಿದ್ದು, ನಾನು ನನ್ನ ಪತ್ನಿ, ಸ್ನೇಹಿತರಾದ ಹರೀಶ್ ನಾರಾ, ಸಚಿನ್ ತಪಶೆಟ್ಟಿ, ನರಸಿಂಹ ಜೊತೆಗೂಡಿ ಚಿತ್ರ ನಿರ್ಮಾಣ ಮಾಡಿದ್ದೇವೆ. ಇಡೀ ತಂಡ ಸೇರಿ ಅದ್ಭುತ ಸಿನಿಮಾ ಮಾಡಿದೆ. ಸಿನಿಮಾದ ವಿಶೇಷ ಅಂದ್ರೆ ನಾಯಕನನ್ನು ಬಿಟ್ಟು ಇಡೀ ಚಿತ್ರದಲ್ಲಿ ನಿಜವಾದ ಡೊಳ್ಳು ಕಲಾವಿದರೇ ಅಭಿನಯಿಸಿದ್ದಾರೆ ಎಂದು ಹೇಳಿದರು. ಕಿರುಚಿತ್ರಗಳನ್ನು ನಿರ್ದೇಶನ ಮಾಡಿದವರಿಗೆ ಸಿನಿಮಾ ಮಾಡುವುದು ದೊಡ್ಡ ಸಾಹಸ. ಅದಕ್ಕೆ ಇಡೀ ತಂಡ ಸಪೋರ್ಟ್ ಮಾಡಿದೆ ಎಂದು ಸಾಗರ್ ಪುರಾಣಿಕ್ ತಮ್ಮ ಅನಿಸಿಕೆ ಹಂಚಿಕೊಂಡರು. ಡೊಳ್ಳು ಚಿತ್ರದಲ್ಲಿ ಕಿರುತೆರೆ ನಟ ಕಾರ್ತಿಕ್ ಮಹೇಶ್, ನಿಧಿ ಹೆಗ್ಡೆ, ನಾಯಕ-ನಾಯಕಿಯಾಗಿ ನಟಿಸಿದ್ದು, ಬಾಬು ಹಿರಣ್ಣಯ್ಯ, ಚಂದ್ರ, ಮಯೂರ್, ಶರಣ್, ಸುರೇಶ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಅನಂತ್ ಕಾಮತ್ ಅವರ ಸಂಗೀತ, ಅಭಿಲಾಷ್ ಕಲಾಥಿ ಅವರ ಕ್ಯಾಮೆರಾವಿರುವ ಈ ಸಿನಿಮಾ ಸದ್ಯದಲ್ಲಿಯೇ ಥಿಯೇಟರ್ ಅಂಗಳಕ್ಕೆ ಲಗ್ಗೆ ಇಡಲಿದೆ.



ತೆರೆಮೇಲೆ 777 CHARLIE






ರಾಜ್ಯಾದ್ಯಂತ ಬಿಡುಗಡೆಯಾಗಿರುವ 777 ಚಾರ್ಲಿ ಚಿತ್ರದ ಪ್ರೀಮಿಯರ್ ಷೋ ಈಗಾಗಲೇ ದೇಶಾದ್ಯಂತ ನಡೆದಿದ್ದು, ಎಲ್ಲಾ ಕಡೆ ಉತ್ತಮ ಪ್ರತಿಕ್ರಿಯೆ ಪಡೆದಿದೆ ಎಂದು ಈಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರದ ನಾಯಕ-ನಿರ್ಮಾಪಕ ರಕ್ಷಿತ್ ಶೆಟ್ಟಿ ಹೇಳಿದರು. ದೇಶಾದ್ಯಂತ ನಡೆದ ಪ್ರೀಮಿಯರ್ ಷೋಗೆ ಗುಡ್ ರೆಸ್ಪಾನ್ಸ್ ಬಂದಿದೆ ಒಂದು ಚಿತ್ರದ ಕಂಟೆಂಟ್ ಚೆನ್ನಾಗಿದ್ರೆ ಅದೇ ಚಿತ್ರಕ್ಕೆ ಬಿಗ್ಗೆಸ್ಟ್ ಪಬ್ಲಿಸಿಟಿಯಾಗುತ್ತದೆ. ಕೆಜಿಎಫ್ ಎನ್ನುವ ಚಿತ್ರ ಕನ್ನಡಕ್ಕೆ ದೊಡ್ಡಮಟ್ಟದ ಮಾರ್ಕೆಟ್ ಸೃಷ್ಟಿಸಿದೆ. ಹಾಗಾಗಿ ಹೊರ ರಾಜ್ಯಗಳಿಂದಲೇ 777 ಚಾರ್ಲಿ ಚಿತ್ರದ ಪ್ರೀಮಿಯರ್ ಷೋ ಶುರು ಮಾಡಿದೆವು ಎಂದು ಹೇಳಿದರು.

ನಂತರ ಕೆಆರ್‌ಜಿ ಫಿಲಂಸ್‌ನ ಕಾರ್ತೀಕ್ ಗೌಡ ಮಾತಾಡುತ್ತ ಬೆಂಗಳೂರಿನಲ್ಲಿ 150 ಸೇರಿದಂತೆ ರಾಜ್ಯಾದ್ಯಂತ 300ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇವೆ, ಅಲ್ಲದೆ ಇದೇ ಮೊದಲ ಬಾರಿಗೆ ದಾವಣಗೆರೆಯಂಥ ನಗರದಲ್ಲಿ ಸಹ ಚಿತ್ರದ ಪ್ರೀಮಿಯರ್ ನಡೆಯಲಿದೆ. ಈಗಾಗಲೇ ಬುಕ್ ಮೈಷೋದಲ್ಲಿ ಚಿತ್ರದ ಟಿಕೆಟ್ ಬುಕಿಂಗ್ ಆರಂಭವಾಗಿದೆ ಎಂದು ಹೇಳಿದರು. ಉಳಿದಂತೆ ಚಿತ್ರದ ನಾಯಕಿ ಸಂಗೀತ ಶೃಂಗೇರಿ ಅನಿಮಲ್ ವೆಲ್ ಫೇರ್ ಬೋರ್ಡ್ ಅಧಿಕಾರಿಣಿಯಾಗಿ ನಟಿಸಿದ್ದಾರೆ. ಲೋಕದ ಜಂಜಾಟದೊಂದಿಗೆ ಬದುಕು ಸಾಗಿಸುತ್ತಿರೋ ನಾಯಕನ ಬದುಕಿನಲ್ಲಿ ಚಾರ್ಲಿ ಎಂಬ ಶ್ವಾನವೊಂದು ಬಂದ ಮೇಲೆ ಆತನ ಜೀವನದಲ್ಲಿ ಏನೆಲ್ಲ ಬದಲಾವಣೆ ಆಗುತ್ತವೆ ಎನ್ನುವುದೇ ಸಿನಿಮಾದ ಕಥಾಹಂದರ. ಹಾಡುಗಳಲ್ಲಿ ಒಂದು ನಾಯಿ ಮತ್ತು ಮನುಷ್ಯನ ನಡುವಿನ ಭಾವನಾತ್ಮಕ ಸಂಬಂಧದ ಕಥಾನಕ ಇದ್ದು, ಕನ್ನಡದ ಬಹುನಿರೀಕ್ಷೆಯ ಚಿತ್ರಗಳಲ್ಲಿ ಇದೂ ಒಂದಾಗಿದೆ. ಈ ಚಿತ್ರದಲ್ಲಿ ರಕ್ಷಿತ್ ಶೆಟ್ಟಿ ಜೊತೆ ನಾಯಕಿಯಾಗಿ ಮಲೆನಾಡ ಸುಂದರಿ ಸಂಗೀತ ಶೃಂಗೇರಿ ನಟಿಸಿದ್ದು, ಉಳಿದಂತೆ ರಾಜ್ ಬಿ. ಶೆಟ್ಟಿ, ದಾನಿಶ್ ಶೇಠ್ ಮುಂತಾದವರು ನಟಿಸಿದ್ದಾರೆ. ಈ ಚಿತ್ರವನ್ನು ರಕ್ಷಿತ್ ಶೆಟ್ಟಿ ಮತ್ತು ಗುಪ್ತಾ ಸೇರಿ ನಿರ್ಮಿಸಿದ್ದಾರೆ.

ಸಿನಿಪದಬಂಧ-011

ಆಜ್ಹಾದ್ ಜಿ. ಆಚಾರ್ಯ 6361429085



ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1.	ಚಿನ್ನದ ಸೆರೆಯಲ್ಲಿ ಬಂಧಿಯಾದ ಡಾ. ರಾಜ್- ಆರತಿ	7
4.	ದ್ವಾರಕೀಶ್ ನಿರ್ದೇಶನದಲ್ಲಿ ಪ್ರೇಮಿಯಾದ ರವಿಚಂದ್ರನ್	3
6.	ಪುನೀತ್‌ಗೆ ಸ್ಟಾರ್ ತಂದುಕೊಟ್ಟ ಎನರ್ಜಿ	3
7.	ಶ್ರೀಮುರಳಿ-ಶ್ರೀಲೀಲಾ ರಾಟೆ ಹಿಡಿದ ಚಿತ್ರ	3
8.	ವಿಷ್ಣುವರ್ಧನ್-ಶ್ರುತಿ ಅಭಿನಯದ 2000ನೇ ಇಸ್ವಿ ಚಿತ್ರ	3
10.	ಬರಿದಾದರೂ ಹಂಸಾ ಮತ್ತು ಕಿಶೋರ್ ಜೀವತುಂಬಿ ನಟಿಸಿದ ಚಿತ್ರ	3
13.	ಭಾರೀ ಅಲ್ಲದಿದ್ದರೂ ಧ್ರುವ ಸರ್ಜಾ ಚಿತ್ರ ಹೆಚ್ಚೇ	3
16.	ಪ್ರಜ್ವಲ್ ದೇವರಾಜ್-ಸೋನಾ ಚೋಪ್ರಾ ಜೋಡಿಯ ಚಿತ್ರ	3
17.	ಶಿವಣ್ಣ-ಧನಂಜಯ(ಡಾಲಿ) ನಟನೆಯಲ್ಲಿ ಗುಟುರು ಹಾಕಿದ ಚಿತ್ರ	3
18.	ಕೃಷ್ಣನ ದರ್ಶನ ಪಡೆದ ಡಾ. ರಾಜ್ ಭಕ್ತಿಪ್ರಧಾನ ಚಿತ್ರ	7

ಮೇಲಿನಿಂದ ಕೆಳಕ್ಕೆ

1.	ಮುಕ್ತಗೊಂಡ ಟೈಗರ್ ಪ್ರಭಾಕರ್-ಭಾರತಿ ಬಂಧ	4
2.	ಡಾ. ರಾಜ್-ಉದಯಕುಮಾರ್-ರಾಜ್ ಶಂಕರ್ ಹತ್ತು ಅವತಾರದ ಚಿತ್ರ	5
3.	ವಿಷ್ಣುವರ್ಧನ್-ಭಾರತಿ ಜೋಡಿ ಅರಿತ ಇರುಳಿನ ಗುಟ್ಟು	5
4.	ಥ್ರಿಲ್ಲರ್ ಮಂಜು ನಿರ್ದೇಶನದಲ್ಲಿ ಉಪೇಂದ್ರ-ಆರತಿ ಛಾಬ್ರಿಯಾ ಚಿತ್ರ	3
5.	ಓ... ಪ್ರಿಯತಮಾ ಹಾಡಿನ ಸಿನಿಮಾದ ಪೂರ್ವಾರ್ಧ	4
9.	ಮಡಿಕೆ ಮಾಡುವ ಭಕ್ತಿಪ್ರಧಾನ ಚಿತ್ರ ಮೇಲೇರಿದೆ	5
11.	ಡಾ. ರಾಜ್-ಸರೋಜಾದೇವಿ ಅಭಿನಯದ ಪಾರ್ಥನ ಪುತ್ರನ ಚಿತ್ರ	5
12.	ಹುಟುಗಾಟಿಕೆಯ ಗಣೇಶ್-ರೇಖಾ ಚಿತ್ರ	4
14.	ವೀರಪ್ಪನ್ ಪಾತ್ರದಲ್ಲಿ ಕಿಶೋರ್ ನಟಿಸಿದ ಚಿತ್ರ	4
15.	- - - ಕೊಟ್ಟ ತಂಗಿ	3

ಸಿನಿ ಪದಬಂಧ 010ರ ಸರಿ ಉತ್ತರ

ಅ	ವ	ತಾ	ರ	ಪು	ರು	ಷ		ನ		ಸಂ
ಜ					ದ್ರ			ಮ್ಮೂ		ಸ್ಕಾ
ಗ	ಣೇ	ಶ್			ನಾ		ಸ	ರ	ದಾ	ರ
ಜಾಂ			ಸ	ಲ	ಗ			ಹ		
ತ			ತ್ಕಾ					ಮ್ಮೀ		
ರ	ಥಾ	ವ	ರ				ಆ	ರ	ಕ್ಷ	ಕ
		ರ					ರಂ			ರು
		ದ			ಅ	ಯ್	ಭ			ಳಿ
ಗೆ	ಜ್ಜೆ	ನಾ	ದ		ಭಿ			ಗ	ಗ	ನ
ಳೆ		ಯ			ಮಾ					ಕ
ಯ		ಕ		ನಾ	ನಿ	ನ್ನ	ಬಿ	ಡ	ಲಾ	ರೆ

ವಿಜೇತರು: ರಂಜಿತಾ ಎಂ. W/O ಅಶೋಕ್
ಚೌಡೇಶ್ವರಿ ಬೀದಿ, ವಾಸವಿ ಶಾಲೆ ಹಿಂಭಾಗ,
ಪೇಟೆ, ಹೊಳೆನರಸೀಪುರ, ಹಾಸನ ಜಿಲ್ಲೆ

ವಿಂಡೋಸೀಟ್‌ನಲ್ಲೊಂದು ಮರ್ಡರ್ ಮಿಸ್ಟ್ರಿ



'ವಿಂಡೋಸೀಟ್' ಎಂದ ಕೂಡಲೇ ನಮಗೆ ಬಸ್ ಅಥವಾ ಟ್ರೈನ್ ಜರ್ನಿ ನೆನಪಾಗುತ್ತದೆ. ಈಗ ಅದೇ ಟೈಟಲ್‌ನಡಿ ನಟಿ, ನಿರೂಪಕಿ ಶೀತಲ್ ಶೆಟ್ಟಿ ಚಿತ್ರವೊಂದನ್ನು ನಿರ್ದೇಶಿಸಿದ್ದಾರೆ. ಈ 'ವಿಂಡೋಸೀಟ್' ಚಿತ್ರದ ಟ್ರೈಲರ್ ಬಿಡುಗಡೆ ಕಲಾವಿದರ ಸಂಘದ ಆವರಣದಲ್ಲಿ ನೆರವೇರಿತು, ಈ ಸಂದರ್ಭದಲ್ಲಿ ಚಿತ್ರದ ನಿರ್ಮಾಪಕಿ ಶಾಲಿನಿ ಮಂಜುನಾಥ್, ಶೀತಲ್ ಶೆಟ್ಟಿ, ನಾಯಕ ನಿರೂಪ್ ಭಂಡಾರಿ, ನಾಯಕಿ ಅಮೃತಾ ಅಯ್ಯಂಗಾರ್, ನಟ ಸೂರಜ್ ಹಾಗೂ ಚಿತ್ರತಂಡ ಹಾಜರಿತ್ತು. ಈ ಹಿಂದೆ ಕಿರುಚಿತ್ರ ನಿರ್ದೇಶಿಸಿದ್ದ ಶೀತಲ್‌ಶೆಟ್ಟಿ ಇದೇ ಮೊದಲ ಬಾರಿಗೆ ನಿರ್ದೇಶಿಸಿರುವ ಚಿತ್ರ ಇದಾಗಿದ್ದು, ಕಥೆ ಹಾಗೂ ಚಿತ್ರಕಥೆಯನ್ನು ಅವರೇ ಬರೆದಿದ್ದಾರೆ. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಬಿಗ್‌ಬಾಸ್ ಮನೆಯಿಂದ ಹೊರಬಂದಮೇಲೆ ಈ ಕಥೆ ರೆಡಿ ಮಾಡಿದೆ. ಸ್ನೇಹಿತರೆಲ್ಲ ನೀವೇ ಡೈರೆಕ್ಟ್ ಮಾಡಿ ಎಂಬ ಸಲಹೆ ನೀಡಿದರು. ನಂತರ ನಿರ್ಮಾಪಕರ ಹುಡುಕಾಟ ನಡೆಸುತ್ತಿದ್ದೆವು. ಯಾರೂ ಸಿಗಲಿಲ್ಲ ಒಮ್ಮೆ ಸುದೀಪ್‌ರನ್ನು ಕಂಡು ಯಾರಾದರೂ ನಿರ್ಮಾಪಕರು ಇದ್ರೆ ಹೇಳಿ ಎಂದಾಗ ಅವರು ಜಾಕ್ ಮಂಜು ಅವರನ್ನು ಸಜೆಸ್ಟ್ ಮಾಡಿದರು. ಮಂಜಣ್ಣ ಅವರ ಬಳಿ ಈ ಕಥೆ ಹೇಳಿದೆ, ಒಂದಷ್ಟು ಕರೆಕ್ಷನ್ ಹೇಳಿ ಬಂಡವಾಳ ಹಾಕಲು ಸಿದ್ಧರಾದರು. ಇನ್ನು ನಾಯಕನ ಪಾತ್ರಕ್ಕೆ ನಿರೂಪ್ ಅವರು ಒಪ್ಪುತ್ತಾರೋ ಇಲ್ವೋ ಎಂಬ ಅನುಮಾನವಿತ್ತು. ಆದರೆ ಅವರು ಕಥೆ ಕೇಳಿದ ಕೂಡಲೇ ಹೊಸಬಳೆಂದು ಯೋಚಿಸದೆ ಗ್ರೀನ್ ಸಿಗ್ನಲ್ ಕೊಟ್ಟರು. ಹೀಗೆ ನಿರ್ಮಾಣವಾದ ಈ ಚಿತ್ರ ಜುಲೈ ಒಂದರಂದು ಬಿಡುಗಡೆಯಾಗುತ್ತಿದೆ ಎಂದರು.

ನಂತರ ನಿರ್ಮಾಪಕಿ ಶಾಲಿನಿ ಮಂಜುನಾಥ್ ಮಾತನಾಡಿ, ನಮ್ಮ ಸಂಸ್ಥೆಯಿಂದ ಯಾವಾಗಲೂ ಹೊಸಬರಿಗೇ ಅವಕಾಶ ನೀಡುತ್ತ ಬಂದಿದ್ದೇವೆ. ಅದು ಲೈಫು ಇಷ್ಟೇನೇ, ಡೆಡ್ಲಿಸೋಮನೇ ಇರಬಹುದು. ಹೊಸಬರು ಬಂದಾಗ ಹೊಸ ಐಡಿಯಾ ಹೊರಬರುತ್ತದೆ, ಹೊಸತನ ಕೊಟ್ಟಾಗ ಜನನೂ ಮನೆಯಿಂದ ಹೊರಬರುತ್ತಾರೆ. ಈಗ ಒಬ್ಬ ಮಹಿಳೆಗೆ ಅವಕಾಶ ಕೊಟ್ಟಿದ್ದೇವೆ. ಶೀತಲ್ ಶೆಟ್ಟಿ ಅದ್ಭುತವಾಗಿ ಈ ಚಿತ್ರ ಮಾಡಿಕೊಟ್ಟಿದ್ದಾರೆ, ಫಸ್ಟ್ ಟೈಮ್ ನಿರ್ದೇಶನ ಮಾಡಿದ್ದಾರೆ ಅನಿಸುವುದೇ ಇಲ್ಲ. ವಿಂಡೋಸೀಟ್ ಎಂದ ಕೂಡಲೇ ಇದೊಂದು ಬರೀ ಜರ್ನಿ ಕಥೆ ಅಂದುಕೊಳ್ಳಬೇಕಿಲ್ಲ. ಸಸ್ಪೆನ್ಸ್, ಥ್ರಿಲ್ಲರ್ ಜೊತೆಗೆ ಮಿಸ್ಟ್ರಿ ಕೂಡ ಇದರಲ್ಲಿದೆ. ಬಿಡುಗಡೆಯಾಗಿರುವ ಟ್ರೈಲರ್ ಸಿನಿಮಾದ ಬಗ್ಗೆ ಹೆಚ್ಚಿನ ಕುತೂಹಲ ಮೂಡಿಸುತ್ತದೆ.

ನಟ ನಿರೂಪ್ ಭಂಡಾರಿ ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದು, ತಾಳಗುಪ್ಪದ ರಘು ಎನ್ನುವ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಘು ಒಬ್ಬ ಹಾಡುಗಾರ. ಆತನಿಗೆ ವಿಂಡೋಸೀಟೆಂದರೆ ಬಲು ಪ್ರೀತಿ, ಈತನ ವಿಂಡೋಸೀಟಿನ ವ್ಯಾಮೋಹವೇ ಈತನನ್ನು ದೊಡ್ಡದೊಂದು ಸಂಕಷ್ಟಕ್ಕೆ ತಳ್ಳುತ್ತದೆ. ಇದರ ಸುಳಿಯಿಂದ ರಘು ಪಾರಾಗುತ್ತಾನಾ? ಎಂಬುದು ಸಿನಿಮಾದ ಮುಖ್ಯಕಥೆ.

ಲೈಂಗಿಕ ಕಿರುಕುಳ, ಕೊಲೆ ಬೆದರಿಕೆ: ಕಾನ್ವೆಂಟ್ ಸಹೋದ್ಯೋಗಿಗಳ ಮಹಿಳಾ ಸಿಬ್ಬಂದಿ ವಿರುದ್ಧ ದೂರು

ಕಾನ್ವೆಂಟ್‌ನ ಪ್ರಾವಿನ್ಷಿಯಲ್ ಸುಪೀರಿಯರ್ ಮಾರ್ಗರೇಟ್ ಪ್ರತಿದೂರು

ಮೈಸೂರು, ಜೂ.9– ಮೈಸೂರಿನ ಕಾನ್ವೆಂಟ್‌ವೊಂದಕ್ಕೆ ಸೇರಿದವರು ತನಗೆ ಬುದ್ಧಿ ಕೆಟ್ಟು ಹೋಗಲು ಇಂಜೆಕ್ಷನ್ ಕೊಟ್ಟು ಲೈಂಗಿಕ ಕಿರುಕುಳ ನೀಡಿದ್ದಲ್ಲದೆ, ಕೊಲೆ ಬೆದರಿಕೆ ಹಾಕಿದ್ದಾರೆಂದು ಕಾನ್ವೆಂಟ್‌ನ ಮಹಿಳಾ ಸಿಬ್ಬಂದಿಯೊಬ್ಬರು ಅಶೋಕಪುರಂ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಮರ್ಸಿ ಕಾನ್ವೆಂಟ್‌ನ ಸಿಬ್ಬಂದಿ ಸಿಸ್ಟರ್ ಎಲಿಸೀನಾ ಠಾಣೆಗೆ ದೂರು ನೀಡಿದವರಾಗಿದ್ದು, ಮೇ 5ರಂದು ಕಾನ್ವೆಂಟ್‌ನ ಸಿಸ್ಟರ್ ಮಾರ್ಗರೇಟ್ ಅವರ ಜೊತೆ ಮಾತುಕತೆಯಾಗಿತ್ತು. ಅಂದು ಸಂಜೆ ತನ್ನ ಸಂಬಂಧಿ ಬಿಂದು ಎಂಬಾಕೆ ಡ್ರೈವರ್‌ಗಳ ಜೊತೆ ಸೇರಿ ನನ್ನ ಮೇಲೆ ಹಲ್ಲೆ ನಡೆಸಿ, ಕಟ್ಟಿಹಾಕಿ ಬುದ್ಧಿಕೆಟ್ಟು ಹೋಗಲು ಇಂಜೆಕ್ಷನ್ ಕೊಟ್ಟು, ಶಕ್ತಿಹೀನಳನ್ನಾಗಿ ಮಾಡಿ ಸೆಂಟ್ ಮೇರಿಸ್ ಮನೋರೋಗ ಚಿಕಿತ್ಸಾ ಕೇಂದ್ರಕ್ಕೆ ಕಳುಹಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಅಲ್ಲಿ ಇಬ್ಬರು ಡ್ರೈವರ್‌ಗಳು ತನಗೆ ಲೈಂಗಿಕ ಕಿರುಕುಳ ನೀಡಿದ್ದು, ಶಕ್ತಿಹೀನಳಾಗಿದ್ದ ನನ್ನಿಂದ ಅದನ್ನು ತಡೆಯಲು ಸಾಧ್ಯವಾಗಲಿಲ್ಲ. ತನಗೆ ಕೌನ್ಸಿಲಿಂಗ್ ಮಾಡಿದ ಸಿಸ್ಟರ್ ಆನ್‌ಮೇರಿ ಅವರಿಗೆ ಈ ವಿಚಾರ ತಿಳಿಸಿದಾಗ ಅವರು 'ನಿನ್ನನ್ನು ಮೆಂಟಲ್ ಮಾಡಿಬಿಡುತ್ತೇವೆ' ಎಂದು ಬೆದರಿಕೆ ಹಾಕಿದ್ದಾರೆ. ಮರುದಿನ ಮತ್ತೊಬ್ಬ ಸಿಸ್ಟರ್ ದೀಪ ಅವರಿಗೆ ವಿಚಾರ ತಿಳಿಸಿದಾಗ ಅವರು, 'ನಿನಗೆ ಹೀಗೆಯೇ ಆಗುತ್ತದೆ. ಇದನ್ನು ಯಾರಿಗಾದರೂ ಹೇಳಿದರೆ ಹೊರಲೋಕ ಕಾಣಲಾಗುವುದಿಲ್ಲ' ಎಂದು ಬೆದರಿಕೆ ಹಾಕಿದರು ಎಂದು ಸಿಸ್ಟರ್ ಎಲಿಸೀನಾ ಅವರು ಜೂ.4ರಂದು ನೀಡಿದ ದೂರನ್ನು ಪರಿಶೀಲಿಸಿದ ನಂತರ ಸಂಜ್ಞೆಯ ಅಂಶಗಳು ಕಂಡುಬಂದ ಹಿನ್ನೆಲೆಯಲ್ಲಿ ಅಶೋಕಪುರಂ ಠಾಣೆ ಪೊಲೀಸರು ಕಾನ್ವೆಂಟ್‌ನ ಬಿಂದು, ಇಬ್ಬರು ಚಾಲಕರು, ಸಿಸ್ಟರ್ ಅನ್‌ಮೇರಿ ಮತ್ತು ಸಿಸ್ಟರ್ ದೀಪ ವಿರುದ್ಧ ಭಾರತೀಯ ದಂಡ ಸಂಹಿತೆ 354(ಎ), 392, 323, 504, 506, 34ರಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರತಿದೂರು: ಸಿಸ್ಟರ್ ಎಲಿಸೀನಾ ದೂರಿಗೆ ಕಾನ್ವೆಂಟ್‌ನ ಪ್ರಾವಿನ್ಷಿಯಲ್ ಸುಪೀರಿಯರ್ ಸಿ. ಮಾರ್ಗರೇಟ್ ಪ್ರತಿದೂರು ದಾಖಲಿಸಿದ್ದಾರೆ. ತಮ್ಮ ಸಂಸ್ಥೆಯಲ್ಲಿ ಹಲವು ವರ್ಷಗಳಿಂದ ಸದಸ್ಯರಾಗಿದ್ದ ಸಿಸ್ಟರ್ ಎಲಿಸೀನಾ ಕಳೆದ ಮಾರ್ಚ್ ತಿಂಗಳವರೆಗೂ ಗೋಣಿಕೊಪ್ಪಲು ಕಿವುಡು ಮತ್ತು ಮೂಗ ಮಕ್ಕಳ ಶಾಲೆಯಲ್ಲಿ ಮುಖ್ಯ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಸುಮಾರು ಒಂದೂವರೆ ವರ್ಷದಿಂದ ಅವರು ಮಾನಸಿಕವಾಗಿ ದುರ್ಬಲರಾದಂತೆ ಕಂಡುಬಂದ ಕಾರಣ ಕೌನ್ಸಿಲಿಂಗ್‌ಗಾಗಿ ಅವರನ್ನು ಮೇ 31ರಂದು ಮಾನಂದವಾಡಿ ರಸ್ತೆಯಲ್ಲಿರುವ ಸೆಂಟ್ ಮೇರಿಸ್ ಆಸ್ಪತ್ರೆಯಲ್ಲಿ ದಾಖಲಿಸಿದ್ದೆವು. ಅವರ ಮೊಬೈಲ್‌ಗೆ 2 ನಂಬರ್‌ಗಳಿಂದ ಯಾವಾಗಲೂ ಕರೆ ಬರುತ್ತಿದ್ದು, ಕರೆ ಬಂದಾಗ ಅವರು ಏಕಾಂತಕ್ಕೆ ಹೋಗುತ್ತಿದ್ದರು. ಜೂ.1ರಂದು ಸಂಜೆ ಎಲಿಸೀನಾ ತಂದೆ ಜೋಸ್ ಮತ್ತು ಸಹೋದರ ಮೆಲ್ವಿನ್ ಥಾಮಸ್ ನಮ್ಮ ಸಂಸ್ಥೆಗೆ ಬಂದು ಎಲಿಸೀನಾ ಅವರನ್ನು ಕರೆದೊಯ್ಯುವುದಾಗಿ ಕೇಳಿದ್ದರು. ನಂತರ ಅಶೋಕಪುರಂ ಠಾಣೆಯವರು ಮೌಖಿಕವಾಗಿ ದೂರನ್ನು ನೀಡಿದ್ದು, ನಾವು ಠಾಣೆಗೆ ಹೋಗಿ ವಿಚಾರವನ್ನು ಮನವರಿಕೆ ಮಾಡಿದ್ದೆವು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮರುದಿನ ಎಲಿಸೀನಾ ಮನೆಯವರು ಆಸ್ಪತ್ರೆಗೆ ಹೋಗಿ ಅವರನ್ನು ಡಿಸ್ಚಾರ್ಜ್ ಮಾಡಬೇಕೆಂದು ಕೇಳಿದ್ದು, ಚಿಕಿತ್ಸೆಯಲ್ಲಿರುವ ಅವರನ್ನು ಡಿಸ್ಚಾರ್ಜ್ ಮಾಡಲು ಸಾಧ್ಯವಿಲ್ಲ ಎಂದಾಗ ಗಲಾಟೆ ಮಾಡಿದ್ದಾರೆ. ಎಲಿಸೀನಾ ನಮ್ಮ ಸಂಸ್ಥೆಯಲ್ಲಿದ್ದಾಗ ಸಿಸ್ಟರ್‌ಗಳನ್ನು ಅವಾಚ್ಯವಾಗಿ ಬೈಯ್ಯುವುದು, ಕೊಲೆ ಬೆದರಿಕೆ ಹಾಕುವುದು, ಬುದ್ಧಿವಾದ ಹೇಳಿದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸುತ್ತಿದ್ದರು. ನಂತರ ಎಲಿಸೀನಾ ಅವರನ್ನು ತಂದೆ ಮತ್ತು ಸಹೋದರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಕೊಂಡು ಹೋಗಿದ್ದರು. ಜೂ.4ರಂದು ಮಧ್ಯಾಹ್ನ ನಮ್ಮ ಸಂಸ್ಥೆಗೆ ಬಂದ ಎಲಿಸೀನಾ, ಅವರ ಕೆಲವು ವಸ್ತುಗಳನ್ನು ತೆಗೆದುಕೊಂಡು ಹೋಗುವುದಾಗಿ ತಿಳಿಸಿದ್ದು, ಯಾವ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತೀರೋ ಅದನ್ನು ಬರೆದುಕೊಡುವಂತೆ ಹೇಳಿದಾಗ ಅವರು ನನ್ನನ್ನು ಹಾಗೂ ಸಂಸ್ಥೆಯನ್ನು ಬೈಯ್ದು ನಿಮಗೆ ಒಂದು ಗತಿ ಕಾಣಿಸದೇ ಬಿಡುವುದಿಲ್ಲ. ನಿಮಗೆ ಕೆಟ್ಟ ಹೆಸರು ಬರಲೆಂದು ಸೆಲ್ಫಿ ವೀಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದೇನೆ ಎಂದು ಹೆದರಿಸಿದರು. ಅಲ್ಲದೆ, ನಮ್ಮ ಸಂಸ್ಥೆ ಬಳಿ ಚಾನೆಲ್‌ನವರನ್ನು ಕರೆದುಕೊಂಡು ಬಂದು ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಹಾಗೂ ನನಗೆ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಮಾರ್ಗರೇಟ್ ನೀಡಿದ ದೂರಿನನ್ವಯ ಅಶೋಕಪುರಂ ಪೊಲೀಸರು ಐಪಿಸಿ 301, 504, 506, ರೆಡ್‌ವಿತ್ 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೂರನೇ ಪುಟದಿಂದ

'ಜಾತ್ಯತೀತ' ಜಂಗೀಕುಸ್ತಿ

ತಮ್ಮ ಮತಗಳು ಎಲ್ಲಿಯೂ ದೋಷಪೂರಿತವಾಗಬಾರದೆಂದು ಬಿಜೆಪಿ ಶಾಸಕರಿಗೆ ಕಳೆದ 2 ದಿನಗಳಿಂದ ಆ ಪಕ್ಷದ ನಾಯಕರು ಪಾಠ ಹೇಳಿದ್ದಾರೆ. ಇಂದೂ ಕೂಡಾ ಯಾವ ರೀತಿ ಮತ ಚಲಾವಣೆ ಮಾಡಬೇಕು ಎಂದು ಹಿರಿಯ ನಾಯಕರು ಶಾಸಕರಿಗೆ ಮಾರ್ಗದರ್ಶನ ಮಾಡಿದರು. ಯಾರೂ ಯಾರಿಗೆ ಮತ ಹಾಕಬೇಕು ಎಂಬುದನ್ನು ಬಿಜೆಪಿ ಗೌಪ್ಯವಾಗಿಟ್ಟಿದ್ದು, ಮತದಾನಕ್ಕೂ ಮುನ್ನ ತಮ್ಮ ಪಕ್ಷದ ಶಾಸಕರಿಗೆ ಚೀಟಿ ನೀಡಲಿದೆ.

ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಜೆಡಿಎಸ್ ನಾಯಕರು ಕಾಂಗ್ರೆಸ್ ಹೈಕಮಾಂಡ್ ಮೊರೆ ಹೋಗಿದ್ದರೆ, ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲು ಬೆಂಬಲ ನೀಡುವಂತೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಜೆಡಿಎಸ್ ಶಾಸಕರ ಮೊರೆ ಹೋಗಿದ್ದಾರೆ. ಆದರೆ ಇದರಿಂದ ಯಾವುದೇ ಪ್ರಯೋಜನ ಕಂಡು ಬಂದಿಲ್ಲ. ಕೋಮುವಾದಿ ಬಿಜೆಪಿಯನ್ನು ಸೋಲಿಸಲು ತಮ್ಮ ಅಭ್ಯರ್ಥಿ ಕುಪೇಂದ್ರರೆಡ್ಡಿ ಅವರನ್ನು ಬೆಂಬಲಿಸಬೇಕು ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ವಹಿಸಿಕೊಂಡಿರುವ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಕುಮಾರಸ್ವಾಮಿ ಇಂದು ಮನವಿ ಮಾಡಿಕೊಂಡಿದ್ದಾರೆ. ಮೂವತ್ತೆರಡು ಮತಗಳನ್ನು ಹೊಂದಿರುವ ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಅವರು ಸಾಮಾಜಿಕ ಸೇವೆ ಮಾಡುತ್ತಿದ್ದಾರೆ, ಉದ್ಯಮಿಯಾಗಿದ್ದಾರೆ. ಅಪಾರ ಅನುಭವ ಹೊಂದಿರುವ ಅವರಿಗೆ ಬೆಂಬಲ ನೀಡುವ ಅನಿವಾರ್ಯತೆಯೇನು ಎಂಬುದನ್ನು ರಣದೀಪ್ ಸಿಂಗ್ ಸುರ್ಜೇವಾಲಾ ಅರ್ಥ ಮಾಡಿಕೊಳ್ಳುತ್ತಾರೆ ಎಂದು ಭಾವಿಸಿರುವುದಾಗಿ ಕುಮಾರಸ್ವಾಮಿ ಟ್ವೀಟ್‌ನಲ್ಲಿ ಹೇಳಿದ್ದಾರೆ. ಕೋಮುವಾದ ಮತ್ತು ಜಾತ್ಯಾತೀತತೆಯ ನಡುವೆ ಸಂಘರ್ಷ ನಡೆಯುತ್ತಿದ್ದು, ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಮುಸ್ಲಿಂ ಸಮುದಾಯದ ಮನ್ಸೂರ್ ಅಲಿ ಖಾನ್ ಅವರನ್ನು 2ನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ಹೀಗಾಗಿ ಅವರ ಗೆಲುವಿಗೆ ಬೇಕಾದ ಬೆಂಬಲ ನೀಡಲು ಸಿದ್ಧರಾಮಯ್ಯ ಅವರು ಜೆಡಿಎಸ್ ಶಾಸಕರಿಗೆ ಪತ್ರಮುಖೇನ ಮನವಿ ಮಾಡಿದ್ದಾರೆ. ಈ ಬಾರಿಯ ಚುನಾವಣೆಯನ್ನು ಇತಿಹಾಸ ನೆನಪಿನಲ್ಲಿಟ್ಟಿರುತ್ತದೆ ಎಂದು ಕುಮಾರಸ್ವಾಮಿ ಅವರು ಹೇಳಿದ್ದರೆ, ಕೋಮುವಾದದಿಂದ ದೇಶ ಎದುರಿಸುತ್ತಿರುವ ಆತಂಕಕ್ಕೆ ಪ್ರತಿಯಾಗಿ ಉತ್ತರ ನೀಡಲು ಮುಂದಾಗಿ ಎಂದು ಸಿದ್ಧರಾಮಯ್ಯ ಜೆಡಿಎಸ್ ಶಾಸಕರಿಗೆ ಮನವಿ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷ ಯಾವತ್ತೂ ಜಾತ್ಯತೀತ ನೀತಿಗೆ ಬದ್ಧವೆಂಬುದು ಇತಿಹಾಸ.ಈ ಹಿಂದೆ ದೇವೇಗೌಡರನ್ನು ದೇಶದ ಪ್ರಧಾನಿ ಮಾಡಿದ್ದು ಕಾಂಗ್ರೆಸ್ ಪಕ್ಷ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ 37 ಶಾಸಕರನ್ನು ಹೊಂದಿದ್ದರೂ ಎಂಭತ್ತರಷ್ಟು ಶಾಸಕ ಬಲವಿದ್ದ ಕಾಂಗ್ರೆಸ್ ಪಕ್ಷವೇ ಮುಂದಾಗಿ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿತು. ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಸ್ವಯಂಬಲವಿಲ್ಲದೆ ಇದ್ದರೂ ಕಾಂಗ್ರೆಸ್ ಪಕ್ಷ ಬೆಂಬಲ ನೀಡಿ ದೇವೇಗೌಡರು ರಾಜ್ಯಸಭೆ ಪ್ರವೇಶಿಸಲು ನೆರವು ನೀಡಿತು.ಈ ಹಿನ್ನೆಲೆಯಲ್ಲಿ ಜೆಡಿಎಸ್ ಪಕ್ಷ ಕೂಡಾ ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರನ್ನು ಬೆಂಬಲಿಸಬೇಕು ಎಂದು ಸಿದ್ದರಾಮಯ್ಯ ಮನವಿ ಮಾಡಿಕೊಂಡಿದ್ದಾರೆ. ನಾವು ಜಾತ್ಯಾತೀತ ಶಕ್ತಿಗಳ ಗೆಲುವಿ ಗಾಗಿ ಕಾಂಗ್ರೆಸ್ ಪಕ್ಷದ ವತಿಯಿಂದ 2ನೇ ಅಭ್ಯರ್ಥಿಯಾಗಿ ಮನ್ಸೂರ್ ಅಲಿ ಖಾನ್ ಅವರನ್ನು ಕಣಕ್ಕಿಳಿಸಿದೆವು ಮತ್ತು ಜೆಡಿಎಸ್ ಪಕ್ಷ ಕೂಡಾ ಅವರ ಗೆಲುವಿಗೆ ಸಹಕಾರ ನೀಡುತ್ತದೆ ಎಂದಿದ್ದಾರೆ. ಹೀಗೆ ಪರಸ್ಪರರ ಗೆಲುವಿಗಾಗಿ ಎರಡೂ ಪಕ್ಷಗಳು ಪರಸ್ಪರರ ಮೇಲೆ ಒತ್ತಡ ಹೇರುತ್ತಿದ್ದಾರೆಯೇ ಹೊರತು ಯಾವುದೇ ಪ್ರಯೋಜನವಾಗಿಲ್ಲ. ನಾಳೆ ರಾಜ್ಯಸಭಾ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಗಳು ಇಂದು ಸಂಜೆ ನಡೆದಿದ್ದು, ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್, ಅರಸೀಕೆರೆ ಶಾಸಕ ಶಿವಲಿಂಗೇಗೌಡ, ಕೋಲಾರ ಶಾಸಕ ಶ್ರೀನಿವಾಸಗೌಡ ಗೈರಾಗಿದ್ದು, ಈ ನಾಲ್ವರೂ ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸಿದರೆ, ಮೊದಲ ಹಂತದಲ್ಲೇ ಜೆಡಿಎಸ್ ಅಭ್ಯರ್ಥಿ ಎಲಿಮಿನೇಟ್ ಆಗಲಿದ್ದು, ಎರಡನೇ ಪ್ರಾಶಸ್ತ್ಯದ ಮತಕ್ಕಾಗಿ ಬಿಜೆಪಿಯ ಲೆಹರ್ ಸಿಂಗ್ ಮತ್ತು ಕಾಂಗ್ರೆಸ್‌ನ ಮನ್ಸೂರ್ ಅಲಿ ಖಾನ್ ನಡುವೆ ಹಣಾಹಣಿ ನಡೆಯಲಿದೆ.

> ಬಿಜೆಪಿಯಿಂದ ನಿರ್ಮಲಾ ಸೀತಾರಾಮನ್, ಜಗ್ಗೇಶ್, ಲೆಹರ್ ಸಿಂಗ್, ಕಾಂಗ್ರೆಸ್‌ನಿಂದ ಜಯರಾಂ ರಮೇಶ್, ಮನ್ಸೂರ್ ಅಲಿ ಖಾನ್ ಹಾಗೂ ಜೆಡಿಎಸ್‌ನಿಂದ ಕುಪ್ಪೇಂದ್ರ ರೆಡ್ಡಿ ಚುನಾವಣಾ ಕಣದಲ್ಲಿದ್ದಾರೆ.

ಮಾರಣಾಂತಿಕ ಹಲ್ಲೆ

ಹಾಗೂ ಸಾರ್ವಜನಿಕರು ಯುವಕನ ಹಿಡಿದು, ಥಳಿಸಿ, ಆತನನ್ನು ಮಂಡ್ಯ ಪೂರ್ವ ಠಾಣೆ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಪೊಲೀಸರು ಯುವಕನ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಿದ್ದಾರೆ. ತಾಲೂಕಿನ ಗ್ರಾಮವೊಂದರ ಪ್ಯಾರಾ ಮೆಡಿಕಲ್ ವಿದ್ಯಾರ್ಥಿನಿಯ ಹಿಂದೆ ಬಿದ್ದಿದ್ದ ಆಕೆಯ ಸಂಬಂಧಿ ಸಂಪತ್, ತನ್ನನ್ನು ಪ್ರೀತಿಸುವಂತೆ ದುಂಬಾಲು ಬಿದ್ದಿದ್ದ. ಈತ ಸರಿಯಾಗಿ ವಿದ್ಯಾಭ್ಯಾಸವನ್ನೂ ಮಾಡದೇ, ಯಾವುದೇ ಕೆಲಸಕ್ಕೂ ಹೋಗದೇ ಇದ್ದುದರಿಂದ ವಿದ್ಯಾರ್ಥಿನಿ ಆತನನ್ನು ಪ್ರೀತಿಸಲು ನಿರಾಕರಿಸಿದ್ದಳು. ಆಕೆಯನ್ನು ಮದುವೆ ಮಾಡಿಕೊಡುವಂತೆ ಕೇಳಿದಾಗ ಮನೆಯವರೂ ಕೂಡ ನಿರಾಕರಿಸಿದ್ದರು ಎಂದು ಹೇಳಲಾಗಿದೆ.

ಕಳೆದ ಎರಡು ವರ್ಷದಿಂದ ಯುವತಿ ಹಿಂದೆ ಬಿದ್ದಿದ್ದ ಈತ, ಇತ್ತೀಚೆಗೆ ಗ್ರಾಮದಲ್ಲಿ ಹಾಗೂ ಕಾಲೇಜು ಬಳಿ ಆಕೆಯನ್ನು ಹಿಂಬಾಲಿಸಿ ಪೀಡಿಸಲಾರಂಭಿಸಿದಾಗ ಯುವತಿಯ ಕುಟುಂಬದವರು ಗ್ರಾಮದಲ್ಲಿ ಪಂಚಾಯ್ತಿ ಸೇರಿಸಿ ಆಕೆಯ ತಂಟೆಗೆ ಹೋಗದಂತೆ ಎಚ್ಚರಿಕೆ ನೀಡಿದ್ದಾರೆ. ಆದರೂ ಸುಮ್ಮನಿರದ ಆತ, ಯುವತಿಯ ಸ್ನೇಹಿತೆಯರನ್ನು ಸಂಪರ್ಕಿಸಿ ತನ್ನನ್ನು ಪ್ರೀತಿಸುವಂತೆ ಯುವತಿಗೆ ಹೇಳಬೇಕೆಂದು ಒತ್ತಡ ಹೇರುತ್ತಿದ್ದ ಎನ್ನಲಾಗಿದೆ. ಎರಡು ದಿನದ ಹಿಂದೆ ವಿದ್ಯಾರ್ಥಿನಿ ಹುಟ್ಟುಹಬ್ಬವನ್ನು ತನ್ನ ಜೊತೆಯೇ ಆಚರಿಸಿಕೊಳ್ಳಬೇಕೆಂದು ಪೀಡಿಸಿದ್ದನಂತೆ.

ಚಾಮುಂಡಿಬೆಟ್ಟಕ್ಕೆ ಪ್ರಧಾನಿ ಮೋದಿ ಭೇಟಿ ಸಾಧ್ಯತೆ

- ಬೆಟ್ಟದಲ್ಲಿ ಭರದಿಂದ ಸಾಗಿದೆ ಸ್ವಚ್ಛತಾ ಅಭಿಯಾನ
- ಬೆಟ್ಟದ ಅಕ್ಕಪಕ್ಕ ರಸ್ತೆಗಳಿಗೆ ಬರುತ್ತಿದೆ ಹೊಸಕಳೆ
- ಮುಖ್ಯರಸ್ತೆಯ ಬದಿಗಳಲ್ಲಿರುವ ಗಿಡ-ಗಂಟಿಗಳ ತೆರವು
- ಪ್ರಧಾನಿ ಭೇಟಿ ಖಚಿತವಾದರೆ 2 ದಿನ ಬೆಟ್ಟಕ್ಕೆ ಸಾರ್ವಜನಿಕರು, ಪ್ರವಾಸಿಗರ ಪ್ರವೇಶ ನಿಷೇಧ





ಮೈಸೂರು,ಜೂ.9(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜೂ.21ರಂದು ಮೈಸೂರು ಅರಮನೆ ಆವರಣದಲ್ಲಿ ನಡೆಯಲಿರುವ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಪ್ರಧಾನಿ ನರೇಂದ್ರ ಮೋದಿ ಅವರು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವ ಸಾಧ್ಯತೆಯಿದ್ದು, ಬೆಟ್ಟದಲ್ಲಿ ಸ್ವಚ್ಛತಾ ಕಾರ್ಯ ಭರದಿಂದ ಸಾಗಿದೆ.

ಪ್ರಧಾನಿ ನರೇಂದ್ರ ಮೋದಿ ವಿವಿಧ ರಾಜ್ಯಗಳಿಗೆ ಭೇಟಿ ನೀಡಿದ್ದಾಗ ಅಲ್ಲಿನ ಧಾರ್ಮಿಕ ಕೇಂದ್ರಕ್ಕೆ ಭೇಟಿ ನೀಡುವ ಪರಿಪಾಠವನ್ನು ಪಾಲಿಸಿಕೊಂಡು ಬರುತ್ತಿರುವುದರಿಂದ ಯೋಗ ದಿನದಂದು ಮೈಸೂರಿಗೆ ಬಂದಾಗ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಬೆಟ್ಟಕ್ಕೆ ಮೋದಿ ಬರುವುದು ಇನ್ನು ಖಚಿತವಾಗಿಲ್ಲವಾದರೂ, ಪ್ರಧಾನಿಗಳ ಆಗಮನದ ನಿರೀಕ್ಷೆಯಿಂದ ಚಾಮುಂಡಿಬೆಟ್ಟದಲ್ಲಿ ಸಿದ್ಧತಾ ಕಾರ್ಯ ಭರದಿಂದ ಸಾಗಿದ್ದು, ಬೆಟ್ಟದ ತಪ್ಪಲಿನ ತಾವರಕಟ್ಟೆಯಿಂದ ಬೆಟ್ಟದ ಮೇಲ್ಭಾಗದವರೆಗೂ ರಸ್ತೆಯ ಗುಂಡಿಗಳನ್ನು ಮುಚ್ಚಲಾಗುತ್ತಿದೆ. ಅಲ್ಲದೆ ರಸ್ತೆ ಬದಿ ಬೆಳೆದಿದ್ದ ಗಿಡ–ಗಂಟಿಗಳನ್ನು ತೆರವುಗೊಳಿಸಲಾಗುತ್ತಿದೆ. ಇನ್ನೆರಡು ದಿನದಲ್ಲಿ ಮುಖ್ಯ ರಸ್ತೆಯ ಎರಡೂ ಬದಿಯಲ್ಲೂ ಬಿಳಿ ಬಣ್ಣ ಬಳಿದು ಸಿಂಗರಿಸುವ ಕಾರ್ಯ ಪೂರ್ಣಗೊಳ್ಳಲಿದೆ.

ಚಾಮುಂಡಿಬೆಟ್ಟ ಗ್ರಾ.ಪಂ ವತಿಯಿಂದ ಸ್ವಚ್ಛತಾ ಕೆಲಸ ನಡೆಸಲಾಗುತ್ತಿದ್ದರೆ, ದೇವಾಲಯದ ಸುತ್ತಲಿನ ರಸ್ತೆ ಇಕ್ಕೆಲ ಹಾಗೂ ದೇವಾಲಯದ ರಸ್ತೆಗೆ ಹೊಂದಿಕೊಂಡಂತಿರುವ ಗ್ರಾಮದ ಕೆಲವು ರಸ್ತೆಗಳನ್ನು ಗ್ರಾಪಂ ಹಾಗೂ ಲೋಕೋಪಯೋಗಿ ಇಲಾಖೆ ವತಿಯಿಂದ ಕಾಂಕ್ರೀಟ್ ರಸ್ತೆಯಾಗಿ ಮಾರ್ಪಡಿಸಲಾಗುತ್ತಿದೆ. ಅಲ್ಲದೆ, ದೇವಿಕೆರೆ ರಸ್ತೆ ಬದಿ ಸುರಿಯಲಾಗಿದ್ದ ತ್ಯಾಜ್ಯವನ್ನು ತೆರವು ಮಾಡಲಾಗುತ್ತಿದೆ. ಮಹಿಷಾಸುರ ಪ್ರತಿಮೆ, ಬಸ್ ನಿಲ್ದಾಣ, ಮೆಟ್ಟಿಲು ಮಾರ್ಗ, ವಸತಿ ಗೃಹದ ಹಿಂಭಾಗದ ರಸ್ತೆ, ಮಹಾಬಲೇಶ್ವರ ದೇವಾಲಯದ ಸಮೀಪದ ನಾಯಕರ ಬೀದಿ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದೆ.

ಪ್ರಧಾನಮಂತ್ರಿಗಳ ಕಚೇರಿಯಿಂದ ಬರುವ ಸಂದೇಶಕ್ಕಾಗಿ ಬೆಟ್ಟದ ದೇವಾಲಯದ ಆಡಳಿತ ಮಂಡಳಿ ಹಾಗೂ ಗ್ರಾಮ ಪಂಚಾಯಿತಿ ಕಾಯುತ್ತಿದೆ. ಪ್ರಧಾನಿ ಮೋದಿ ಬೆಟ್ಟಕ್ಕೆ ಭೇಟಿ ನೀಡುವ ಸಂಬಂಧ ಜೂ.13ರಂದು ಸ್ಪಷ್ಟ ಚಿತ್ರಣ ದೊರೆಯಲಿದೆ. ಒಂದು ವೇಳೆ ಬೆಟ್ಟಕ್ಕೆ ಪ್ರಧಾನಿಗಳು ಭೇಟಿ ನೀಡುವುದು ಖಚಿತವಾದರೆ ಜೂ.20ರಿಂದ ಎರಡು ದಿನಗಳ ಕಾಲ ಬೆಟ್ಟಕ್ಕೆ ಭಕ್ತರು ಹಾಗೂ ಪ್ರವಾಸಿಗರ ಪ್ರವೇಶ ನಿರ್ಬಂಧಿಸುವ ಸಾಧ್ಯತೆ ಇದೆ. ಅಲ್ಲದೆ, ಬೆಟ್ಟದ ನಿವಾಸಿಗಳು ಉತ್ತನಹಳ್ಳಿ ರಸ್ತೆ ಬಳಕೆಗೆ ಸೂಚಿಸಬಹುದಾಗಿದೆ.

ಡಾಂಬರೀಕರಣ: ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ಮೈಸೂರಿನ ಕೆಲವು ರಸ್ತೆಗಳು ಡಾಂಬರೀಕರಣಗೊಳ್ಳುತ್ತಿವೆ. ಮೈಸೂರು–ನಂಜನಗೂಡು ಮುಖ್ಯ ರಸ್ತೆಯನ್ನು ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಅರಮನೆವರೆಗೂ ಹೊಸದಾಗಿ ಡಾಂಬರೀಕರಣ ಮಾಡಲಾಗುತ್ತಿದೆ. ಅಲ್ಲದೆ, ಅರಮನೆ ಸುತ್ತಲಿನ ರಾಜಪಥ ರಸ್ತೆಯ ಇಕ್ಕೆಲದಲ್ಲಿ ಅಳವಡಿಸಲಾಗಿದ್ದ ಕಲ್ಲಿನ ಬ್ಯಾರಿಕೇಡ್ ದುರಸ್ತಿ ಮಾಡುವ ಪ್ರಕ್ರಿಯೆಯೂ ನಡೆಯುತ್ತಿದೆ.

ಕೆ.ಆರ್.ವೃತ್ತದಿಂದ ಪಾಠಶಾಲೆ ವೃತ್ತದವರೆಗೆ ನ್ಯೂ ಸಯ್ಯಾಜಿರಾವ್ ರಸ್ತೆ ಡಾಂಬರೀಕರಣ ಮಾಡಲಾಗುತ್ತಿದೆ. ಪ್ರಧಾನಿ ಮೋದಿ ಮೈಸೂರಿಗೆ ಬಂದಾಗ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆಗೂ ಭೇಟಿ ನೀಡುವ ಸಾಧ್ಯತೆ ಇರುವುದರಿಂದ ಮೈಸೂರು–ಬೋಗಾದಿ ರಸ್ತೆಗೂ ಡಾಂಬರ್ ಹಾಕಲಾಗುತ್ತಿದೆ. ಯೋಗ ದಿನದಂದು ಮಳೆ ಬರುವ ಸಾಧ್ಯತೆ ಹೆಚ್ಚಾದರೆ ಅಂತಾರಾಷ್ಟ್ರೀಯ ಯೋಗ ದಿನದ ಪ್ರದರ್ಶನವನ್ನು ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಒಳಕ್ರೀಡಾಂಗಣದಲ್ಲಿ ನಡೆಸುವುದಕ್ಕೆ ಉದ್ದೇಶಿಸಿರುವುದರಿಂದ ನಜರ್‌ಬಾದ್ ಸುತ್ತಮುತ್ತಲಿನ ರಸ್ತೆಗೂ ಡಾಂಬರೀಕರಣದ ಭಾಗ್ಯ ಬಂದಿದೆ. ಈ ರಸ್ತೆಯಲ್ಲಿ ಸಾಕಷ್ಟು ಗುಂಡಿ ಬಿದ್ದಿದ್ದವು. ಈ ಹಿನ್ನೆಲೆಯಲ್ಲಿ ಹೊಸದಾಗಿ ಟಾರ್ ಹಾಕಲಾಗುತ್ತಿದೆ.

> **ಬೆಟ್ಟದಲ್ಲಿ ಮುಂಜಾಗ್ರತಾ ಕ್ರಮದಿಂದ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ**
>
> 
>
> ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವುದರಿಂದ ನಾಡದೇವಿಯ ದರ್ಶನಕ್ಕೆ ಚಾಮುಂಡಿಬೆಟ್ಟಕ್ಕೂ ಬರಬಹುದಾದ ಸಾಧ್ಯಾಸಾಧ್ಯತೆಗಳ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಕಾರ್ಯ ಹಾಗೂ ಸಿದ್ಧತಾ ಕೆಲಸ ಮಾಡಿಕೊಳ್ಳಲಾಗುತ್ತಿದೆ. ದೇವಾಲಯದ ಸುತ್ತಮುತ್ತಲಿನ ರಸ್ತೆಯಲ್ಲಿ ಸ್ವಚ್ಛತೆ ಮಾಡಿ, ಲೋಕೋಪಯೋಗಿ ಇಲಾಖೆ ಸಹಕಾರದಿಂದ ಕೆಲವು ರಸ್ತೆಯನ್ನು ಕಾಂಕ್ರಿಟ್ ರಸ್ತೆಯಾಗಿ ಮಾರ್ಪಡಿಸಲಾಗುತ್ತಿದೆ. ದೇವಾಲಯದ ಆಡಳಿತ ಮಂಡಳಿ ಸಹಕಾರದಿಂದ ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದೆ.
>
> –ಕೆ.ಭರತ್ ಕಾಳಯ್ಯ, ಅಧ್ಯಕ್ಷ, ಚಾಮುಂಡಿಬೆಟ್ಟ ಗ್ರಾ.ಪಂ

ಹೆಚ್‌ಐವಿ ಪೀಡಿತರು, ಮಂಗಳಮುಖಿಯರಿಗೂ ಯೋಗ ಪ್ರದರ್ಶನಕ್ಕೆ ಅವಕಾಶ

ನಾವೆಲ್ಲಾ ಒಂದೇ ಎಂಬ ಸಂದೇಶ ರವಾನಿಸಲು 'ಮಾನವೀಯತೆಗಾಗಿ ಯೋಗ': ಶಾಸಕ ಎಸ್.ಎ. ರಾಮದಾಸ್



ಮೈಸೂರು,ಜೂ.9(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ 'ಮಾನವೀಯತೆಗಾಗಿ ಯೋಗ' ಶೀರ್ಷಿಕೆಯಡಿ ಎಲ್ಲಾ ವರ್ಗಕ್ಕೂ ಅವಕಾಶ ನೀಡುವ ಮೂಲಕ ನಾವೆಲ್ಲಾ ಒಂದೇ ಎಂಬ ಸಂದೇಶ ರವಾನಿಸಲಾಗಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

ಅರಮನೆ ಆವರಣದಲ್ಲಿ ಜೂ.21ರಂದು ನಡೆಯುವ ಯೋಗ ದಿನದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಮೈಸೂರಿನ ನಜರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದಲ್ಲಿ 'ವೈದ್ಯರ ಭವನದಲ್ಲಿ' ಇಂದಿನಿಂದ ಮಂಗಳಮುಖಿಯರಿಗಾಗಿ ನಡೆಸಿದ ಯೋಗಾಭ್ಯಾಸದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂತಾರಾಷ್ಟ್ರೀಯ ಯೋಗ ದಿನದಲ್ಲಿ ಎಲ್ಲಾ ಹಂತದವರೂ ಪಾಲ್ಗೊಳ್ಳಬೇಕು ಎಂಬುದು ಪ್ರಧಾನಿಗಳ ಆಶಯ. ಆ ನಿಟ್ಟಿನಲ್ಲಿ ಮಂಗಳಮುಖಿಯರಿಗೂ ವೇದಿಕೆ ಕಲ್ಪಿಸಲಾಗುತ್ತಿದೆ. ಅಲ್ಲದೆ, ಹೆಚ್‌ಐವಿ ಪೀಡಿತರಿಗೂ ಅವಕಾಶ ನೀಡಲಾಗುತ್ತಿದೆ. ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಎಲ್ಲಾ ಪಟುಗಳು ಒಂದೇ ಎಂಬ ಭಾವನೆ ಮೂಡಿಸಲು ಒಂದೇ ಬಣ್ಣದ ಟೀ–ಶರ್ಟ್ ನೀಡಲಾಗುತ್ತಿದೆ. ಪ್ರದರ್ಶನದ ವೇಳೆ ಬಡವ, ಬಲ್ಲಿದ, ಮೇಲು–ಕೀಳೆಂಬ ಭಾವನೆ ಮೂಡದೇ ನಾವೆಲ್ಲಾ ಒಂದೇ ಎಂಬ ಸಂದೇಶ ಸಾರಲಾಗುತ್ತದೆ ಎಂದರು.

ಅಂತಾರಾಷ್ಟ್ರೀಯ ಯೋಗ ದಿನಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಮೈಸೂರಿಗೆ ಬರುತ್ತಿದ್ದು, ಸಂಬಂಧಪಟ್ಟ ಸಿದ್ಧತೆಗಳು ಸಾಗರೋಪಾದಿಯಲ್ಲಿ ನಡೆಸಲಾಗುತ್ತಿದೆ. ಮಾನವೀಯತೆಗಾಗಿ ಯೋಗ ಎಂಬ ಶೀರ್ಷಿಕೆಯಡಿಯಲ್ಲಿ 2022ರ ಅಂತಾರಾಷ್ಟ್ರೀಯ ಯೋಗ ದಿನ ನಡೆಸಲಾಗುತ್ತಿದೆ. ಸಮಾಜದ ಎಲ್ಲಾ ವರ್ಗದವರೂ ಸಹ ಇದರಲ್ಲಿ ಭಾಗವಹಿಸಬೇಕು ಎಂಬುದು ಇಚ್ಛೆಯಾಗಿದೆ. ಅದರಂತೆಯೇ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿಯ ಆರೋಗ್ಯ ಭವನದಲ್ಲಿ ಇಂದಿನಿಂದ ಯೋಗಾ ಫೆಡರೇಷನ್ ವತಿಯಿಂದ ತೃತೀಯ ಲಿಂಗಿಗಳು, ಆಶಾ ಕಾರ್ಯಕರ್ತರಿಗೆ, ವಿಶೇಷಚೇತನರಿಗೆ ಯೋಗ ತರಬೇತಿ ನೀಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಯೋಗ ಫೆಡರೇಷನ್‌ನ ಗಣೇಶ್, ಡಿಹೆಚ್‌ಓ ಡಾ.ಕೆ.ಹೆಚ್. ಪ್ರಸಾದ್, ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳಾದ ಡಾ. ಸಿರಾಜ್ ಅಹ್ಮದ್ ಹಾಗೂ ಇನ್ನಿತರು ಪಾಲ್ಗೊಂಡಿದ್ದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಕಾರಿಡಾರ್‌ನಲ್ಲಿ ಸಂಚರಿಸಲು 200–250 ರೂ. ಟೋಲ್ ಪಾವತಿಸಬೇಕಿದೆ

ಎರಡು ಹಂತದ ಯೋಜನೆ ಜುಲೈ, ಅಕ್ಟೋಬರ್‌ನಲ್ಲಿ ಸಂಚಾರಕ್ಕೆ ಮುಕ್ತ

ಬೆಂಗಳೂರು, ಜೂ.9– ಬಹುನಿರೀಕ್ಷಿತ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್ 2022 ರ ಅಕ್ಟೋಬರ್‌ನಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ನಂತರ 200 ರಿಂದ 250 ರೂ. ಟೋಲ್‌ಕಟ್ಟಿ ಪ್ರಯಾಣಿಸಲು ವಾಹನ ಮಾಲೀಕರು, ಚಾಲಕರು ಸಿದ್ಧರಾಗಬೇಕಿದೆ.



ಬೆಂಗಳೂರು–ಮೈಸೂರು ನಗರಗಳ ನಡುವಿನ ಪ್ರಯಾಣದ ಸಮಯವನ್ನು ಈಗಿರುವ ಮೂರು ಗಂಟೆಗಳಿಂದ 75 ನಿಮಿಷಗಳಿಗೆ ಇಳಿಸಲಾಗಿದೆ, ಅದಕ್ಕಾಗಿ ವಾಹನ ಚಾಲಕರು ಎರಡು ಸ್ಥಳಗಳಲ್ಲಿ 200 ರಿಂದ 250 ರೂ. ಗಳವರೆಗೆ ಟೋಲ್ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್‌ಗೆ ಬೆಂಗಳೂರು ಸಮೀಪದ ಕುಂಬಳಗೋಡು ಬಳಿಯ ಕಣಮಿಣಿಕೆ ಹಾಗೂ ಶ್ರೀರಂಗಪಟ್ಟಣ ಸಮೀಪದ ಗಣಂಗೂರು ಬಳಿ ಮತ್ತೊಂದು ಟೋಲ್ ಗೇಟ್ ಇರಲಿದೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ಮಾರ್ಗಸೂಚಿಗಳ ಪ್ರಕಾರ, ಪ್ರತಿ 60 ಕಿಮೀಗೆ ಟೋಲ್ ಇರಬೇಕು, ಸರಾಸರಿ ಶುಲ್ಕ ಪ್ರತಿ ಕಿಮೀಗೆ 1.5 ರಿಂದ 2 ರೂ ನಿಗದಿ ಪಡಿಸಲಾಗಿದೆ.

ಹೆದ್ದಾರಿಯಲ್ಲಿನ ಲೇನ್‌ಗಳ ಸಂಖ್ಯೆ, ಸೇತುವೆಗಳು ಮತ್ತು ಅಂಡರ್‌ಪಾಸ್‌ಗಳ ಸಂಖ್ಯೆಗಳ ಆಧಾರದ ಮೇಲೆ ಟೋಲ್ ಶುಲ್ಕವನ್ನು ನಿರ್ಧರಿಸಲಾಗುತ್ತದೆ. ಕಾರಿಡಾರ್ ಒಂಬತ್ತು ಪ್ರಮುಖ ಸೇತುವೆಗಳು, 44 ಚಿಕ್ಕ ಸೇತುವೆಗಳು, ನಾಲ್ಕು ರೈಲು ಮೇಲ್ಸೇತುವೆಗಳನ್ನು ಹೊಂದಿದೆ. ಟೋಲ್ ಶುಲ್ಕವು ರೂ 200 ರಿಂದ ರೂ 250 ರ ನಡುವೆ ಇರುತ್ತದೆ. ಆದರೆ 75 ನಿಮಿಷಗಳಲ್ಲಿ ಮೈಸೂರು ತಲುಪಬಹುದು, ಸಮಯ ಉಳಿಸಬಹುದು. ಇದರಿಂದ ಮೈಸೂರಿನಲ್ಲಿ ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತದೆ, ಬೆಂಗಳೂರಿಗೆ ಸ್ವಲ್ಪ ಹೊರೆ ಕಡಿಮೆಯಾಗುತ್ತದೆ ಎಂದು ಹೇಳಲಾಗುತ್ತಿದೆ. ರಾಜ್ಯದ ರಾಜಧಾನಿ ಮತ್ತು ಮೈಸೂರು ನಡುವಿನ ಅಂತರವು ಸುಮಾರು 140 ಕಿ.ಮೀ. ಇದೆ. ಹೆದ್ದಾರಿ ತೆರೆದ ನಂತರವೇ ನಿಖರವಾದ ಟೋಲ್ ಶುಲ್ಕ ನಿಗದಿಯಾಗಲಿದೆ. ಹಿಂದೆ ನಿಗದಿಪಡಿಸಿದ ವೇಳಾಪಟ್ಟಿಯಂತೆ, ಬೆಂಗಳೂರಿನಿಂದ ಮದ್ದೂರು ಬಳಿಯ ನಿಡಘಟ್ಟದವರೆಗಿನ ರಸ್ತೆಯನ್ನು ಜುಲೈನಲ್ಲಿ ಹಾಗೂ ಉಳಿದ ರಸ್ತೆಯನ್ನು ಅಕ್ಟೋಬರ್‌ನಲ್ಲಿ ತೆರೆಯಬೇಕಿದೆ. 117 ಕಿಮೀ ಹೆದ್ದಾರಿಯು ಬೆಂಗಳೂರಿನ ನೈಸ್ ಪ್ರವೇಶ ದ್ವಾರದಿಂದ ಮೈಸೂರಿನ ರಿಂಗ್ ರೋಡ್ ಜಂಕ್ಷನ್‌ವರೆಗೆ ಇದೆ. 2014 ರಲ್ಲಿ ಯೋಜನೆಯ ಅಂದಾಜು ವೆಚ್ಚ ಸುಮಾರು 4,100 ಕೋಟಿ ರೂ. ಗಳಷ್ಟಿದ್ದು, ಅದು ನಂತರ ದುಪ್ಪಟ್ಟಾಗಿದೆ.

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಕಮಲ ಅರಳಿಸಲು ಮನವಿ



ಮೈಸೂರು, ಜೂ.9(ಎಂಕೆ)– ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಮೈ.ವಿ.ರವಿಶಂಕರ್ ಅವರನ್ನು ಬೆಂಬಲಿಸುವ ಮೂಲಕ ಈ ಕ್ಷೇತ್ರದಲ್ಲಿ ಮತ್ತೆ ಕಮಲ ಅರಳಿಸುವಂತೆ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ಪದವೀಧರ ಮತದಾರರಲ್ಲಿ ಮನವಿ ಮಾಡಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ಚುನಾವಣಾ ಜಾಗೃತಿ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪದವೀಧರರು ಮಾತ್ರವೇ ಮತದಾನ ಮಾಡಲು ಅವಕಾಶವಿರುವ ಪದವೀಧರ ಕ್ಷೇತ್ರ ಚುನಾವಣೆ ವಿಶೇಷತೆಯಿಂದ ಕೂಡಿದ್ದು, ಸ್ಪರ್ಧಿಸಿರುವ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ಮತ ನೀಡಲು ಅವಕಾಶ ಮಾಡಿಕೊಡಲಾಗಿದೆ. ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯವರೇ ಹೆಚ್ಚು ಪ್ರಾಬಲ್ಯ ಸಾಧಿಸಿದ್ದಾರೆ. ಕೇವಲ ಇಬ್ಬರು ಶಾಸಕರಿದ್ದಾಗಲೇ ಜಯಗಳಿಸಿದ್ದು, ಇಂದು ನಾಲ್ಕು ಜಿಲ್ಲೆಗಳಲ್ಲಿಯೂ ಶಾಸಕರು, ಸಂಸದರಿದ್ದಾರೆ. ಇದರಿಂದ ಪಕ್ಷದ ಶಕ್ತಿ ಹೆಚ್ಚಿದ್ದು, ಗೆಲುವು ಖಚಿತವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಮೈ.ವಿ.ರವಿಶಂಕರ್, ಎಲ್ಲಾ ಬಗೆಯ ಚುನಾವಣೆಗಳಲ್ಲಿಯೂ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿ, ಅವರ ಗೆಲುವಿಗೆ ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದಾರೆ. ಪದವೀಧರ ಸಮಸ್ಯೆಗಳನ್ನು ಬಗೆಹರಿಸಲು ರವಿಶಂಕರ್ ಸೂಕ್ತ ಅಭ್ಯರ್ಥಿಯಾಗಿದ್ದು, ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕಾಗಿದೆ ಎಂದರು.

ಇದೇ ವೇಳೆ ಅಂಕಣಕಾರ ನಂ.ಶ್ರೀಕಂಠಮೂರ್ತಿ ಮತದಾನ ಕುರಿತು ಜಾಗೃತಿ ಮೂಡಿಸಿದರು. ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಅರ್ಪಿತಾ ಪ್ರತಾಪ್ ಸಿಂಹ, ಮಲಕ್ಷ್ಮಿ ಅಜಯ್, ಮಹೇಶ್ ಕಾಮತ್ ಮತ್ತಿತರು ಉಪಸ್ಥಿತರಿದ್ದರು.

ಸಾಲದ ಆಸೆ ತೋರಿಸಿ 57 ಸಾವಿರ ಸುಲಿಗೆ

ಮೈಸೂರು, ಜೂ.9– ಆನ್‌ಲೈನ್ ಆಪ್ ಮೂಲಕ ಲೋನ್ ಕೊಡುವುದಾಗಿ ನಂಬಿಸಿ ಉದ್ಯಮಿಯೊಬ್ಬರಿಗೆ 57,850 ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿ ಆರ್. ಸಾಗರ್ ವಂಚನೆಗೊಳಗಾದವರಾಗಿದ್ದು, ಆನ್‌ಲೈನ್‌ನಲ್ಲಿ ಲೋನ್ ನೀಡುವುದಾಗಿ ತಿಳಿಸಿದ ವಂಚಕರು ವಿವಿಧ ಬಾಬ್ತುಗಳೆಂದು ಅವರಿಂದ 57,850 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾರೆ ಎಂದು ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ

ಕರುಳಿನ ಸಮಸ್ಯೆಗೆ ಅತ್ಯಾಧುನಿಕ ವಿಧಾನದ ಶಸ್ತ್ರಚಿಕಿತ್ಸೆ

ಸ್ಪೈರಲ್ ಎಂಟರೊಸ್ಕೋಪಿ ಯಂತ್ರ ಅಳವಡಿಕೆ



ಮೈಸೂರು, ಜೂ.9(ಎಂಟಿವೈ)– ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕರುಳಿನ ಹುಣ್ಣು ಸೇರಿದಂತೆ ಕರುಳಿನ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ಅತ್ಯಾಧುನಿಕ ಚಿಕಿತ್ಸಾ ವಿಧಾನವಾದ ಸ್ಪೈರಲ್ ಎಂಟರೋಸ್ಕೋಪಿ ಮೂಲಕ ಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ ಎಂದು ಆಸ್ಪತ್ರೆಯ ಕ್ಲಿನಿಕಲ್ ನಿರ್ದೇಶಕ ಡಾ.ಎಂ.ಎನ್.ರವಿ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಗಿಗಳಿಗೆ ಉತ್ತಮ ವೈದ್ಯಕೀಯ ಸೇವೆ ಮತ್ತು ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯು ಸಣ್ಣ ಕರುಳಿನ ಅಸ್ವಸ್ಥತೆ ಗುರುತಿಸಿ ಚಿಕಿತ್ಸೆ ನೀಡುವ ಅತ್ಯಾಧುನಿಕ ಸ್ಪೈರಲ್ ಎಂಟರೊಸ್ಕೋಪಿ (ಯಂತ್ರ) ಮೂಲಕ ಚಿಕಿತ್ಸೆಯ ಸೌಲಭ್ಯ ಆರಂಭಿಸಿದೆ ಎಂದರು.

ಈ ಹಿಂದೆ ಕರುಳು, ದೊಡ್ಡ ಕರುಳು ಮತ್ತು ಸಣ್ಣ ಕರುಳನ್ನು ಒಳಗೊಂಡಿರುವ ಜೀರ್ಣಾಂಗ ಸಮಸ್ಯೆ, ಸಣ್ಣ ಕರುಳಿನ ಸಮಸ್ಯೆಗಳನ್ನು ಗುರುತಿಸುವುದು ಕಷ್ಟವಾಗುತ್ತಿತ್ತು. ಆದರೆ ಈಗ ಸ್ಪೈರಲ್ ಎಂಟರೊಸ್ಕೋಪಿ ಯಂತ್ರದಿಂದ ಆ ಸಮಸ್ಯೆಯನ್ನು ಗುರುತಿಸುವುದು ಸುಲಭವಾಗಿದ್ದು, ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡುವ ಮೂಲಕ ರೋಗಿಗಳನ್ನು ಗುಣಪಡಿಸಲಾಗುತ್ತಿದೆ ಎಂದರು.

ದೀರ್ಘ ಸುರುಳಿಯಾಕಾರದ ಸಣ್ಣ ಕರುಳಿನ ಸೂಕ್ಷ್ಮ ರೋಗಾಣುಗಳನ್ನು ಸಾಂಪ್ರದಾಯಿಕ ವಿಧಾನಗಳ ಮೂಲಕ ಗುರುತಿಸುವುದು ಕಷ್ಟಕರವಾಗಿತ್ತು. ಆದರೆ, ಸ್ಪೈರಲ್ ಎಂಟರೊಸ್ಕೋಪಿ ಅತ್ಯಾಧುನಿಕ ಯಂತ್ರವು ಒಂದು ಮಾದರಿ ಬದಲಾವಣೆ ತಂದಿದ್ದು, ಇದು ಸಣ್ಣ ಕರುಳಿನ ರೋಗ ನಿರ್ಣಯ ಮತ್ತು ಚಿಕಿತ್ಸಕಗಳಿಗೆ ಹೆಚ್ಚು ಪರಿಣಾಮಕಾರಿಯಾಗಿದೆ ಎಂದರು.

ಆಸ್ಪತ್ರೆಯ ವೈದ್ಯಕೀಯ ಗ್ಯಾಸ್ಟ್ರೋ ಎಂಟರಾಲಜಿ ತಜ್ಞ ಡಾ.ಎ.ಕೆ.ಸತೀಶ್‌ರಾವ್ ಮಾತನಾಡಿ, ಸಣ್ಣ ಕರುಳಿನ ಗಾಯಗಳು, ಹುಣ್ಣು, ಅಜ್ಞಾತ ಕಾರಣಗಳ ರಕ್ತಹೀನತೆಯ ಮತ್ತು ಕಿಬ್ಬೊಟ್ಟೆಯ ನೋವನ್ನು ಪತ್ತೆಹಚ್ಚಲು ಈ ಯಂತ್ರವೂ ಸಹಾಯಕವಾಗಿದೆ. ಸಣ್ಣ ಕರುಳಿನ ಚಿಕಿತ್ಸೆಯಲ್ಲಿ ಮತ್ತು ಶಸ್ತ್ರಚಿಕಿತ್ಸೆಯಿಲ್ಲದೆ ಪಾಲಿಪ್ಸ್ (ಗಡ್ಡೆ)ಅನ್ನು ತೆಗೆದು ಹಾಕುವಲ್ಲಿ ಉಪಯುಕ್ತವಾಗಿದೆ. ಇದರೊಂದಿಗೆ ಸಣ್ಣ ಕರುಳಿನಿಂದ ರಕ್ತಸ್ರಾವವನ್ನು ಗುರುತಿಸಬಹುದಾಗಿದ್ದು, ಶಸ್ತ್ರಚಿಕಿತ್ಸೆಯಿಲ್ಲದೆ ಚಿಕಿತ್ಸೆ ಮಾಡಬಹುದು ಎಂದು ವಿವರಿಸಿದರು.

5 ಮೀಟರ್ ಸಣ್ಣ ಕರುಳನ್ನು ಸ್ಪೈರಲ್ ಎಂಟರೊಸ್ಕೋಪಿ ಯಂತ್ರದ ಮೂಲಕ ಪೂರ್ಣವಾಗಿ ಪರೀಕ್ಷಿಸಬಹುದು. ಇದರಿಂದ ರೋಗಿಗಳು ಹೆಚ್ಚು ಕಾಲ ಆಸ್ಪತ್ರೆಯಲ್ಲಿ ಉಳಿಯುವ ಅವಶ್ಯಕತೆ ಇರುವುದಿಲ್ಲ. ಈಗಾಗಲೇ ಯಂತ್ರದಿಂದ ಇಬ್ಬರೂ ರೋಗಿಗಳಿಗೆ ಶಸ್ತ್ರಚಿಕಿತ್ಸೆ ನೆರವೇರಿದೆ. ಈ ಅತ್ಯಾಧುನಿಕ ಯಂತ್ರವನ್ನು ಹೊಂದಿರುವ ರಾಜ್ಯದ ಎರಡನೇ ಮತ್ತು ಮೈಸೂರಿನ ಮೊದಲ ಆಸ್ಪತ್ರೆ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾಗಿದೆ. ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಗುಣಮಟ್ಟದ ರೋಗ ನಿರ್ಣಯ ಮತ್ತು ಚಿಕಿತ್ಸಾ ಸೌಲಭ್ಯಗಳನ್ನು ಲಭ್ಯವಾಗುವಂತೆ ಖಚಿತಪಡಿಸಿಕೊಳ್ಳಲು ಬಯಸುತ್ತೇವೆ. ಸ್ಪೈರಲ್ ಎಂಟರೊಸ್ಕೋಪಿಯ ಸ್ಥಾಪನೆಯು ಈ ದಿಕ್ಕಿನಲ್ಲಿ ಒಂದು ಪ್ರಯತ್ನವಾಗಿದೆ ತಿಳಿಸಿದರು.

ಇದಕ್ಕೂ ಮುನ್ನಾ ಆಸ್ಪತ್ರೆಯ ಆವರಣದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸ್ಪೈರಲ್ ಎಂಟರೊಸ್ಕೋಪಿ ಯಂತ್ರವನ್ನು ಅನಾವರಣಗೊಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ದಕ್ಷಿಣ ಪ್ರಾದೇಶಿಕ ನಿರ್ದೇಶಕ ಡಾ.ವಿಜಯ್ ಸಿಂಗ್, ಆಸ್ಪತ್ರೆಯ ಫೆಸಿಲಿಟಿ ಡೈರೆಕ್ಟರ್ ಪವನ್ ಕುಮಾರ್ ಇದ್ದರು.

ಮ್ಯಾಗ್ನಸೈಟ್ ಗಣಿ ವಿರುದ್ಧ ರೈತರ ಪ್ರತಿಭಟನೆ



ನಂಜನಗೂಡು, ಜೂ.9(ಸುದರ್ಶನ್)– ಗುತ್ತಿಗೆ ಪಡೆದು ಅವಧಿ ಮುಗಿದರೂ ಭೂಮಿ ವಾಪಸ್ ನೀಡುತ್ತಿಲ್ಲ ಎಂದು ಆರೋಪಿಸಿ ಮ್ಯಾಗ್ನಸೈಟ್ ಉತ್ಪಾದನಾ ಗಣಿ ವಿರುದ್ಧ ತಾಲೂಕಿನ ಕಾರ್ಯ ಗ್ರಾಮದಲ್ಲಿ ಗುರುವಾರ ರೈತರು ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿರುವ ಮ್ಯಾಗ್ನಸೈಟ್ ಉತ್ಪಾದನಾ ಗಣಿ ಮುಂಭಾಗ ಸಮಾವೇಶಗೊಂಡ ರೈತರು ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

20ವರ್ಷಗಳ ಕಾಲ ರೈತರ ಭೂಮಿಯನ್ನು ಗುತ್ತಿಗೆ ಪಡೆದಿದ್ದ ಮ್ಯಾಗ್ನಸೈಟ್ ಉತ್ಪಾದನಾ ಗಣಿ ಅಧಿಕಾರಿಗಳು 36 ವರ್ಷಗಳ ಕಳೆದರೂ ರೈತರಿಗೆ ಭೂಮಿ ವಾಪಸ್ ನೀಡಿಲ್ಲ ಎಂದು ಅನ್ನದಾತರು ಅಸಮಾಧಾನ ವ್ಯಕ್ತಪಡಿಸಿದರು. ಭೂಮಿ ಪಡೆದ ರೈತ ಕುಟುಂಬಕ್ಕೆ ಕಡ್ಡಾಯವಾಗಿ ಒಬ್ಬರಿಗೆ ಕಾಯಂ ಹುದ್ದೆ ನೀಡುತ್ತೇವೆ ಎಂದು ಭರವಸೆ ನೀಡಲಾಗಿತ್ತು. ಆದರೆ, ಇದೀಗ ನಮ್ಮ ಭೂಮಿಯನ್ನು ಪಡೆದುಕೊಂಡು 36 ವರ್ಷಗಳ ಕಳೆದರೂ ಪರಿಹಾರವೂ ಇಲ್ಲ. ಕೆಲಸವೂ ಇಲ್ಲ ನಮ್ಮ ಭೂಮಿಯನ್ನು ನೀಡುತ್ತಿಲ್ಲ ಎಂದು ರೈತರು ಗಣಿ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಒಂದು ವರ್ಷದಿಂದ ತಮ್ಮ ಭೂಮಿಯನ್ನು ಪಡೆದುಕೊಳ್ಳಲು ರೈತರು ಹರಸಾಹಸ ಪಡುತ್ತಿದ್ದಾರೆ. ಆದರೆ, ತಾಲೂಕು ಆಡಳಿತವಾಗಲಿ, ಜಿಲ್ಲಾಡಳಿತವಾಗಲಿ ನೊಂದ ರೈತರಿಗೆ ಸ್ಪಂದನೆ ನೀಡುತ್ತಿಲ್ಲ. ನಮ್ಮ ಭೂಮಿಯನ್ನು ನಮಗೆ ಹಿಂದಿರುಗಿಸುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ರೈತರ ಎಚ್ಚರಿಕೆ ನೀಡಿದರು.

ತಿ.ನರಸೀಪುರದಲ್ಲಿ ಚಡ್ಡಿ ಸಂಗ್ರಹಿಸಿ ಕಾಂಗ್ರೆಸ್ ನಾಯಕರಿಗೆ ರವಾನೆ

ಆರ್‌ಎಸ್‌ಎಸ್‌ನಿಂದ ವಿನೂತನ ಪ್ರತಿಭಟನೆ

ಆರ್‌ಎಸ್‌ಎಸ್‌ನ ಬಗ್ಗೆ ಮಾತನಾಡಲು ಕಾಂಗ್ರೆಸ್‌ಗೆ ನೈತಿಕತೆ ಇಲ್ಲ: ಸೋಸ್ಲೆ ಶಿವಕುಮಾರ್



ತಿ.ನರಸೀಪುರ, ಜೂ.9(ಎಸ್‌ಕೆ)– ಚಡ್ಡಿಗಳನ್ನು ಸಂಗ್ರಹಿಸಿ, ಅವುಗಳನ್ನು ಕಾಂಗ್ರೆಸ್ ನಾಯಕರಿಗೆ ರವಾನಿಸುವ ಮೂಲಕ ಪಟ್ಟಣದಲ್ಲಿ ಗುರುವಾರ ಆರ್‌ಎಸ್‌ಎಸ್ ಕಾರ್ಯಕರ್ತರು ವಿನೂತನ ಪ್ರತಿಭಟನೆ ನಡೆಸಿದರು.

ಈ ವೇಳೆ ತಾಲೂಕು ಎಸ್‌ಸಿ ಮೋರ್ಚಾ ಅಧ್ಯಕ್ಷ ಸೋಸ್ಲೆ ಶಿವಕುಮಾರ್ ಮಾತನಾಡಿ, ದೇಶದ ಮೇಲೆ ಅಪಾರ ರಾಷ್ಟ್ರಭಕ್ತಿ ಹೊಂದಿರುವ ಆರ್‌ಎಸ್‌ಎಸ್ ಸಂಘಟನೆ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್ ಪಕ್ಷಕ್ಕೆ ಇಲ್ಲ. ಆರ್‌ಎಸ್‌ಎಸ್‌ನ ಚಡ್ಡಿ ವಿರುದ್ಧ ಸುಖಾಸುಮ್ಮನೆ ಕಾಂಗ್ರೆಸ್ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದರು.

ಆರ್‌ಎಸ್‌ಎಸ್ ಸಂಘಟನೆ ದೇಶಭಕ್ತ ಸಂಘಟನೆಯಾಗಿದ್ದು, ರಾಷ್ಟ್ರದ ಶಕ್ತಿಯ ಅಸ್ತ್ರವಾಗಿದೆ ಎಂದರೆ ತಪ್ಪಾಗಲಾರದು. ಇಂತಹ ಸಂಘಟನೆಯನ್ನು ಟೀಕಿಸಿರುವುದು ಖಂಡನೀಯ. ಚಡ್ಡಿಗಳನ್ನು ಸುಡುವುದಾದರೆ ನಾವುಗಳೇ ಅವರಿರುವ ಸ್ಥಳಕ್ಕೆ ಲಕ್ಷಾಂತರ ಚಡ್ಡಿಗಳನ್ನು ಕಳುಹಿಸುತ್ತೇವೆ. ಅವರು ಅವುಗಳನ್ನು ಸುಟ್ಟುಕೊಂಡು ಕಾಲ ಹರಣ ಮಾಡಲಿ ಎಂದು ಟೀಕಿಸಿದರು.

ಎಂಎಲ್‌ಸಿ ಚಲುವಾದಿ ನಾರಾಯಣ ಸ್ವಾಮಿ ಅವರ ಕರೆಯ ಮೇರೆಗೆ ಎಸ್‌ಸಿ ಮೋರ್ಚಾದಿಂದ ರಾಜ್ಯದಪ್ರತಿ ತಾಲೂಕಿನಿಂದ ಚಡ್ಡಿಗಳನ್ನು ಸಂಗ್ರಹಿಸಿ ಕೆಪಿಸಿಸಿ ಕಚೇರಿಗೆ ನಾವೇ ಕಳುಹಿಸುತ್ತೇವೆ. ಚಡ್ಡಿಗಳನ್ನು ಸುಡಲು ಕಾಂಗ್ರೆಸ್‌ನವರು ಪರದಾಡಬಾರದು ಎಂದು ಲೇವಡಿ ಮಾಡಿದರು.

ಪ್ರತಿಭಟನೆಯಲ್ಲಿ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಸಿದ್ದು, ವೆಂಕಟರಮಣಶೆಟ್ಟಿ, ಕಳ್ಳಿಪುರ ನಾರಾಯಣ್, ಸಿದ್ದರಾಜು, ಮುಕುಂದ, ಕುಮಾರ್, ಮುತ್ತಣ್ಣ, ಶ್ರೀರಾಮಸೇನೆಯ ಚೇತನ್ ಮತ್ತಿತರರು ಪಾಲ್ಗೊಂಡಿದ್ದರು.

ಕಾಡಾನೆ ದಾಳಿಯಿಂದ ವ್ಯಕ್ತಿ ಸಾವು: ಗ್ರಾಮಸ್ಥರ ಆಕ್ರೋಶ



ಹೆಚ್.ಡಿ.ಕೋಟೆ, ಜೂ.9(ಮಂಜು)– ಕಾಡಾನೆ ದಾಳಿಯಿಂದ ವ್ಯಕ್ತಿಯೊಬ್ಬ ಸಾವನ್ನಪ್ಪಿರುವ ಘಟನೆ ತಾಲೂಕಿನ ಕೇರಳ ಗಡಿಭಾಗದ ಡಿ.ಬಿ.ಕುಪ್ಪೆ ಅರಣ್ಯ ವಲಯ ವ್ಯಾಪ್ತಿಯ ವಾಳದ ಹಾಡಿಯಲ್ಲಿ ಬುಧವಾರ ಸಂಜೆ ನಡೆದಿದೆ.

ಇಲ್ಲಿನ ನಿವಾಸಿ ಪುಟ್ಟ (75) ಮೃತಪಟ್ಟ ವ್ಯಕ್ತಿ. ಈತ ಕೆಲಸನಿಮಿತ್ತ ಮನೆಯಿಂದ ಹೊರಹೋಗಿದ್ದ ವೇಳೆ ಕಾಡಾನೆಯೊಂದು ಏಕಾಏಕಿ ದಾಳಿ ಮಾಡಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡ ಪುಟ್ಟ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ವಿಚಾರ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖೆ ಅಧಿಕಾರಿಗಳು ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಹೆಚ್.ಡಿ. ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದಾರೆ.



ಪುಟ್ಟ

ಆಸ್ಪತ್ರೆಗೆ ಶಾಸಕ ಅನಿಲ್ ಚಿಕ್ಕಮಾದು, ತಹಸೀಲ್ದಾರ್ ರತ್ನಾಂಬಿಕಾ, ಡಿಸಿಎಫ್ ಮಹೇಶ್‌ಕುಮಾರ್, ಎಸಿಎಫ್ ಮಾದೇವ್, ಆರ್‌ಎಫ್‌ಒ ಸಿದ್ದರಾಜು, ಮಧು, ಎಆರ್‌ಎಫ್‌ಒ ನಾರಾಯಣ್, ಡಾ.ಶರತ್, ಚಂದ್ರಶೇಖರ್ ಭೇಟಿ ನೀಡಿ, ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಗ್ರಾಮಸ್ಥರ ಆಕ್ರೋಶ: ಹಾಡಿಯ ಸುತ್ತಮುತ್ತಲೂ ಆಗಾಗ ಕಾಡಾನೆಗಳು ದಾಂಧಲೆ ನಡೆಸುತ್ತಿದ್ದು, ಇದರ ನಿಯಂತ್ರಣಕ್ಕೆ ಟ್ರಂಚ್ ಮತ್ತು ಸೋಲಾರ್ ಬೇಲಿ ನಿರ್ಮಿಸಬೇಕು ಎಂದು ಸಾಕಷ್ಟು ಭಾರೀ ಅರಣ್ಯ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರು ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಪರಿಹಾರ ವಿತರಣೆ: ಇದೇ ವೇಳೆ ಡಿಸಿಎಫ್ ಮಹೇಶ್‌ಕುಮಾರ್ ಅವರು ಸಂತ್ರಸ್ಥ ಕುಟುಂಬದವರಿಗೆ 2ಲಕ್ಷ ರೂ. ಪರಿಹಾರದ ಚೆಕ್ ವಿತರಿಸಿದರು. ಉಳಿದ ಪರಿಹಾರದ ಹಣವನ್ನು ಶೀಘ್ರವೇ ವಿತರಿಸಲಾಗುವುದು ಎಂದು ತಿಳಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಮೃತಪಟ್ಟ ಪುಟ್ಟ ಅವರ ಕುಟುಂಬದವರಿಗೆ ಅರಣ್ಯ ಇಲಾಖೆಯಿಂದ ಉದ್ಯೋಗ ನೀಡುವುದರ ಜೊತೆಗೆ 7.5 ಲಕ್ಷ ಪರಿಹಾರ ಹಾಗೂ 5 ವರ್ಷಗಳ ಕಾಲ ಪ್ರತಿ ತಿಂಗಳು ಕುಟುಂಬ ನಿವಾರಣೆಗೆ 2ಸಾವಿರ ರೂ. ನೀಡಲಾಗುವುದು ಎಂದರು.

ಈ ವೇಳೆ ಸರ್ಕಲ್ ಇನ್‌ಸ್ಪೆಕ್ಟರ್ ಬಸವರಾಜ್, ಆನಂದ್, ಎಸ್‌ಐ ಜಯಪ್ರಕಾಶ್, ಶರವಣದಾಸ ರೆಡ್ಡಿ, ಪರಿಶಿಷ್ಟ ವರ್ಗ ಅಧಿಕಾರಿ ನಾರಾಯಣಸ್ವಾಮಿ, ನಾಗರಾಜು, ಪುರಸಭೆ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಮುಖಂಡರಾದ ಪುಟ್ಟಬಸವನಾಯಕ, ವೆಂಕಟೇಶ್, ಪರಶಿವಮೂರ್ತಿ, ಪ್ರಕಾಶ್, ಹೇಮಂತ ಸೇರಿದಂತೆ ಇತರರಿದ್ದರು.

> ಡಿ.ಬಿ.ಕುಪ್ಪೆ ವ್ಯಾಪ್ತಿಯಲ್ಲಿ ಸುಮಾರು 14 ಹಾಡಿಗಳಿದ್ದು, ಇಲ್ಲಿ ಮುಂದಿನ ದಿನಗಳಲ್ಲಿ ಇಂತಹ ಘಟನೆ ನಡೆಯಬಾರದು. ಹಾಡಿಗಳ ಸಮೀಪ ಹೆಚ್ಚಿನ ಕಾವಲು ಪಡೆಗಳನ್ನು ಅರಣ್ಯ ಇಲಾಖೆಯಿಂದ ನಿಯೋಜಿಸಿ, ಯಾವುದೇ ಘಟನೆಗಳು ನಡೆದ ರೀತಿಯಲ್ಲಿ ಕ್ರಮವಹಿಸಬೇಕು. – **ಅನಿಲ್ ಚಿಕ್ಕಮಾದು, ಶಾಸಕರು.**

> ಹಾಡಿಗಳಲ್ಲಿ ವಾಸಿಸುವವರು ಸಂಜೆ ಹಾಗೂ ಮುಂಜಾನೆ ಓಡಾಟವನ್ನು ಕಡಿಮೆ ಮಾಡಬೇಕು. ಉದ್ಬೂರು ಸಮೀಪದಿಂದ ತಾರಕ ಜಲಾಶಯದವರೆಗೂ ಸುಮಾರು 12 ಕಿ.ಮೀ. ಕಂದಕಗಳಿದ್ದು ಆನೆಗಳು ಈ ಭಾಗದಲ್ಲಿ ಬರಲು ಸಾಧ್ಯವಿಲ್ಲ, ಮೇಟಿಕುಪ್ಪೆ ಸಮೀಪ ಕಂದಕಗಳ ಸಮಸ್ಯೆಯಿದ್ದು, ಶೀಘ್ರವೇ ಇದನ್ನು ಸರಿಪಡಸುತ್ತೇವೆ. – **ಮಹೇಶ್‌ಕುಮಾರ್, ಡಿಸಿಎಫ್**

ನಾಳೆ ಬುದ್ಧ, ಬಸವ, ಅಂಬೇಡ್ಕರ್ ಮಾರ್ಗದೆಡೆಗೆ ನಮ್ಮ ಚಿಂತನೆ ಕಾರ್ಯಕ್ರಮ



ತಿ.ನರಸೀಪುರ, ಜೂ.9(ಎಸ್‌ಕೆ)– ವಿವಿಧ ಸಂಘಟನೆಗಳು ಹಾಗೂ ಎಲ್ಲಾ ಸಮುದಾಯಗಳ ಸಹಯೋಗದಲ್ಲಿ ಬಸವ ಜಯಂತಿ ಪ್ರಯುಕ್ತ ಬುದ್ಧ, ಬಸವ, ಅಂಬೇಡ್ಕರ್ ಮಾರ್ಗದೆಡೆಗೆ ನಮ್ಮ ಚಿಂತನೆ ಹಾಗೂ ಜಾತಿ ಧರ್ಮ ದೇಶ ಭಾಷೆ ಗಡಿ ಮೀರಿದ ಬಸವ ತತ್ವಸಾರ ಅರಿಯೋಣ ಕಾರ್ಯಕ್ರಮ ದಲಿತ ಸಂಘರ್ಷ ಸಮಿತಿಯಿಂದ ಜೂ. 11ರಂದು ಆಯೋಜಿಸಲಾಗಿದೆ ಎಂದು ದಸಂಸ ಜಿಲ್ಲಾ ಸಂಚಾಲಕಿ ಆಲಗೂಡು ಸಿ.ಉಮಾ ಮಹದೇವು ತಿಳಿಸಿದರು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಪಟ್ಟಣದ ಶ್ರೀಮಹದೇಶ್ವರ ಕಲ್ಯಾಣ ಮಂಟಪದಲ್ಲಿ (ವೆಂಕಟರಮಣ ಸ್ವಾಮಿ ದೇವಾಲಯದ ಪಕ್ಕ) ಸರ್ವ ಧರ್ಮ ಸಮುದಾಯಗಳ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಬಸವ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಕಾರ್ಯಕ್ರಮವನ್ನು ಶಾಸಕ ಪ್ರಿಯಾಂಕ ಖರ್ಗೆ ಉದ್ಘಾಟಿಸಲಿದ್ದು, ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಕೊಳ್ಳೇಗಾಲ ಬುದ್ಧ ವಿಹಾರದ ಮನೋರಖ್ಖಿತ ಬಂತೇಜಿ, ತಿ.ನರಸೀಪುರದ ಗುರುಗಳಾದ ಫಾದರ್ ಅಂತೋಣಿ ರಾಜ್, ಮಹಮ್ಮದ್ ಉಮರ್ ಮಸ್ಜಿದ್ ನೂರ್ ಸಾನ್ನಿಧ್ಯ ವಹಿಸುವರು.

ಸೇವಾ ಶ್ರೇಯ ಫೌಂಡೇಷನ್ ಅಧ್ಯಕ್ಷ ಮಣಿಕಂಠ ರಾಜು ಗೌಡ, ಉಪನ್ಯಾಸಕ ಕುಮಾರಸ್ವಾಮಿ, ಬಾಬು ಜಗಜೀವನ್ ರಾಮ್ ತಾಲೂಕು ಅಧ್ಯಕ್ಷ ಮಲೆಯೂರು ಶಂಕರ್, ಮುಖಂಡರಾದ ಕುಮಾರಸ್ವಾಮಿ, ಶಂಕರ್, ನಿಂಗರಾಜು, ಶಿವನಂಜು, ಅಯ್ಯಪ್ಪ ಸಿದ್ದಲಿಂಗ ಮೂರ್ತಿ, ಮಡಿವಾಳರ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಮಹದೇವ ಸ್ವಾಮಿ, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ರಾದ ಮಹದೇವ, ಶಿವರಾಜ್, ತಾಲೂಕು ಸಂಚಾಲಕರಾದ ಸಿದ್ದರಾಜು, ಮಲ್ಲೇಶ್, ರಾಜು, ಮಹದೇವ, ಮಹೇಶ್, ಕುಮಾರ್ ಹಾಜರಿದ್ದರು.

ಸಂಭ್ರಮದಿಂದ ಜರುಗಿದ ಗಣಪತಿ ದೇವಾಲಯದ ವಾರ್ಷಿಕೋತ್ಸವ



ಬೈಲಕುಪ್ಪೆ, ಜೂ.9(ರಾಜೇಶ್)– ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆ ಗ್ರಾಮದಲ್ಲಿ ಗುರುವಾರ ಗಣಪತಿ ದೇವಾಲಯದ 13ನೇ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ಗಣಪತಿ ದೇವಾಲಯದ ಆವರಣವನ್ನು ವಿದ್ಯುತ್ ದೀಪ, ತಳಿರು ತೋರಣ, ಬಣ್ಣ–ಬಣ್ಣದ ಹೂವುಗಳಿಂದ ಅಲಂಕರಿಸಲಾಗಿತ್ತು. ಚಂಡೆ ವಾದ್ಯದೊಂದಿಗೆ ಸಮಿತಿ ಪದಾಧಿಕಾರಿಗಳು ಅರ್ಚಕರು ಮತ್ತು ಸಾರ್ವಜನಿಕರು ಪೂಜಾ ಕೈಂಕರ್ಯಕ್ಕೆ ಚಾಲನೆ ನೀಡಿದರು. ಮಧ್ಯಾಹ್ನ ಮಹಾಪೂಜೆ ನಡೆಯಿತು. ನಂತರ ತೀರ್ಥ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು. ಸಂಜೆ ದೇವರನ್ನು ಭವ್ಯ ಮಂಟಪದಲ್ಲಿ ಅಲಂಕರಿಸಿ ಕೇರಳದ ಚಂಡೆ ವಾದ್ಯದೊಂದಿಗೆ ಪಟಾಕಿ ಸಿಡಿಸುವುದರೊಂದಿಗೆ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಗಣಪತಿ ಸಮಿತಿ ಅಧ್ಯಕ್ಷ ವಿಜಯ್‌ಕುಮಾರ್, ಸುಬ್ರಹ್ಮಣ್ಯ, ನಿಸರ್ಗ ಸ್ವಾಮಿ, ಬಿ.ಮಂಜುನಾಥ್, ಟೈಲರ್ ಮಂಜುನಾಥ್, ರಾಮಕೃಷ್ಣ, ಮಿಲಿಟರಿ ಜಗದೀಶ್, ಕಾಂತರಾಜ್‌ಶೆಟ್ಟಿ ಲೋಕೇಶ್, ಎಲ್.ಶಾಸ್ತ್ರಿ, ಸುರೇಶ್, ಮಂಜುನಾಥ್ ಲೋಕೇಶ್ ಇದ್ದರು.

ವಿಜೃಂಭಣೆಯ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ



ಸರಗೂರು, ಜೂ.9(ನಾಗೇಶ್)– ಪಟ್ಟಣದಲ್ಲಿ ಶ್ರೀಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನೂರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ರಥೋತ್ಸವದ ಅಂಗವಾಗಿ ಪಟ್ಟಣದ 7ನೇ ವಾರ್ಡ್‌ನಲ್ಲಿರುವ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯವನ್ನು ತಳಿತೋರಣ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು

ಉತ್ಸವ ಮೂರ್ತಿಗೆ ಗಂಗೆ ಪೂಜೆ, ವಿವಿಧ ಹೋಮ–ಹವನ ನಡೆಸಿದ ಬಳಿಕ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ, ಮಂಗಳ ವಾದ್ಯದೊಂದಿಗೆ ಮೆರವಣಿಗೆ ಮೂಲಕ ಉತ್ಸವ ಮೂರ್ತಿಯನ್ನು ತರಲಾಯಿತು. ನಂತರ ವಿವಿಧ ಹೂವಿನಿಂದ ಅಲಂಕೃತಗೊಂಡ ರಥೋತ್ಸವದಲ್ಲಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು. ನೂರಾರು ಭಕ್ತರ ಜಯಘೋಷದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ರಥೋತ್ಸವ ನಡೆಸಲಾಯಿತು. ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಈ ವೇಳೆ ಪ್ರಧಾನ ಅರ್ಚಕರಾದ ಕಸ್ತೂರಿ, ಕೇಶವಾ, ಬಾಲಕೃಷ್ಣ ಎಸ್.ಎಂ.ಶ್ರೀವತ್ಸ, ಚಕ್ರವರ್ತಿ, ಕೃಣ್ಣವಾಚಾರ್, ಎಸ್.ವರದರಾಜು, ನರಸಿಂಹಚಾರ್, ಮೋಹನ್‌ಚಾರ್, ಲಕ್ಷ್ಮೀನರಸಿಂಹ, ಶ್ರೀನಿವಾಸಚಾರ್, ಆಗಮಿಕರು, ಪಪಂ ಸದಸ್ಯ ವೀರೇಶ್, ಸೇರಿದಂತೆ ಎಲ್ಲಾ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ

ತಿ.ನರಸೀಪುರ, ಜೂ.9(ಎಸ್‌ಕೆ)– ದಕ್ಷಿಣ ಪದವೀಧರ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ವರುಣಾ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಭೇಟಿ ನೀಡಿ, ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತಯಾಚಿಸಿದರು.

ಈ ವೇಳೆ ಗ್ರಾಮಾಂತರ ಮಹಿಳಾ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ.ಮಹದೇವಯ್ಯ, ತಾಪಂ ಸದಸ್ಯ ಕೃಷ್ಣಮೂರ್ತಿ, ವರುಣಾ ಕ್ಷೇತ್ರದ ಎಸ್‌ಸಿ ಮೋರ್ಚಾ ಅಧ್ಯಕ್ಷ ಗಿರಿಧರ್, ಉಪಾಧ್ಯಕ್ಷ ಆಲಗೂಡು ಮಂಜು, ಪ್ರಧಾನ ಕಾರ್ಯದರ್ಶಿ ಗಣೇಶ್, ನ್ಯಾಯ ಮಂಡಳಿ ಸದಸ್ಯ ಶ್ರೀಧರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜು, ಎಸ್‌ಸಿ ಮೋರ್ಚಾ ಅಧ್ಯಕ್ಷ ಗಿರಿಧರ್ ಇದ್ದರು.



ಕಾಂಗ್ರೆಸ್ ಪರ ಅನಿಲ್ ಚಿಕ್ಕಮಾದು ಮತಯಾಚನೆ



ಹೆಚ್.ಡಿ.ಕೋಟೆ, ಜೂ.9(ಮಂಜು)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಪಟ್ಟಣದ ವಕೀಲರ ಸಂಘದ ಕಚೇರಿಯಲ್ಲಿ ವಕೀಲರನ್ನು ಭೇಟಿ ಮಾಡಿದ ಶಾಸಕ ಅನಿಲ್ ಚಿಕ್ಕಮಾದು ಮತಯಾಚಿಸಿದರು. ಈ ಸಂದರ್ಭದಲ್ಲಿ ಪುರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹೆಚ್.ಸಿ. ನರಸಿಂಹಮೂರ್ತಿ, ಮುಖಂಡ ಸತೀಶ್‌ಗೌಡ, ಸರಗೂರು ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ವಕೀಲರ ಸಂಘದ ಅಧ್ಯಕ್ಷ ಎ.ಸಿ.ರವಿಕುಮಾರ್, ವಕೀಲರಾದ ಹೆಚ್.ಎಸ್.ದಿನೇಶ್, ಸದಾಶಿವಪ್ಪ, ಟಿ. ಲೋಕೇಶ್, ರಾಮನಾಯಕ, ಮಹದೇವಸ್ವಾಮಿ, ಹನುಮೇಶ್ ಇದ್ದರು.

ಮಹೇಶ್ ನಿಧನ

ಸರಗೂರು, ಜೂ.9(ನಾಗೇಶ್)– ಪಟ್ಟಣದ 4ನೇ ವಾರ್ಡ್‌ನ ನಿವಾಸಿ ಮಹೇಶ್ (42) ಬುಧವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಪಟ್ಟಣದ ಅಂಬೇಡ್ಕರ್ ರುದ್ರಭೂಮಿಯಲ್ಲಿ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸರ್ವರ ಉದ್ಧಾರದ ಸಂಜೀವಿನಿ ವಿದ್ಯೆ: ಸಾಹಿತಿ ಬನ್ನೂರು ರಾಜು



ಹುಣಸೂರು, ಜೂ.9(ಕೆಕೆ)– ವಿದ್ಯೆ ಭವಿಷ್ಯವನ್ನು ಉಜ್ವಲಗೊಳಿಸಿದರೆ, ಅವಿದ್ಯೆ ಬದುಕನ್ನು ಕತ್ತಲೆ ಮಾಡಿ ಭವಿಷ್ಯವನ್ನೇ ನಾಶ ಮಾಡುತ್ತದೆ ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು. ತಾಲೂಕಿನ ಮನುಗನಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಮೈಸೂರಿನ ಪ್ರತಿಷ್ಠಿತ ಸಾಹಿತ್ಯ ಮತ್ತು ಶಿಕ್ಷಣ ಸೇವಾ ಸಂಸ್ಥೆಗಳಾದ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದ ಸಂಯುಕ್ತ ಆಶ್ರಯ ದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯೆಯೆಂಬುದು ಸರ್ವರನ್ನೂ ಉದ್ಧಾರ ಮಾಡುವ ಸಂಜೀವಿನಿಯಾಗಿದ್ದು, ಇಂಥಾ ಅಮೃತವನ್ನು ನಿರ್ವಂಚನೆಯಿಂದ ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಕರು ಕೂಡ ಅಮೃತಮಯವಾದ ಸಂಜೀವಿನಿಗಳೆಂದ ಅವರು, ಪ್ರತಿಯೊಬ್ಬರೂ ವಿದ್ಯೆಗೆ ಮಹತ್ವ ನೀಡಬೇಕು ಎಂದರು.

ಕಲಾವಿದೆ ಹಾಗೂ ಲೇಖಕಿ ಡಾ.ಜಮುನಾರಾಣಿ ಮಿರ್ಲೆ ಅವರು ಪ್ರಸ್ತುತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉನ್ನತ ಸ್ಥಾನ ಗಳಿಸಿ ತೇರ್ಗಡೆಯಾಗಿರುವ ಶಾಲೆಯ ವಿದ್ಯಾರ್ಥಿಗಳಾದ ಪಿ.ರಂಜಿತಾ, ಪಿ.ಎಂ.ಮಲ್ಲಿಕಾರ್ಜುನ, ಸಿ.ಎಸ್.ಬಿಂದು, ಕಾವ್ಯ ಹುಲ್ಲೇನಹಳ್ಳಿ, ಬಸವಣ್ಣ ಸಿ.ಎಂ.ಕೀರ್ತನಾ, ಶಾಲಿನಿ ಹಾಗೂ ಕಾವ್ಯ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲೆಯ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ಎಂ.ಶ್ರೇಯಸ್, ಸಿ.ಆರ್.ಶ್ವೇತಾ, ಎಂ.ಲೋಕೇಶ್, ಸಂಜು ಹಾಗೂ ಅರವಿಂದ್ ಅವರಿಗೆ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಅವರು ಬಹುಮಾನ ನೀಡಿದರು.

ಕಾರ್ಯಕ್ರಮದಲ್ಲಿ ವಿಶ್ರಾಂತ ಇಂಜಿನಿಯರ್ ಗೋವಿಂದೇಗೌಡ, ಸಂಖ್ಯಾಶಾಸ್ತ್ರಜ್ಞ ಎನ್.ಜಿ.ಸೀತಾರಾಂ, ಮುಖ್ಯ ಶಿಕ್ಷಕಿ ಸಿ.ಎನ್.ಗೀತಾ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಶಿಕ್ಷಕರಾದ ಎಚ್.ಶಶಿಕಲಾ, ಎಂ.ಜಿ.ಪುಷ್ಪ, ಸಿ.ಎಸ್.ರಮಾ, ಎಸ್.ಎಸ್.ಚಂದ್ರಕಲಾ, ಸೌಮ್ಯಾ, ಜೆ.ವಸಂತಕುಮಾರಿ, ಹೆಚ್.ಸಿ.ಪಲ್ಲವಿ ಇದ್ದರು.

ಮೊದಲ ಟಿ20: ಭಾರತಕ್ಕೆ ಸೋಲು

ಡೆಲ್ಲಿ, ಜೂ.9– ಡೇವಿಡ್ ಮಿಲ್ಲರ್, ರಾಸ್ಸಿ ವ್ಯಾನ್‌ಡೆರ್ ಡುಸ್ಸೆನ್ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಭಾರತದ ವಿರುದ್ಧ ದಕ್ಷಿಣ ಆಫ್ರಿಕಾ 7 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಈ ಮೂಲಕ 5 ಪಂದ್ಯಗಳ ಟಿ20 ಸರಣಿಯಲ್ಲಿ 1–0 ಅಂತರದಲ್ಲಿ ಮುನ್ನಡೆ ಸಾಧಿಸಿದೆ.



ಇಲ್ಲಿನ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 211ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರವಾಗಿ ಇಶಾನ್‌ಕಿಶಾನ್ 76, ಋತುರಾಜ್ ಗಾಯ್ಕವಾಡ್ 23, ಶ್ರೇಯಸ್ ಅಯ್ಯರ್ 36, ರಿಷಬ್‌ಪಂತ್ 29, ಹಾರ್ದಿಕ್‌ಪಾಂಡ್ಯ 31ರನ್ ಗಳಿಸಿದರು. ಬೌಲಿಂಗ್‌ನಲ್ಲಿ ದಕ್ಷಿಣ ಆಫ್ರಿಕಾ ಪರವಾಗಿ ಕೇಶವ್ ಮಹಾರಾಜ್, ಎನ್ರಿಚ್ ನೊರ್ಜೆ, ಪರ್ನೆಲ್, ಪ್ರಿಟೋರಿಯಸ್ ತಲಾ ಒಂದೊಂದು ವಿಕೆಟ್ ಪಡೆದರು.

212ರನ್‌ಗಳ ಗುರಿ ಬೆನ್ನತ್ತಿದ್ದ ದಕ್ಷಿಣ ಆಫ್ರಿಕಾ 19.1 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 212ರನ್ ಗಳಿಸಿ ಗೆಲುವಿನ ಕೇಕೆ ಹಾಕಿತು. ತಂಡದ ಪರವಾಗಿ ಕ್ವಿಂಟನ್ ಡಿ ಕಾಕ್ 22, ತೆಂಬ ಬವುಮಾ 10, ಡ್ವೇನ್ ಪ್ರಿಟೋರಿಯಸ್ 29, ಡೇವಿಡ್ ಮಿಲ್ಲರ್ ಅಜೇಯ 64, ರಾಸ್ಸಿ ವ್ಯಾನ್‌ಡೆರ್ ಡುಸ್ಸೆನ್ 75ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಭಾರತದ ಪರವಾಗಿ ಭುವನೇಶ್ವರ್‌ಕುಮಾರ್, ಹರ್ಷಲ್‌ಪಟೇಲ್, ಅಕ್ಷರ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಮಾಡಿದ ಡೇವಿಡ್ ಮಿಲ್ಲರ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಗ್ರಾಮದ ಜಗನ್ನಾಥ್ ಶರ್ಮಾ ಹಾಗೂ ಟಿ.ಆರ್.ನರೇಂದ್ರನಾಥ್ ಅವರು ಯುಪಿಎಸ್ ಅನ್ನು ಕೊಡುಗೆಯಾಗಿ ನೀಡಿದರು. ಈ ವೇಳೆ ಮುಖ್ಯಶಿಕ್ಷಕ ಬೆಳ್ಳಿಗೌಡ, ಹರ್ಷ, ಎಸ್‌ಡಿಎಂಸಿ ಅಧ್ಯಕ್ಷ ಸಿ.ಮಾದೇಶ, ದೀಪಶ್ರೀ ಹಾಜರಿದ್ದರು.

PUBLIC NOTICE

Notice is hereby given that **SRI.V. PURUSHOTHAM,** son of Sri.M.R.Venkatesh, is desirous to sell the under mentioned property to my client and any person or persons claiming any interest on the property or any part thereof, is hereby required to communicate the same to me with documentary evidence at my Office, situated at **DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002,** within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Site No.778, situated at Vijayanagar, 1st Stage, Mysore, site measuring East to West – 12 Meters and North to South – 18 Meters, totally measuring 216 Square Meters and bounded on East– Site No.777, West – Site No. 779, North – Site No. 773 & 774 and South – Road.

Sd/-Dhirendra Kumar R. Mehta
Advocate
KEY-ANS LAW SOLUTIONS
Date: 09.06.2022
Place: Mysore

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕೃಷಿ ಇಲಾಖೆ
ಸಹಾಯಕ ಕೃಷಿ ನಿರ್ದೇಶಕರ ಕಛೇರಿ
ತಿ–ನರಸೀಪುರ.

Telephone No. : 08227-261435 E-mail: adatnpur@rediffmail.com

ಸಂಖ್ಯೆ: ಸಕೃತಿ/ತಿನಪು/ಲೆಕ್ಕ–2/ವಾ.ಬಾ/ಟೆಂ.ಪ್ರ/2022–23 ದಿನಾಂಕ: 08–06–2022

ಟೆಂಡರ್ ಪ್ರಕಟಣೆ

2022–23 ನೇ ಸಾಲಿಗೆ ಸಹಾಯಕ ಕೃಷಿ ನಿರ್ದೇಶಕರು, ತಿ–ನರಸೀಪುರ ರವರ ಕಛೇರಿಯ ತಿ.ನರಸೀಪುರ ತಾಲ್ಲೂಕಿನಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರವಾಸ ಕೈಗೊಳ್ಳಲು ಹೊರಗುತ್ತಿಗೆ ಆಧಾರದ ಮೇಲೆ ಒಂದು ವಾಹನದ (ಕಾರು) ಅವಶ್ಯಕತೆ ಇದ್ದು, ಅಧಿಕೃತ (ನೋಂದಾಯಿತ) ಟ್ರಾವೆಲ್ ಏಜೆನ್ಸಿಗಳಿಂದ ವಾಹನ ಸರಬರಾಜು ಮಾಡಬಯಸುವ ಟೆಂಡರ್‌ದಾರರು (ಟ್ರಾವೆಲ್ ಏಜೆನ್ಸಿಗಳು) ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ನಿಬಂಧನೆಗಳಿಗೆ ಒಳಪಟ್ಟು ಆಹ್ವಾನಿಸಲಾಗಿದೆ.

1	ಟೆಂಡರ್ ಅರ್ಜಿ ಬೆಲೆ	ರೂ.100/–
2	ಟೆಂಡರ್ ಅರ್ಜಿ ವಿತರಿಸುವ ದಿನಾಂಕ	08–06–2022 ರಿಂದ 18–06–2022 ರವರೆಗೆ ಅಪರಾಹ್ನ 3.00 ಗಂಟೆಯೊಳಗೆ
3	ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ	24–06–2022 ಸಂಜೆ 5.00 ಗಂಟೆಯೊಳಗೆ
4	ಟೆಂಡರ್ ತೆರೆಯುವ ದಿನಾಂಕ	28–06–2022 ಬೆಳಿಗ್ಗೆ 11.00 ಗಂಟೆಗೆ
5	ಟೆಂಡರ್ ತೆರೆಯುವ ಸ್ಥಳ	ಸಹಾಯಕ ಕೃಷಿ ನಿರ್ದೇಶಕರ ಕಛೇರಿ ತಿ.ನರಸೀಪುರ.
6	ಇ.ಎಂ.ಡಿ. ಮೊಬಲಗು (ಡಿ.ಡಿ) (ಒಂದು ವಾಹನಕ್ಕೆ)	ರೂ.8500/–
7	ಡಿ.ಡಿ. ತೆಗೆಯಬೇಕಾದ ವಿಳಾಸ	ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿ.ನರಸೀಪುರ.

ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿ.ನರಸೀಪುರ ಇವರ ಹೆಸರಿನಲ್ಲಿ ರೂ.100/– ನೀಡಿ ಟೆಂಡರ್ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತಿ.ನರಸೀಪುರ ಇವರಿಂದ ಪಡೆಯಬಹುದು. ಟೆಂಡರಿನ ಷರತ್ತುಗಳ ಇನ್ನಿತರೆ ವಿವರಗಳನ್ನು ಈ ಕಛೇರಿ ವತಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿ.ನರಸೀಪುರ.

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005

ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–1:462:2022–23 ದಿನಾಂಕ: 26–05–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ

ಮೈಸೂರು ತಾಲ್ಲೋಕು, ಕಸಬಾ ಹೋಬಳಿ, ಹೂಟಗಳ್ಳಿ ಗ್ರಾಮದ ಸರ್ವೆ ನಂ. 25 ಮತ್ತು 26 ರ ಒಟ್ಟು 1290.19 ಚ.ಮೀ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ಸಾರ್ವಜನಿಕ ಉಪಯುಕ್ತತೆಯಿಂದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಲೆಕ್ಕಾಧಿಕಾರಿಗಳ ಸಂಘದ ಸದಸ್ಯರ ಕ್ಷೇಮಾಭಿವೃದ್ಧಿ ಕಟ್ಟಡ ನಿರ್ಮಿಸುವ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಟಿ.ಎಲ್ & ಎಸ್.ಎಸ್. ಕೆ.ಪಿ.ಟಿ.ಸಿ.ಎಲ್ ಹೂಟಗಳ್ಳಿ ವಿಭಾಗ, ಎಫ್.ಟಿ.ಎಸ್. ಮೈಸೂರು ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ " ಕಟ್ಟಡ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ಕ್ಷೇಮಾಭಿವೃದ್ಧಿ ಕಟ್ಟಡದಲ್ಲಿ ವರ್ಷ ಪೂರ್ತಿ ನೌಕರರಿಗೆ ಕೆಲಸಗಳು ದೊರೆಯುತ್ತದೆ ಮತ್ತು ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು